Re. No. D. 221

सत्यमेव जयते

# भारत का राजपत्र
# The Gazette of India
# ಭಾರತ ರಾಜಪತ್ರ

**( EXTRAORDINARY )**
( ವಿಶೇಷ ಸಂಚಿಕೆ )

भाग IX अनुभाग 1
PART IX SECTION 1
ಭಾಗ IX ವಿಭಾಗ 1

प्राधिकार से प्रकाशित
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ.

| | | | |
|---|---|---|---|
| सं. १ | नई दिल्ली, सोमवार, जून ८, २०२० | ज्येष्ठ २६, १९४२ (शका) | खंड ५० |
| No. 1 | New Delhi, Monday, June 8, 2020 | Jyeshta 26, 1942 (Saka) | Vol. 50 |
| ನಂ. ೧ | ನವ ದೆಹಲಿ, ಸೋಮವಾರ, ಜೂನ್ ೮, ೨೦೨೦ | ಜ್ಯೇಷ್ಠ ೨೬, ೧೯೪೨ (ಶಕ) | ಸಂಪುಟ ೫೦ |


**Ministry of Law and Justice**
Legislative Department
New Delhi, 08th June, 2020

**ಕಾನೂನು ಮತ್ತು ನ್ಯಾಯ ಮಂತ್ರಾಲಯ**
**ವಿಧಾಯೀ ಇಲಾಖೆ**
**ನವದೆಹಲಿ, 08ನೇ ಜೂನ್ 2020**

The Translation in Kannada of the following Acts, namely:- (1) The Official Trustees Act, 1913 (2 of 1913) (2) The Factories Act, 1948 (63 of 1948) (3) The Chit Funds Act, 1982 ( 40 of 1982) (4) The Sexual Harassment of Women at Work Place (Prevention, Prohibition and Redressal) Act, 2013 (14 of 2013) (5) The National Food Security Act, 2013 (20 of 2013) - are hereby published under the authority of the President and shall be deemed to be authoritative text thereof in Kannada under clause (a) of Section 2 of the Authoritative Texts (Central Laws) Act, 1973 (50 of 1973)

ಈ ಕೆಳಕಂಡ ಅಧಿನಿಯಮಗಳು ಎಂದರೆ:- (1) ಅಧಿಕೃತ ನ್ಯಾಸಧಾರಿಗಳ ಅಧಿನಿಯಮ, 1913 (1913ರ 2) (2) ಕಾರ್ಖಾನೆಗಳ ಅಧಿನಿಯಮ, 1948 (1948ರ 63) (3) ಚಿಟ್ ಫಂಡ್‌ಗಳ ಅಧಿನಿಯಮ, 1982 (1982ರ 40) (4) ಕೆಲಸದ ಸ್ಥಳದಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ (ಪ್ರತಿಬಂಧ, ನಿವಾರಣೆ ಮತ್ತು ಪರಿಹಾರ) ಅಧಿನಿಯಮ, 2013 (2013ರ 14) (5) ರಾಷ್ಟ್ರೀಯ ಆಹಾರ ಭದ್ರತೆ ಅಧಿನಿಯಮ, 2013 (2013ರ 20)- ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 (1973 ರ 50) ರ 2ನೇ ಪ್ರಕರಣದ (ಎ) ಖಂಡದ ಮೇರೆಗೆ ಇದನ್ನು ಈ ಅಧಿನಿಯಮದ ಅಧಿಕೃತ ಕನ್ನಡ ಪಾಠವೆಂದು ಭಾವಿಸತಕ್ಕದ್ದು.

# ಚಿಟ್ ಫಂಡ್‌ಗಳ ಅಧಿನಿಯಮ, 1982

## (1982ರ ಅಧಿನಿಯಮ ಸಂಖ್ಯೆ 40)

[ಆಗಸ್ಟ್ 19, 1982]

**(ಕೇಂದ್ರ ಅಧಿನಿಯಮ ಸಂಖ್ಯೆ.10/2001 ಮತ್ತು ಕರ್ನಾಟಕ ಅಧಿನಿಯಮ ಸಂಖ್ಯೆ.2/2008 ರಿಂದ ತಿದ್ದುಪಡಿಯಾದಂತೆ)**

ಚಿಟ್ ಫಂಡ್‌ಗಳ ವ್ಯವಹಾರವನ್ನು ನಿಯಂತ್ರಿಸುವುದಕ್ಕೆ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಇದು, ಭಾರತ ಗಣರಾಜ್ಯದ ಮೂವತ್ತ ಮೂರನೆ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:

### ಅಧ್ಯಾಯ – I

### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಚಿಟ್ ಫಂಡ್‌ಗಳ ಅಧಿನಿಯಮ, 1982 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ, ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು ಮತ್ತು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

2. **ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯ ಇದ್ದ ಹೊರತು,

(ಎ) **"ಅನುಮೋದಿತ ಬ್ಯಾಂಕು"** ಎಂದರೆ, ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 (1955ರ 23)ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಭಾರತೀಯ ಸ್ಟೇಟ್ ಬ್ಯಾಂಕು ಅಥವಾ ಭಾರತೀಯ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959 (1959ರ 38)ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಸಹಾಯಕ ಬ್ಯಾಂಕು, ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970 (1970ರ 5) ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಸಂವಾದಿ ಹೊಸ ಬ್ಯಾಂಕು, ಅಥವಾ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಅಧಿನಿಯಮ, 1976 (1976ರ 21)ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಅಥವಾ ಬ್ಯಾಂಕಿಂಗ್ ಕಂಪನಿಗಳ (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980ರ 40)ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಸಂವಾದಿ ಹೊಸ ಬ್ಯಾಂಕು, ಅಥವಾ ಬ್ಯಾಂಕಿಂಗ್ ವಿನಿಯಮ ಅಧಿನಿಯಮ, 1949 (1949ರ 10) ರ 5ನೇ ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಪರಿಭಾಷಿಸಲಾದಂತೆ ಬ್ಯಾಂಕಿಂಗ್ ಕಂಪನಿ, ಅಥವಾ ಕೇಂದ್ರ ಸರ್ಕಾರವು ಆ ಅಧಿನಿಯಮದ 51ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಬ್ಯಾಂಕಿಂಗ್ ಸಂಸ್ಥೆ ಅಥವಾ ರಾಜ್ಯ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಅನುಮೋದಿಸಬಹುದಾದಂಥ ಇತರೆ ಬ್ಯಾಂಕಿಂಗ್ ಸಂಸ್ಥೆ;

(ಬಿ) **"ಚೀಟಿ"** ಎಂದರೆ ಚೀಟಿ, ಚಿಟ್ ಫಂಡ್, ಚಿಟ್ಟಿ ಅಥವಾ ಕುರಿ ಅಥವಾ ಇತರ ಯಾವುದೇ ಹೆಸರಿನಿಂದ ಕರೆಯಲಾಗುವ, ಆ ಯಾವ ವ್ಯವಹಾರದ ಮೂಲಕ ಅಥವಾ ವ್ಯವಹಾರದ ಅಡಿಯಲ್ಲಿ ವ್ಯಕ್ತಿಯು ನಿರ್ದಿಷ್ಟಪಡಿಸಿದ ಸಂಖ್ಯೆಯ ವ್ಯಕ್ತಿಗಳೊಂದಿಗೆ, ಅವರಲ್ಲಿ ಪ್ರತಿಯೊಬ್ಬನೂ ನಿಶ್ಚಿತ ಅವಧಿಗೆ, ನಿಯತಕಾಲಿಕ ಕಂತುಗಳ ರೂಪದಲ್ಲಿ ಹಣದ ಒಂದು ನಿಶ್ಚಿತ ಹಣವನ್ನು (ಅಥವಾ ಅದಕ್ಕೆ ಬದಲಾಗಿ ನಿಶ್ಚಿತ ಪ್ರಮಾಣದ ಧಾನ್ಯವನ್ನು) ವಂತಿಗೆ ಕೊಡತಕ್ಕದ್ದೆಂಬ ಮತ್ತು ಅಂಥ ಪ್ರತಿಯೊಬ್ಬ ವಂತಿಗೆದಾರನು ಚೀಟಿ ಎತ್ತುವ ಮೂಲಕ ಅಥವಾ ಕೂಗುವ ಮೂಲಕ ಅಥವಾ ಕೊಡಲೊಪ್ಪಿದ ಪ್ರಕಾರ ಅಥವಾ ಆ ಚೀಟಿ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿರಬಹುದಾದಂಥ ಇತರೆ ರೀತಿಯಲ್ಲಿ ನಿರ್ಧರಿಸಲಾದಂತೆ ಅವನ ಸರದಿ ಬಂದಾಗ ಚೀಟಿ ಹಣಕ್ಕೆ ಹಕ್ಕುಳ್ಳವನಾಗಿರತಕ್ಕದ್ದೆಂಬ ಒಪ್ಪಂದವನ್ನು ಮಾಡಿಕೊಳ್ಳುತ್ತಾನೋ ಆ ಯಾವುದೇ ವ್ಯವಹಾರ.

**ವಿವರಣೆ :** – ಯಾವ ಅಂಥ ವ್ಯವಹಾರದಲ್ಲಿ, –

(i) ವಂತಿಗೆದಾರರಲ್ಲಿ ಎಲ್ಲರೂ ಅಲ್ಲದೆ, ಕೆಲವರು ಮಾತ್ರವೇ, ಮುಂದಿನ ವಂತಿಗೆ ಹಣದ ಸಂದಾಯ ಮಾಡುವ ಯಾವುದೇ ಹೊಣೆಗಾರಿಕೆಯಿಲ್ಲದೆ ಚೀಟಿ ಹಣ ಪಡೆಯುವಂತಿದ್ದರೆ; ಅಥವಾ

---

ಕರ್ನಾಟಕ ರಾಜ್ಯದಲ್ಲಿ ಜನವರಿ 2, 1984ರಿಂದ ಜಾರಿಗೆ ಬಂದಿದೆ. ಅಧಿಸೂಚನೆ ಎಸ್.ಓ 946 (ಇ) ಡಿಸೆಂಬರ್ 30, 1983, ಭಾರತ ಸರ್ಕಾರದ ವಿಶೇಷ ಗೆಜೆಟ್ ಭಾಗ II ವಿಭಾಗ (ii) ನೋಡಿ

(ii) ಎಲ್ಲಾ ವಂತಿಗೆದಾರರು ಮುಂದಿನ ವಂತಿಗೆಗಳನ್ನು ಸಂದಾಯ ಮಾಡುವ ಹೊಣೆಗಾರಿಕೆಯೊಂದಿಗೆ ತಮ್ಮ ಸರದಿಯಂತೆ ಚೀಟಿ ಹಣದ ಒಟ್ಟು ಮೊತ್ತವನ್ನು ಪಡೆಯುವಂತಿದ್ದರೆ,

– ಅಂಥ ವ್ಯವಹಾರವು ಈ ಖಂಡದ ಅರ್ಥವ್ಯಾಪ್ತಿಯೊಳಗೆ ಚೀಟಿ ಆಗುವುದಿಲ್ಲ.

(ಸಿ) **"ಚೀಟಿ ಒಪ್ಪಂದ"** ಎಂದರೆ, ಚೀಟಿಗೆ ಸಂಬಂಧಿಸಿದಂತೆ ಚೀಟಿ ವ್ಯವಹಾರ ನಿರ್ವಹಣೆ ಪ್ರವರ್ತಕ ಮತ್ತು ವಂತಿಗೆದಾರರ ನಡುವಿನ ಒಪ್ಪಂದದ ನಿಯಮಗಳನ್ನು ಒಳಗೊಂಡಿರುವ ದಸ್ತಾವೇಜು;

(ಡಿ) **"ಚೀಟಿ ಮೊಬಲಗು"** ಎಂದರೆ, ಎಲ್ಲ ವಂತಿಗೆದಾರರು, ಚೀಟಿಯ ಯಾವುದೇ ಕಂತಿನ ರೂಪದಲ್ಲಿ, ಯಾವುದೇ ರಿಯಾಯಿತಿಯ ಕಡಿತ ಇಲ್ಲದೆ ಅಥವಾ ಅನ್ಯಥಾ ಬೇರೆ ರೀತಿಯಲ್ಲಿ ಸಂದಾಯ ಮಾಡಬಹುದಾದ ವಂತಿಗೆ ಮೊಬಲಗಿನ ಒಟ್ಟು ಮೊತ್ತ;

(ಇ) **"ಚೀಟಿ ವ್ಯವಹಾರ"** ಎಂದರೆ, ಚೀಟಿಯನ್ನು ನಡೆಸುವ ವ್ಯವಹಾರ;

(ಎಫ್) **"ಸುಸ್ತಿ ವಂತಿಗೆದಾರ"** ಎಂದರೆ, ಯಾರು ಚೀಟಿ ಒಪ್ಪಂದ ನಿಬಂಧನೆಗಳಿಗನುಸಾರವಾಗಿ ಕೊಡಬೇಕಾಗಿರುವ ವಂತಿಗೆಗಳನ್ನು ಸಂದಾಯ ಮಾಡುವುದಿಲ್ಲವೋ ಆ ವಂತಿಗೆದಾರ;

(ಜಿ) **"ಸೋಡಿ"** ಎಂದರೆ ಚೀಟಿ ಹಣ ಪಡೆಯುವ ಅದೃಷ್ಟವಂತ ವಂತಿಗೆದಾರನು ಚೀಟಿ ಒಪ್ಪಂದದ ನಿಬಂಧನೆಗಳ ಪ್ರಕಾರ ಬಿಟ್ಟುಕೊಡಬೇಕಾಗಿರುವ ಮತ್ತು ಸದರಿ ಒಪ್ಪಂದದ ಪ್ರಕಾರ ಚೀಟಿಯನ್ನು ನಡೆಸುವುದಕ್ಕಾಗಿ ತಗುಲಿದ ವೆಚ್ಚಗಳನ್ನು ಭರಿಸಲು ಮತ್ತು ವಂತಿಗೆದಾರರಲ್ಲಿ ಹಂಚಿಕೆ ಮಾಡುವುದಕ್ಕಾಗಿ ಅಥವಾ ಅವೆರಡಕ್ಕಾಗಿ ಮೀಸಲಿಡಲಾದ ಹಣದ ಮೊತ್ತ ಅಥವಾ ಧಾನ್ಯದ ಪರಿಮಾಣ;

(ಹೆಚ್) **"ಲಾಭಾಂಶ"** ಎಂದರೆ, ಚೀಟಿ ಒಪ್ಪಂದದ ಪ್ರಕಾರ ಚೀಟಿಯ ಪ್ರತಿಯೊಂದು ಕಂತಿನಲ್ಲಿ ಬಿಟ್ಟು ಕೊಟ್ಟಿರುವ ಸೋಡಿ ಹಣದಲ್ಲಿ ವಂತಿಗೆದಾರರಿಗೆ ಪ್ರಮಾಣಾನುಸಾರ ಹಂಚಿಕೆ ಮಾಡುವುದಕ್ಕಾಗಿ ಲಭ್ಯವಿರುವ ವಂತಿಗೆದಾರನ ಪಾಲು;

(ಐ) **"ಚೀಟಿ ಎತ್ತುವುದು"** ಎಂದರೆ, ಚೀಟಿಯ ಯಾವುದೇ ಕಂತಿನ ಚೀಟಿ ಹಣ ಪಡೆಯುವ ಅದೃಷ್ಟವಂತ ವಂತಿಗೆದಾರನನ್ನು ಗುರುತಿಸಲು ನಿರ್ಧರಿಸುವ ಉದ್ದೇಶಕ್ಕಾಗಿ ಚೀಟಿ ಒಪ್ಪಂದ ಪತ್ರದಲ್ಲಿ ನಿರ್ದಿಷ್ಟಪಡಿಸಿದ ರೀತಿ;

(ಜೆ) **"ಚೀಟಿ ಪ್ರವರ್ತಕ"** ಎಂದರೆ ಚೀಟಿ ಒಪ್ಪಂದದ ಪ್ರಕಾರ ಚೀಟಿ ನಡೆಸುವುದಕ್ಕೆ ಜವಾಬ್ದಾರನಾದ ವ್ಯಕ್ತಿ ಮತ್ತು 39ನೇ ಪ್ರಕರಣದ ಅಡಿಯಲ್ಲಿ ಪ್ರವರ್ತಕನ ಪ್ರಕಾರ್ಯಗಳನ್ನು ನಿರ್ವಹಿಸುವ ಯಾರೇ ವ್ಯಕ್ತಿ ಒಳಗೊಳ್ಳುತ್ತಾನೆ;

(ಕೆ) **"ಅದೃಷ್ಟವಂತನಲ್ಲದ ವಂತಿಗೆದಾರ"** ಪದದ ವ್ಯಾಪ್ತಿಯಲ್ಲಿ ಸುಸ್ತಿ ವಂತಿಗೆದಾರನು ಒಳಗೊಳ್ಳುವುದಿಲ್ಲ;

(ಎಲ್) **"ನಿಯಮಿಸಿದ"** ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) **"ಬಹುಮಾನದ ಮೊಬಲಗು"** ಎಂದರೆ, ಚೀಟಿ ಎತ್ತಿದಾಗ ಬರುವ ಹಣದ ಒಟ್ಟು ಮೊತ್ತದ ಮತ್ತು ಸೋಡಿ ಬಿಟ್ಟ ಮೊಬಲಗಿನ ನಡುವಣ ವ್ಯತ್ಯಾಸದ ಮೊಬಲಗು ಮತ್ತು ಟಿಕೆಟಿನ ಭಾಗದ ಸಂದರ್ಭದಲ್ಲಿ, ಚೀಟಿ ಮೊಬಲಗು ಮತ್ತು ಅಂಥ ಭಾಗಕ್ಕೆ ಪ್ರಮಾಣಾನುಸಾರದ ಸೋಡಿ ಮೊಬಲಗು ಮತ್ತು ಬಹುಮಾನದ ಮೊಬಲಗನ್ನು ನಗದು ರೂಪದಲ್ಲಲ್ಲದೆ ಬೇರೆ ರೂಪದಲ್ಲಿ ಸಂದಾಯ ಮಾಡಬೇಕಾದಾಗ, ಬಹುಮಾನ ಮೊಬಲಗಿನ ಮೌಲ್ಯವು ಅದನ್ನು ಸಂದಾಯ ಮಾಡಬೇಕಾದ ಸಮಯದಲ್ಲಿ ಇದ್ದಂಥ ಮೌಲ್ಯವಾಗಿರತಕ್ಕದ್ದು;

(ಎನ್) **"ಅದೃಷ್ಟವಂತ ವಂತಿಗೆದಾರ"** ಎಂದರೆ, ಬಹುಮಾನ ಮೊಬಲಗನ್ನು ಸ್ವೀಕರಿಸಿದ ಅಥವಾ ಸ್ವೀಕರಿಸುವುದಕ್ಕೆ ಹಕ್ಕುಳ್ಳ ವಂತಿಗೆದಾರ ;

(ಓ) **"ರಿಜಿಸ್ಟ್ರಾರ್"** ಎಂದರೆ, 61ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಚೀಟಿಗಳ ರಿಜಿಸ್ಟ್ರಾರ್ ಮತ್ತು ಆ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಹೆಚ್ಚುವರಿ, ಜಂಟಿ, ಉಪ ಅಥವಾ ಸಹಾಯಕ ರಿಜಿಸ್ಟ್ರಾರ್ ಒಳಗೊಳ್ಳುತ್ತಾರೆ;

(ಪಿ) **"ರಿಸರ್ವ್ ಬ್ಯಾಂಕ್"** ಎಂದರೆ, ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2) ರ ಅಡಿಯಲ್ಲಿ ಸ್ಥಾಪಿತವಾದ ಭಾರತದ ರಿಸರ್ವ್ ಬ್ಯಾಂಕ್;

(ಕ್ಯೂ) ಕೇಂದ್ರಾಡಳಿತ ಪ್ರದೇಶದ ಸಂಬಂಧದಲ್ಲಿ **"ರಾಜ್ಯ ಸರ್ಕಾರ"** ಎಂದರೆ, ಸಂವಿಧಾನದ 239ನೇ ಅನುಚ್ಛೇದದ ಅಡಿಯಲ್ಲಿ ರಾಷ್ಟ್ರಪತಿಯವರಿಂದ ನೇಮಕಗೊಂಡ ಆ ಕೇಂದ್ರಾಡಳಿತ ಪ್ರದೇಶದ ಆಡಳಿತಗಾರ;

(ಆರ್) **"ವಂತಿಗೆದಾರ"** ಎಂಬುದರಲ್ಲಿ ಚೀಟಿಯಲ್ಲಿ ವಂತಿಗೆದಾರನ ಪಾಲಿನಲ್ಲಿನ ಒಂದು ಭಾಗವನ್ನು ಹೊಂದಿರುವ ವ್ಯಕ್ತಿ ಹಾಗೂ ಲಿಖಿತದಲ್ಲಿ ಹಸ್ತಾಂತರಣದ ಮೂಲಕ ಅಥವಾ ಕಾನೂನಿನ ಪ್ರವರ್ತನೆಯ ಮೂಲಕ ಆ ಪಾಲಿನ ಅಥವಾ ಅದರ ಭಾಗದ ವರ್ಗಾವಣೆ ಪಡೆದವನೂ ಸಹ ಒಳಗೊಳ್ಳುತ್ತಾನೆ;

(ಎಸ್) **"ಟಿಕೆಟ್"** ಎಂದರೆ ಚೀಟಿ ವ್ಯವಹಾರದಲ್ಲಿ ವಂತಿಗೆದಾರನ ಪಾಲು:

3. **ಈ ಅಧಿನಿಯಮವು ಇತರೆ ಕಾನೂನುಗಳು, ಜ್ಞಾಪನಾಪತ್ರ, ಅಂತರ್ನಿಯಮಾವಳಿಗಳು, ಮುಂತಾದವುಗಳ ಮೇಲೆ ಅಧ್ಯಾರೋಹಿ ಪರಿಣಾಮವುಳ್ಳದ್ದಾಗಿರತಕ್ಕದ್ದು.–** ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು,–

(ಎ) ತತ್ಕಾಲದಲ್ಲಿ ಜಾರಿಯಲ್ಲಿರುವ ಇತರೆ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವು ಪ್ರಾರಂಭವಾಗುವುದಕ್ಕೆ ಮುಂಚೆ ಅಥವಾ ಆ ನಂತರ, ಸಂದರ್ಭಾನುಸಾರ, ನೋಂದಾಯಿತ ಸಂಘದ ಸ್ಥಾಪನಾ

ದಾಖಲೆಯಲ್ಲಿ ಅಥವಾ ಸಂಘದ ಅಂತರ್ನಿಯಮಾವಳಿಗಳಲ್ಲಿ ಅಥವಾ ಉಪವಿಧಿಗಳಲ್ಲಿ ಅಥವಾ ಬರೆದು ಕೊಟ್ಟ ಯಾವುದೇ ಒಪ್ಪಂದದಲ್ಲಿ ಅಥವಾ ಅಂಗೀಕೃತವಾದ ಯಾವುದೇ ನಿರ್ಣಯದಲ್ಲಿ ತದ್ವಿರುದ್ಧವಾದುದು ಏನೇ ಇದ್ದರೂ ಈ ಅಧಿನಿಯಮದ ಉಪಬಂಧಗಳು ಅಧ್ಯಾರೋಹಿ ಪರಿಣಾಮವುಳ್ಳವುಗಳಾಗಿರತಕ್ಕದ್ದು; ಮತ್ತು

(ಬಿ) ಮೇಲೆ ಹೇಳಿದ ಸಂಘಸಂಸ್ಥಾಪನಾ ದಾಖಲೆಯಲ್ಲಿ, ಅಂತರ್ನಿಯಮಾವಳಿಯಲ್ಲಿ, ಉಪವಿಧಿಗಳಲ್ಲಿ, ಒಪ್ಪಂದ ಪತ್ರದಲ್ಲಿ ಅಥವಾ ನಿರ್ಣಯದಲ್ಲಿ ಒಳಗೊಂಡಿರುವ ಯಾವುದೇ ಉಪಬಂಧವು, ಅದು ಈ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿರುವಷ್ಟರ ಮಟ್ಟಿಗೆ, ಸಂದರ್ಭಾನುಸಾರ ಅನೂರ್ಜಿತವಾಗುತ್ತದೆ ಅಥವಾ ಅನೂರ್ಜಿತವಾಗತಕ್ಕದ್ದು.

## ಅಧ್ಯಾಯ – II

## ಚೀಟಿಗಳ ನೋಂದಣಿ, ಚೀಟಿ ವ್ಯವಹಾರವನ್ನು ಪ್ರಾರಂಭಿಸುವುದು ಮತ್ತು ನಡೆಸುವುದು

**4. ಈ ಅಧಿನಿಯಮದ ಅಡಿಯಲ್ಲಿ ಮಂಜೂರಾತಿ ಪಡೆಯದ ಅಥವಾ ನೋಂದಾಯಿತವಾಗದ ಚೀಟಿಗಳ ನಿಷೇಧ.**– (1) ಚೀಟಿಯನ್ನು ಯಾವ ರಾಜ್ಯ ಸರ್ಕಾರದ ಅಧಿಕಾರವ್ಯಾಪ್ತಿಯೊಳಗೆ ಪ್ರಾರಂಭಿಸಲಾಗುತ್ತದೆಯೋ ಅಥವಾ ನಡೆಸಲಾಗುತ್ತದೆಯೋ ಆ ರಾಜ್ಯ ಸರ್ಕಾರದ ಅಥವಾ ಈ ಬಗ್ಗೆ ಆ ರಾಜ್ಯ ಸರ್ಕಾರವು ಯಾವ ಅಧಿಕಾರಿಗೆ ಅಧಿಕಾರ ನೀಡುತ್ತದೋ ಆ ಅಧಿಕಾರಿಯ ಪೂರ್ವ ಮಂಜೂರಾತಿ ಪಡೆಯದೆ, ಮತ್ತು ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ಆ ರಾಜ್ಯದಲ್ಲಿ ಚೀಟಿಯನ್ನು ನೋಂದಾಯಿಸಿದ ಹೊರತು, ಯಾವುದೇ ಚೀಟಿಯನ್ನು ಪ್ರಾರಂಭಿಸತಕ್ಕದಲ್ಲ ಅಥವಾ ನಡೆಸತಕ್ಕದಲ್ಲ:

ಪರಂತು, ಈ ಉಪ–ಪ್ರಕರಣದ ಅಡಿಯಲ್ಲಿ ಪಡೆಯಲಾದ ಮಂಜೂರಾತಿಯು, ಅಂಥ ಮಂಜೂರಾತಿಯ ದಿನಾಂಕದಿಂದ ಹನ್ನೆರಡು ತಿಂಗಳುಗಳೊಳಗೆ ಅಥವಾ ಒಟ್ಟಾರೆಯಾಗಿ ರಾಜ್ಯ ಸರ್ಕಾರವು, ಈ ಬಗ್ಗೆ ಅದಕ್ಕೆ ಅರ್ಜಿ ಸಲ್ಲಿಸಿದಾಗ ಅನುಮತಿಸಬಹುದಾದಂತೆ ಆರು ತಿಂಗಳುಗಳಿಗೆ ಮೀರದ ಅಂಥ ಹೆಚ್ಚಿನ ಅವಧಿಯೊಳಗೆ ಅಥವಾ ಅವಧಿಗಳೊಳಗೆ ಚೀಟಿಯನ್ನು ನೋಂದಾಯಿಸದಿದ್ದರೆ ರದ್ದಾಗತಕ್ಕದ್ದು.

(2) (1)ನೇ ಉಪ–ಪ್ರಕರಣದ ಅಡಿಯಲ್ಲಿ ಮಂಜೂರಾತಿ ಪಡೆಯುವ ಉದ್ದೇಶಕ್ಕಾಗಿ ಅರ್ಜಿಯನ್ನು, ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ಪ್ರವರ್ತಕನು ಸಲ್ಲಿಸತಕ್ಕದ್ದು.

(3) ಪ್ರವರ್ತಕನು,–

(ಎ) ಈ ಅಧಿನಿಯಮದ ಅಡಿಯಲ್ಲಿನ ಅಥವಾ ಚೀಟಿ ವ್ಯವಹಾರವನ್ನು ನಿಯಂತ್ರಿಸುವ ಯಾವುದೇ ಇತರೆ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಅಂಥ ಯಾವುದೇ ಅಪರಾಧಕ್ಕಾಗಿ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದರೆ; ಅಥವಾ

(ಬಿ) ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಶುಲ್ಕವನ್ನು ಸಂದಾಯ ಮಾಡದಿದ್ದರೆ ಅಥವಾ ಸಲ್ಲಿಸಲು ಅಗತ್ಯಪಡಿಸಲಾದ ಯಾವುದೇ ವಿವರಣೆ ಅಥವಾ ದಾಖಲೆಯನ್ನು ಸಲ್ಲಿಸದಿದ್ದರೆ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಉಲ್ಲಂಘಿಸಿದ್ದರೆ; ಅಥವಾ

(ಸಿ) ನೈತಿಕ ಅಧಃಪತನವನ್ನೊಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದರೆ ಮತ್ತು ಯಾವುದೇ ಅಂಥ ಅಪರಾಧಕ್ಕಾಗಿ ಕಾರಾವಾಸ ಶಿಕ್ಷೆಗೆ ಒಳಗಾಗಿದ್ದರೆ, ಆತನು ಬಿಡುಗಡೆಯಾಗಿ ಐದು ವರ್ಷಗಳು ಕಳೆದಿದ್ದ ಹೊರತು;

– (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ಪೂರ್ವ ಮಂಜೂರಾತಿಯನ್ನು ನಿರಾಕರಿಸಬಹುದು:

ಪರಂತು, ಯಾವುದೇ ಅಂಥ ಮಂಜೂರಾತಿಯನ್ನು ನಿರಾಕರಿಸುವುದಕ್ಕೂ ಮೊದಲು, ಅಹವಾಲು ಹೇಳಿಕೊಳ್ಳಲು ಪ್ರವರ್ತಕನಿಗೆ ಒಂದು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿ ಪೂರ್ವ ಮಂಜೂರಾತಿಯನ್ನು ನೀಡುವ ಅಥವಾ ನಿರಾಕರಿಸುವ ರಾಜ್ಯ ಸರ್ಕಾರದ ಆದೇಶವು ಮತ್ತು (5)ನೇ ಉಪ–ಪ್ರಕರಣದ ಉಪಬಂಧಗಳಿಗೊಳಪಟ್ಟು, (1)ನೇ ಉಪ–ಪ್ರಕರಣದ ಅಡಿಯಲ್ಲಿ ಅಧಿಕಾರ ಪಡೆದಿರುವ ಅಧಿಕಾರಿಯ ಆದೇಶವು ಅಂತಿಮವಾಗಿರತಕ್ಕದ್ದು.

(5) ಉಪ–ಪ್ರಕರಣ (1)ರ ಅಡಿಯಲ್ಲಿ ಅಧಿಕಾರ ಪಡೆದ ಅಧಿಕಾರಿಯು ಪೂರ್ವ ಮಂಜೂರಾತಿಯನ್ನು ನೀಡಲು ನಿರಾಕರಿಸಿದ್ದರಿಂದ ಬಾಧಿತನಾದ ಯಾರೇ ವ್ಯಕ್ತಿಯು ಅಂಥ ನಿರಾಕರಣೆಯ ಬಗ್ಗೆ ತನಗೆ ತಿಳಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು ಮತ್ತು ಅಂಥ ಅಪೀಲಿನ ಮೇಲೆ ರಾಜ್ಯ ಸರ್ಕಾರವು ನೀಡುವ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

5. **ಕೆಲವು ಷರತ್ತುಗಳ ಅಡಿಯಲ್ಲಿ ಹೊರತುಪಡಿಸಿ ವಂತಿಗೆಗಳಿಗಾಗಿ ನೀಡುವ ಆಹ್ವಾನದ ನಿಷೇಧ.**– ಯಾರೇ ವ್ಯಕ್ತಿಯು ಯಾವುದೇ ಚೀಟಿಯಲ್ಲಿ ಟಿಕೆಟ್‌ಗಳಿಗಾಗಿ ವಂತಿಗೆ ನೀಡಲು ಸಾರ್ವಜನಿಕರನ್ನು ಆಹ್ವಾನಿಸುವ ಯಾವುದೇ ನೋಟೀಸ್, ಸುತ್ತೋಲೆ, ವಿವರಣ ಪತ್ರಿಕೆ, ಪ್ರಸ್ತಾವನೆ ಅಥವಾ ಇತರ ದಸ್ತಾವೇಜನ್ನು, ಅಂಥ ನೋಟೀಸ್, ಸುತ್ತೋಲೆ, ವಿವರಣ ಪತ್ರಿಕೆ, ಪ್ರಸ್ತಾವನೆ ಅಥವಾ

ದಸ್ತಾವೇಜು 4ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಿದ ಪೂರ್ವ ಮಂಜೂರಾತಿಯನ್ನು ಪಡೆಯಲಾಗಿದೆಯೆಂಬ ಹೇಳಿಕೆ ಮತ್ತು ಅಂಥ ಮಂಜೂರಾತಿಯ ವಿವರಗಳನ್ನು ಒಳಗೊಂಡಿದ್ದ ಹೊರತು ನೀಡತಕ್ಕದ್ದಲ್ಲ ಅಥವಾ ನೀಡುವಂತೆ ಮಾಡತಕ್ಕದ್ದಲ್ಲ.

6. **ಚೀಟಿ ಒಪ್ಪಂದ ಪತ್ರದ ನಮೂನೆ.-** (1) ಪ್ರತಿಯೊಂದು ಚೀಟಿ ಒಪ್ಪಂದ ಪತ್ರವು ದ್ವಿಪ್ರತಿಯಲ್ಲಿರತಕ್ಕದ್ದು ಮತ್ತು ಅದಕ್ಕೆ ವಂತಿಗೆದಾರರಲ್ಲಿ ಪ್ರತಿಯೊಬ್ಬರೂ ಅಥವಾ ಅವನು ಲಿಖಿತದಲ್ಲಿ ಅಧಿಕೃತಗೊಳಿಸಲಾದ ಯಾರೇ ವ್ಯಕ್ತಿಯು ಮತ್ತು ಪ್ರವರ್ತಕನು ಸಹಿ ಮಾಡಿರತಕ್ಕದ್ದು ಮತ್ತು ಕನಿಷ್ಠ ಪಕ್ಷ ಇಬ್ಬರು ಸಾಕ್ಷಿದಾರರು ದೃಢೀಕರಿಸತಕ್ಕದ್ದು ಮತ್ತು ಅದು ಈ ಮುಂದಿನ ವಿವರಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:

(ಎ) ಪ್ರತಿಯೊಬ್ಬ ವಂತಿಗೆದಾರನ ಪೂರ್ಣ ಹೆಸರು ಮತ್ತು ಮನೆ ವಿಳಾಸ ;

(ಬಿ) ಪ್ರತಿಯೊಬ್ಬ ವಂತಿಗೆದಾರನು ಹೊಂದಿರುವ ಟಿಕೆಟ್‌ನ ಭಾಗವು ಸೇರಿದಂತೆ ಟಿಕೆಟ್‌ಗಳ ಸಂಖ್ಯೆ;

(ಸಿ) ಕಂತುಗಳ ಸಂಖ್ಯೆ, ಪ್ರತಿಯೊಂದು ಕಂತಿನಲ್ಲಿ ಪ್ರತಿ ಟಿಕೆಟ್‌ಗೆ ಸಂದಾಯ ಮಾಡಬೇಕಾದ ಮೊಬಲಗು ಮತ್ತು ಅಂಥ ಕಂತುಗಳನ್ನು ಸಂದಾಯ ಮಾಡಲು ತಪ್ಪಿದಾಗ ಯಾವುದಾದರೂ ಬಡ್ಡಿಯನ್ನು ಅಥವಾ ದಂಡವನ್ನು ಸಂದಾಯ ಮಾಡಬೇಕಾಗಿದ್ದರೆ ಅಂಥ ಬಡ್ಡಿ ಅಥವಾ ಅಂಥ ದಂಡ;

(ಡಿ) ಚೀಟಿ ಪ್ರಾರಂಭವಾಗುವ ಸಂಭಾವ್ಯ ದಿನಾಂಕ ಮತ್ತು ಅವಧಿ;

(ಇ) ಪ್ರತಿ ಕಂತಿನಲ್ಲಿ ಅದೃಷ್ಟವಂತ ವಂತಿಗೆದಾರನನ್ನು ನಿರ್ಧರಿಸುವ ರೀತಿ;

(ಎಫ್) ಅದೃಷ್ಟವಂತ ವಂತಿಗೆದಾರನು ಯಾವುದೇ ಕಂತಿನಲ್ಲಿ ಬಿಟ್ಟುಕೊಡಲು ಒಪ್ಪುವ ಸೋಡಿಯ ಗರಿಷ್ಠ ಮೊಬಲಗು;

(ಜಿ) ಸೋಡಿಯನ್ನು ಲಾಭಾಂಶದ, ಪ್ರವರ್ತಕನ ರುಸುಮಿನ ಅಥವಾ ಸಂಭಾವನೆಯ ರೂಪದಲ್ಲಿ ಅಥವಾ ಸಂದರ್ಭಾನುಸಾರ, ಚೀಟಿ ನಡೆಸುವುದಕ್ಕಾಗಿ ಆಗುವ ವೆಚ್ಚದ ರೂಪದಲ್ಲಿ ಯಾವ ವಿಧಾನದಲ್ಲಿ ಯಾವ ಪ್ರಮಾಣದಲ್ಲಿ ಹಂಚಬಹುದೋ ಆ ವಿಧಾನ ಮತ್ತು ಆ ಪ್ರಮಾಣ;

(ಹೆಚ್) ಚೀಟಿಯನ್ನು ಡ್ರಾ ಮಾಡುವ ದಿನಾಂಕ, ಸಮಯ ಮತ್ತು ಸ್ಥಳ;

(ಐ) ಯಾವ ಕಂತು ಬಂದಾಗ ಪ್ರವರ್ತಕನು ಚೀಟಿ ಮೊಬಲಗನ್ನು ಪಡೆಯಬೇಕೋ ಆ ಕಂತು;

(ಜೆ) ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಪ್ರವರ್ತಕನು ಚೀಟಿ ಹಣವನ್ನು ಯಾವ ಅನುಮೋದಿತ ಬ್ಯಾಂಕಿನಲ್ಲಿ ಠೇವಣಿ ಇಡಬೇಕೋ ಆ ಅನುಮೋದಿತ ಬ್ಯಾಂಕಿನ ಹೆಸರು;

(ಕೆ) ಪ್ರವರ್ತಕನು ವ್ಯಕ್ತಿಯಾಗಿದ್ದಲ್ಲಿ, ಅಂಥ ವ್ಯಕ್ತಿಯು ಮರಣ ಹೊಂದಿದಾಗ ಅಥವಾ ಅಸ್ವಸ್ಥಚಿತ್ತನಾದಾಗ ಅಥವಾ ಅನ್ಯಥಾ ಅಸಮರ್ಥನಾದಾಗ ಚೀಟಿಯನ್ನು ಯಾವ ರೀತಿಯಲ್ಲಿ ಮುಂದುವರಿಸಬೇಕೋ ಆ ರೀತಿ;

(ಎಲ್) ಬಹುಮಾನಿತನಲ್ಲದ ಅಥವಾ ಬಹುಮಾನಿತ ವಂತಿಗೆದಾರನು ಅಥವಾ ಪ್ರವರ್ತಕನು ಚೀಟಿ ಒಪ್ಪಂದ ಪತ್ರದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ ಸಂದರ್ಭದಲ್ಲಿ ಯಾವ ಪರಿಣಾಮಗಳಿಗೆ ಹೊಣೆಯಾಗತಕ್ಕದ್ದೋ ಆ ಪರಿಣಾಮಗಳು;

(ಎಂ) ಯಾವ ಸಂದರ್ಭಗಳಲ್ಲಿ ವಂತಿಗೆದಾರನನ್ನು ಸುಸ್ತಿ ವಂತಿಗೆದಾರನೆಂದು ಪರಿಗಣಿಸತಕ್ಕದ್ದೋ ಆ ಸನ್ನಿವೇಶಗಳು;

(ಎನ್) ಪ್ರವರ್ತಕನು ಒದಗಿಸಬೇಕಾದ ಭದ್ರತೆಯ ಸ್ವರೂಪ ಮತ್ತು ವಿವರಗಳು;

(ಓ) ಪ್ರವರ್ತಕನು, 44ನೇ ಪ್ರಕರಣದಲ್ಲಿ ಒಳಗೊಂಡಿರುವ ಉಪಬಂಧಗಳಿಗೊಳಪಟ್ಟು, ಅದೃಷ್ಟವಂತನಲ್ಲದ ಮತ್ತು ಸಂದಾಯ ಮಾಡದ ಅದೃಷ್ಟವಂತ ವಂತಿಗೆದಾರರ ಚೀಟಿ ದಾಖಲೆಗಳ ಪರಿಶೀಲನೆಗೆ ಯಾವ ದಿನಾಂಕಗಳಂದು ಯಾವ ವೇಳೆಯಲ್ಲಿ ಅನುಮತಿ ಕೊಡಬೇಕೋ ಆ ದಿನಾಂಕಗಳು ಮತ್ತು ಆ ವೇಳೆ;

(ಪಿ) ಪ್ರತಿಯೊಬ್ಬ ವಂತಿಗೆದಾರನ ನಾಮನಿರ್ದೇಶಿತರ ಹೆಸರುಗಳು, ಎಂದರೆ, ವಂತಿಗೆದಾರನು ಮರಣ ಹೊಂದಿದ ಸಂದರ್ಭದಲ್ಲಿ ಅಥವಾ ಅವನು ಒಪ್ಪಂದ ಪತ್ರವನ್ನು ಮಾಡಿಕೊಳ್ಳುವುದಕ್ಕೆ ಅನ್ಯಥಾ ಅಸಮರ್ಥನಾಗಿದ್ದಾಗ, ಚೀಟಿ ವ್ಯವಹಾರದ ಪ್ರಕಾರ ವಂತಿಗೆದಾರನಿಗೆ ಪ್ರಾಪ್ತವಾಗುವ ಪ್ರಯೋಜನಗಳನ್ನು ಯಾರಿಗೆ ಕೊಡಬೇಕೋ ಆ ವ್ಯಕ್ತಿಗಳ ಹೆಸರು;

(ಕ್ಯೂ) ಕಾಲಕಾಲಕ್ಕೆ ನಿಯಮಿಸಬಹುದಾದ ಯಾವುದೇ ಇತರ ವಿವರಗಳು.

**ವಿವರಣೆ** : ಈ ಉಪ-ಪ್ರಕರಣದ ಉದ್ದೇಶಗಳಿಗಾಗಿ, ಪ್ರತಿಯೊಬ್ಬ ವಂತಿಗೆದಾರನ ಸಹಿಯನ್ನು ಒಪ್ಪಂದ ಪತ್ರದ ಪ್ರತ್ಯೇಕ ಪ್ರತಿಗಳಲ್ಲಿ ಪಡೆದಿದ್ದರೆ ಸಾಕು.

(2) ಚೀಟಿಯ ಅವಧಿಯು ಅದರ ಪ್ರಾರಂಭದ ದಿನಾಂಕದಿಂದ ಐದು ವರ್ಷಗಳ ಅವಧಿಯನ್ನು ಮೀರಿ ವಿಸ್ತರಿಸತಕ್ಕದ್ದಲ್ಲ :

ಪರಂತು ರಾಜ್ಯ ಸರ್ಕಾರವು,-

(ಎ) ಪ್ರವರ್ತಕನ ಹಣಕಾಸಿನ ಸ್ಥಿತಿ;

(ಬಿ) ಆತ ಚೀಟಿ ನಡೆಸುವ ವಿಧಾನಗಳು;

(ಸಿ) ಭಾವೀ ಪಂತಿಗೆದಾರರ ಹಿತಾಸಕ್ತಿಗಳು;

(ಡಿ) ಭದ್ರತೆಗೆ ಸಂಬಂಧಿಸಿದ ಅಗತ್ಯತೆಗಳು; ಮತ್ತು

(ಇ) ಪ್ರಕರಣದ ಸನ್ನಿವೇಶಗಳು ಅಗತ್ಯಪಡಿಸಬಹುದಾದಂಥ ಇತರ ಅಂಶಗಳನ್ನು

– ಗಮನದಲ್ಲಿಟ್ಟುಕೊಂಡು, ಚೀಟಿಯ ಅವಧಿಯನ್ನು ಹತ್ತು ವರ್ಷಗಳ ಅವಧಿಯವರೆಗೆ ಅನುಮತಿಸುವುದು ಅವಶ್ಯಕವೆಂದು ಮನವರಿಕೆಯಾದರೆ ಹಾಗೆ ಮಾಡಬಹುದು.

(3) ಉಪ-ಪ್ರಕರಣ (1)ರ (ಎಫ್) ಖಂಡದಲ್ಲಿ ಉಲ್ಲೇಖಿಸಲಾದ ಸೋಡಿಯ ಮೊಬಲಗು ಚೀಟಿ ಮೊಬಲಗಿನ ಶೇಕಡಾ ಮೂವತ್ತಕ್ಕಿಂತ ಹೆಚ್ಚಿಗೆಯಾಗಿರತಕ್ಕದ್ದಲ್ಲ.

(4) ಚೀಟಿಯ ಯಾವುದೇ ಕಂತಿನಲ್ಲಿ, ಕೂಗುವ ಮೂಲಕ ಬಹುಮಾನಿತ ಪಂತಿಗೆದಾರನನ್ನು ನಿರ್ಧರಿಸುವುದು ಅಗತ್ಯವಾದಲ್ಲಿ ಮತ್ತು ಒಬ್ಬರಿಗಿಂತ ಹೆಚ್ಚು ಮಂದಿ ಗರಿಷ್ಠ ಸೋಡಿಗೆ ಕೂಗಿದ್ದಲ್ಲಿ ಚೀಟಿ ಎತ್ತುವುದರ ಮೂಲಕ ಬಹುಮಾನಿತ ಪಂತಿಗೆದಾರರನ್ನು ನಿರ್ಧರಿಸತಕ್ಕದ್ದು.

7. **ಚೀಟಿ ಒಪ್ಪಂದವನ್ನು ದಾಖಲು ಮಾಡುವುದು.**– (1) ಪ್ರವರ್ತಕನು ಪ್ರತಿಯೊಂದು ಚೀಟಿ ಒಪ್ಪಂದವನ್ನು ದ್ವಿಪ್ರತಿಯಲ್ಲಿ ರಿಜಿಸ್ಟ್ರಾರನಲ್ಲಿ ದಾಖಲು ಮಾಡತಕ್ಕದ್ದು.

(2) ರಿಜಿಸ್ಟ್ರಾರನು ಚೀಟಿ ಒಪ್ಪಂದದ ಒಂದು ಪ್ರತಿಯನ್ನು ಇಟ್ಟುಕೊಳ್ಳತಕ್ಕದ್ದು ಮತ್ತು ಚೀಟಿ ಒಪ್ಪಂದವನ್ನು ನೋಂದಾಯಿಸಲಾಗಿದೆಯೆಂಬ ಹಿಂಬರಹದೊಂದಿಗೆ ನಕಲು ಪ್ರತಿಯನ್ನು ಪ್ರವರ್ತಕನಿಗೆ ಹಿಂದಿರುಗಿಸತಕ್ಕದ್ದು:

ಪರಂತು, ರಿಜಿಸ್ಟ್ರಾರನು ಈ ಮುಂದಿನ ಯಾವುದೇ ಒಂದು ಅಥವಾ ಹೆಚ್ಚಿನ ಕಾರಣಗಳ ಮೇಲೆ ಎಂದರೆ:

(ಎ) 20ನೇ ಪ್ರಕರಣದ ಅಡಿಯಲ್ಲಿ ಪ್ರವರ್ತಕನು ಒದಗಿಸಿದ ಭದ್ರತೆಯು ಸಾಕಷ್ಟಿಲ್ಲ;

(ಬಿ) ಪ್ರವರ್ತಕನು ಈ ಅಧಿನಿಯಮದ ಅಡಿಯಲ್ಲಿನ ಅಥವಾ ಚೀಟಿ ವ್ಯವಹಾರವನ್ನು ನಿಯಂತ್ರಿಸುವ ಯಾವುದೇ ಇತರ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಮತ್ತು ಯಾವುದೇ ಅಂಥ ಅಪರಾಧಕ್ಕಾಗಿ ಕಾರಾವಾಸ ಶಿಕ್ಷೆಯನ್ನು ಅನುಭವಿಸಿದ್ದಾನೆ;

(ಸಿ) ಪ್ರವರ್ತಕನು, ಈ ಅಧಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಫೀಜನ್ನು ಸಂದಾಯ ಮಾಡಲು ಅಥವಾ ದಾಖಲು ಮಾಡುವುದಕ್ಕೆ ಅಗತ್ಯಪಡಿಸಲಾದ ಯಾವುದೇ ವಿವರ ಪತ್ರವನ್ನು ಅಥವಾ ದಾಖಲೆಯನ್ನು ಸಲ್ಲಿಸಲು ತಪ್ಪಿದ್ದಾನೆ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧಗಳನ್ನು ಅಥವಾ ಅದರ ಅಡಿಯಲ್ಲಿ ರಚಿಸಿದ ಯಾವುವೇ ನಿಯಮಗಳನ್ನು ಉಲ್ಲಂಘಿಸಿದ್ದಾನೆ;

(ಡಿ) ಪ್ರವರ್ತಕನು ಬಿಡುಗಡೆಯಾದ ನಂತರ ಐದು ವರ್ಷಗಳ ಅವಧಿಯು ಕಳೆದಿದ್ದ ಹೊರತು, ಪ್ರವರ್ತಕನು ನೈತಿಕ ಅಧಃಪತನವನ್ನೊಳಗೊಂಡಿರುವ ಯಾವುದೇ ಅಪರಾಧದ ಅಪರಾಧಿಯೆಂದು ನಿರ್ಣೀತನಾಗಿದ್ದಾನೆ ಮತ್ತು ಯಾವುದೇ ಅಂಥ ಅಪರಾಧಕ್ಕಾಗಿ ಕಾರಾವಾಸ ಶಿಕ್ಷೆ ಅನುಭವಿಸಿದ್ದಾನೆ;

– ಎಂಬ ಕಾರಣದ ಮೇಲೆ ಚೀಟಿ ಒಪ್ಪಂದವನ್ನು ನೋಂದಾಯಿಸಲು ನಿರಾಕರಿಸಬಹುದು:

ಮತ್ತೂ ಪರಂತು, ಮೊದಲನೆ ಪರಂತುಕದ ಅಡಿಯಲ್ಲಿ ಚೀಟಿಯನ್ನು ನೋಂದಾಯಿಸಲು ನಿರಾಕರಿಸುವ ಮೊದಲು, ಪ್ರವರ್ತಕನಿಗೆ ಅಹವಾಲು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡತಕ್ಕದ್ದು.

(3) ಉಪಪ್ರಕರಣ (2)ರ ಅಡಿಯಲ್ಲಿ ಮಾಡಲಾದ ಪ್ರತಿಯೊಂದು ಹಿಂಬರಹವು ಚೀಟಿಯು ಈ ಅಧಿನಿಯಮದ ಅಡಿಯಲ್ಲಿ ಕ್ರಮಬದ್ಧವಾಗಿ ನೋಂದಾಯಿಸಲಾಗಿದೆಯೆಂಬುದಕ್ಕೆ ನಿರ್ಣಾಯಕ ಸಾಕ್ಷ್ಯವಾಗಿರತಕ್ಕದ್ದು ಮತ್ತು ಅಂಥ ಹಿಂಬರಹದ ದಿನಾಂಕದಿಂದ ಮೂರು ತಿಂಗಳೊಳಗೆ 9ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರವರ್ತಕನು ಘೋಷಣೆಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸದಿದ್ದರೆ ಅಥವಾ ಈ ಬಗ್ಗೆ ರಿಜಿಸ್ಟ್ರಾರನಿಗೆ ಅರ್ಜಿ ಸಲ್ಲಿಸಿದಾಗ ರಿಜಿಸ್ಟ್ರಾರನು ಒಟ್ಟಾರೆಯಾಗಿ ಮೂರು ತಿಂಗಳಿಗೆ ಮೀರದಂಥ ಹೆಚ್ಚಿನ ಅವಧಿಯೊಳಗಾಗಿ ಅಥವಾ ಆ ಅವಧಿಗಳೊಳಗಾಗಿ ದಾಖಲು ಮಾಡಲು ರಿಜಿಸ್ಟ್ರಾರನು ಅನುಮತಿಸಿದ ಮೇಲೂ ಘೋಷಣೆಯನ್ನು ಸಲ್ಲಿಸದಿದ್ದರೆ ಚೀಟಿಯ ನೋಂದಣಿಯು ರದ್ದಾಗತಕ್ಕದ್ದು.

8. **ಕಂಪನಿಯಿಂದ ಚೀಟಿಯ ಪ್ರಾರಂಭ ಇತ್ಯಾದಿ ಮತ್ತು ಮೀಸಲು ನಿಧಿಯ ಸ್ಥಾಪನೆಗೆ ಅಗತ್ಯವಾಗಿರುವ ಕನಿಷ್ಠ ಬಂಡವಾಳ.**– (1) ಕಂಪನಿಗಳ ಅಧಿನಿಯಮ, 1956ರಲ್ಲಿ ಏನೇ ಒಳಗೊಂಡಿದ್ದರೂ, ಆದರೆ, ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಕಂಪನಿಯು, ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದ ಸಂದಾಯಿತ ಬಂಡವಾಳ ಹೊಂದಿದ್ದ ಹೊರತು ಚೀಟಿ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(2) ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆ ಸಂದಾಯಿತ ಬಂಡವಾಳ ಹೊಂದಿರುವ ಮತ್ತು ಈ ಅಧಿನಿಯಮದ ಪ್ರಾರಂಭದಂದು ಚೀಟಿ ವ್ಯವಹಾರವನ್ನು ನಡೆಸುತ್ತಿರುವ ಪ್ರತಿಯೊಂದು ಕಂಪನಿಯು, ಹಾಗೆ ಚೀಟಿ ವ್ಯವಹಾರವು ಪ್ರಾರಂಭವಾದ ಮೂರು ವರ್ಷಗಳ ಅವಧಿ ಮುಕ್ತಾಯವಾಗುವುದಕ್ಕೂ ಮುಂಚೆ ಅದರ ಸಂದಾಯಿತ ಬಂಡವಾಳವನ್ನು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದಂತೆ ಹೆಚ್ಚಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವುದೇ ತೊಂದರೆಯನ್ನು ನಿವಾರಿಸುವುದಕ್ಕಾಗಿ, ಯಾವುದೇ ಕಂಪನಿಗೆ ಸಂಬಂಧಪಟ್ಟಂತೆ ಮೂರು ವರ್ಷಗಳ ಸದರಿ ಅವಧಿಯನ್ನು ಪುನಃ ವಿಸ್ತರಿಸುವುದು ಅವಶ್ಯಕವೆಂದು

ಪರಿಗಣಿಸಿದರೆ, ಸದರಿ ಅವಧಿಯನ್ನು ಒಟ್ಟಾರೆ ಎರಡು ವರ್ಷಗಳಿಗೆ ಮೀರದಂಥ ಹೆಚ್ಚಿನ ಅವಧಿ ಅಥವಾ ಅವಧಿಯವರೆಗೆ ವಿಸ್ತರಿಸಬಹುದು:

ಮತ್ತೂ ಪರಂತು, ಯಾವುದೇ ಅಂಥ ಕಂಪನಿಯು ಮೂರು ವರ್ಷಗಳ ಸದರಿ ಅವಧಿಗೂ ಮೀರಿ ವಿಸ್ತೃತವಾದ ಅಥವಾ ಮೊದಲನೆಯ ಪರಂತುಕದ ಅಡಿಯಲ್ಲಿ ವಿಸ್ತರಿಸಲಾದಂಥ ಹೆಚ್ಚಿನ ಅವಧಿ ಅಥವಾ ಅವಧಿಗಳೊಳಗೆ ಅದು ಅದರ ಸಂದಾಯಿತ ಬಂಡವಾಳವನ್ನು ಒಂದು ಲಕ್ಷ ರೂಪಾಯಿಗಳಿಗಿಂತ ಕಡಿಮೆಯಿರದಂತೆ ಹೆಚ್ಚಿಸದ ಹೊರತು ಯಾವುದೇ ಹೊಸ ಚೀಟಿ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ.

(3) ಚೀಟಿ ವ್ಯವಹಾರವನ್ನು ನಡೆಸುವ ಪ್ರತಿಯೊಂದು ಕಂಪನಿಯು, ಮೀಸಲು ನಿಧಿಯನ್ನು ಸ್ಥಾಪಿಸತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು ಮತ್ತು ಅದರ ಲಾಭ ಮತ್ತು ನಷ್ಟದ ಲೆಕ್ಕದಲ್ಲಿ ತೋರಿಸಿದಂತೆ ಪ್ರತಿ ವರ್ಷದ ಲಾಭದ ಶಿಲ್ಕಿನಿಂದ ಮತ್ತು ಅದರ ಷೇರುಗಳ ಮೇಲೆ ಯಾವುದೇ ಲಾಭಾಂಶವನ್ನು ಘೋಷಿಸುವುದಕ್ಕೂ ಮೊದಲು, ಅಂಥ ಲಾಭದಲ್ಲಿ ಶೇಕಡಾ ಹತ್ತಕ್ಕೆ ಕಡಿಮೆ ಇರದ ಸಮಾನ ಮೊತ್ತವನ್ನು ಅಂಥ ಮೀಸಲು ನಿಧಿಗೆ ವರ್ಗಾಯಿಸತಕ್ಕದ್ದು.

(4) ಯಾವುದೇ ಕಂಪನಿಯು ರಿಜಿಸ್ಟ್ರಾರನ ಪೂರ್ವ ಅನುಮೋದನೆಯ ಹೊರತು ಮೀಸಲು ನಿಧಿಯಿಂದ ಯಾವುದೇ ಮೊತ್ತವನ್ನು ಅಥವಾ ಮೊತ್ತಗಳನ್ನು ವಿನಿಯೋಗಿಸತಕ್ಕದ್ದಲ್ಲ ಮತ್ತು ಅಂಥ ಅನುಮೋದನೆಯನ್ನು ಪಡೆಯುವ ಉದ್ದೇಶಕ್ಕಾಗಿ, ಅಂಥ ವಿನಿಯೋಗಕ್ಕೆ ಸಂಬಂಧಿಸಿರುವ ಪರಿಸ್ಥಿತಿಗಳನ್ನು ವಿವರಿಸಿ, ನಿಯಮಿಸಿದ ನಮೂನೆಯಲ್ಲಿ ಅರ್ಜಿಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

**9. ಚೀಟಿಯ ಪ್ರಾರಂಭ.–** (1) ಪ್ರತಿಯೊಬ್ಬ ಪ್ರವರ್ತಕನು ಚೀಟಿ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಲಾದ ಎಲ್ಲಾ ಟಿಕೆಟ್‍ಗಳನ್ನು ಪೂರ್ಣವಾಗಿ ಕೊಡಲು ಒಪ್ಪಿಕೊಂಡ ನಂತರ ಆ ಬಗೆಗಿನ ಘೋಷಣೆಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

(2) ಉಪ-ಪ್ರಕರಣ (1)ರ ಅಡಿಯಲ್ಲಿ ಘೋಷಣೆಯನ್ನು ಸಲ್ಲಿಸಿದ ನಂತರ ಆದಷ್ಟು ಬೇಗನೆ ರಿಜಿಸ್ಟ್ರಾರನು, ಮಂಜೂರಾತಿ, ಚೀಟಿಯ ನೋಂದಣಿ ಮತ್ತು ಇತರ ವಿಷಯಗಳಿಗೆ ಸಂಬಂಧಿಸಿರುವ ಎಲ್ಲಾ ಅಗತ್ಯತೆಗಳನ್ನು ಕ್ರಮಬದ್ಧವಾಗಿ ಪಾಲಿಸಲಾಗಿರುವುದೆಂದು ಮನಗಂಡ ತರುವಾಯ ಪ್ರವರ್ತಕನಿಗೆ ಪ್ರಾರಂಭಿಕ ಅರ್ಹತಾ ಪತ್ರವನ್ನು ನೀಡತಕ್ಕದ್ದು.

(3) ಯಾರೇ ಪ್ರವರ್ತಕನು (2)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಾರಂಭಿಕ ಅರ್ಹತಾ ಪತ್ರವನ್ನು ಪಡೆಯದ ಹೊರತು, ಯಾವುದೇ ಚೀಟಿಯನ್ನು ಕೂಗತಕ್ಕದ್ದಲ್ಲ ಅಥವಾ ತೆಗೆಯತಕ್ಕದ್ದಲ್ಲ ಅಥವಾ ಯಾವುದೇ ಚೀಟಿ ಹಣವನ್ನು ವಿನಿಯೋಗಿಸತಕ್ಕದ್ದಲ್ಲ.

**10. ಚೀಟಿ ಒಪ್ಪಂದದ ಪ್ರತಿಗಳನ್ನು ವಂತಿಗೆದಾರರಿಗೆ ನೀಡುವುದು.–** (1) ಪ್ರವರ್ತಕನು, 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾರಂಭಿಕ ಅರ್ಹತಾ ಪತ್ರವನ್ನು ಪಡೆದ ನಂತರ ಆದಷ್ಟು ಬೇಗನೆ, ಆದರೆ, ಚೀಟಿಯ ಮೊದಲನೇ ಡ್ರಾದ ದಿನಾಂಕದ ಮುಂಚೆ ನಕಲು ಪ್ರತಿಯೆಂದು ದೃಢೀಕರಿಸಲಾದ ಚೀಟಿ ಒಪ್ಪಂದದ ಒಂದು ಪ್ರತಿಯನ್ನು ಪ್ರತಿಯೊಬ್ಬ ವಂತಿಗೆದಾರನಿಗೆ ಒದಗಿಸಕ್ಕದ್ದು.

(2) ಪ್ರವರ್ತಕನು, ಚೀಟಿಯ ಮೊದಲನೇ ಕಂತಿಗಾಗಿ ಚೀಟಿ ಎತ್ತಲಾಗಿದ್ದ ತಿಂಗಳ ಮುಕ್ತಾಯದ ನಂತರ ಹದಿನೈದು ದಿನಗಳೊಳಗೆ, (1)ನೇ ಉಪ-ಪ್ರಕರಣದ ಉಪಬಂಧಗಳನ್ನು ಪಾಲಿಸಲಾಗಿದೆಯೆಂಬ ಪ್ರಮಾಣಪತ್ರವನ್ನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

**11. "ಚೀಟಿ", "ಚಿಟ್ ಫಂಡ್", ಚಿಟ್ಟಿ ಮತ್ತು "ಕುರಿ" ಪದಗಳ ಬಳಕೆ.–** (1) ಯಾರೇ ವ್ಯಕ್ತಿಯು, "ಚೀಟಿ", "ಚಿಟ್ ಫಂಡ್", "ಚಿಟ್ಟಿ" ಅಥವಾ "ಕುರಿ" ಎಂಬ ಯಾವುವೇ ಪದಗಳನ್ನು ತನ್ನ ಹೆಸರಿನ ಭಾಗವಾಗಿ ಬಳಕೆ ಮಾಡಿದ ಹೊರತು, ಚೀಟಿ ವ್ಯವಹಾರವನ್ನು ನಡೆಸತಕ್ಕದ್ದಲ್ಲ ಮತ್ತು ಚೀಟಿ ವ್ಯವಹಾರವನ್ನು ನಡೆಸುವ ವ್ಯಕ್ತಿಯಲ್ಲದ ಬೇರೆ ಯಾರೇ ವ್ಯಕ್ತಿಯು ಯಾವುದೇ ಅಂಥ ಪದವನ್ನು ತನ್ನ ಹೆಸರಿನ ಭಾಗವಾಗಿ ಉಪಯೋಗಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭದಲ್ಲಿ,–

(ಎ) ಯಾರೇ ವ್ಯಕ್ತಿಯು, ಉಪ-ಪ್ರಕರಣ (1)ರಲ್ಲಿ ನಿರ್ದಿಷ್ಟಪಡಿಸಲಾದ ಯಾವುವೇ ಪದಗಳನ್ನು ತನ್ನ ಹೆಸರಿನ ಭಾಗವಾಗಿ ಬಳಕೆ ಮಾಡದೆ ಚೀಟಿ ವ್ಯವಹಾರವನ್ನು ನಡೆಸುತ್ತಿರುವಲ್ಲಿ; ಅಥವಾ

(ಬಿ) ಚೀಟಿ ವ್ಯವಹಾರವನ್ನು ನಡೆಸದಿರುವ ಯಾರೇ ವ್ಯಕ್ತಿಯು ತನ್ನ ಹೆಸರಿನ ಭಾಗವಾಗಿ ಯಾವುದೇ ಅಂಥ ಪದವನ್ನು ಉಪಯೋಗಿಸಿದಲ್ಲಿ,

ಆತನು, ಅಂಥ ಪ್ರಾರಂಭದಿಂದ ಒಂದು ವರ್ಷದ ಅವಧಿಯೊಳಗೆ, ಸಂದರ್ಭಾನುಸಾರ, ಯಾವುದೇ ಅಂಥ ಪದವನ್ನು ತನ್ನ ಹೆಸರಿನ ಭಾಗವಾಗಿ ಸೇರಿಸತಕ್ಕದ್ದು ಅಥವಾ ತನ್ನ ಹೆಸರಿನಿಂದ ಅಂಥ ಪದವನ್ನು ಬಿಟ್ಟುಬಿಡತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವುದೇ ತೊಂದರೆಯನ್ನು ನಿವಾರಿಸುವುದಕ್ಕಾಗಿ ಒಂದು ವರ್ಷದ ಸದರಿ ಅವಧಿಯನ್ನು ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಿದರೆ, ಒಟ್ಟಾರೆ ಒಂದು ವರ್ಷ ಮೀರದಂಥ ಹೆಚ್ಚಿನ ಅವಧಿಗೆ ಅಥವಾ ಅವಧಿಗಳಿಗೆ ಆ ಅವಧಿಯನ್ನು ವಿಸ್ತರಿಸಬಹುದು.

**12. ಕಂಪನಿಯು ಚೀಟಿ ವ್ಯವಹಾರವಲ್ಲದ ಬೇರೆ ವ್ಯವಹಾರವನ್ನು ನಡೆಸುವುದರ ಮೇಲೆ ನಿಷೇಧ.–** (1) ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಅನುಮತಿಯ ಹೊರತು, ಚೀಟಿ ವ್ಯವಹಾರವನ್ನು ನಡೆಸುವ ಯಾವುದೇ ಕಂಪನಿಯು ಯಾವುದೇ ಇತರೆ ವ್ಯವಹಾರವನ್ನು ನಡೆಸತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭದಲ್ಲಿ, ಯಾವುದೇ ಕಂಪನಿಯು ಚೀಟಿ ವ್ಯವಹಾರದ ಜೊತೆಗೆ ಯಾವುದೇ ವ್ಯವಹಾರವನ್ನು ನಡೆಸುತ್ತಿದ್ದರೆ, ಅಂಥ ಪ್ರಾರಂಭದಿಂದ ಮೂರು ವರ್ಷಗಳ ಅವಧಿಯು ಮುಕ್ತಾಯವಾಗುವುದಕ್ಕೂ ಮೊದಲು ಅದು, ಅಂಥ ಇತರೆ ವ್ಯವಹಾರವನ್ನು ನಿಲ್ಲಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವುದೇ ತೊಂದರೆಯನ್ನು ನಿವಾರಿಸುವುದಕ್ಕಾಗಿ, ಮೂರು ವರ್ಷಗಳ ಸದರಿ ಅವಧಿಯನ್ನು ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಿದರೆ ಒಟ್ಟಾರೆ ಎರಡು ವರ್ಷಗಳನ್ನು ಮೀರದಂಥ ಹೆಚ್ಚಿನ ಅವಧಿಗೆ ಅಥವಾ ಅವಧಿಗಳಿಗೆ ಆ ಅವಧಿಯನ್ನು ವಿಸ್ತರಿಸಬಹುದು.

13. **ಚೀಟಿಗಳ ಒಟ್ಟು ಮೊಬಲಗು.**– (1) ಫರ್ಮು ಅಥವಾ ವ್ಯಕ್ತಿಗಳ ಇತರೆ ಸಂಘವು ಅಥವಾ ಕಂಪನಿಯು ಅಥವಾ ಸಹಕಾರ ಸಂಘವಾಗಿರದ ಯಾರೇ ಪ್ರವರ್ತಕನು, ಯಾವುದೇ ಸಮಯದಲ್ಲಿ ಚೀಟಿಯ ಒಟ್ಟು ಮೊಬಲಗು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ಮೀರಿದ ಚೀಟಿಗಳನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(2) ಪ್ರವರ್ತಕನು ಒಂದು ಫರ್ಮು ಆಗಿದ್ದಲ್ಲಿ ಅಥವಾ ವ್ಯಕ್ತಿಗಳ ಇತರೆ ಸಂಘವಾಗಿದ್ದಲ್ಲಿ, ಫರ್ಮಿನ ಅಥವಾ ಇತರೆ ಸಂಘದ ಮೂಲಕ ನಡೆಸುತ್ತಿರುವ ಚೀಟಿಗಳ ಒಟ್ಟು ಚೀಟಿ ಮೊತ್ತವು,

– ಯಾವುದೇ ಸಮಯದಲ್ಲಿ,

(ಎ) ಫರ್ಮಿನ ಪಾಲುದಾರರ ಸಂಖ್ಯೆ ಅಥವಾ ಸಂಘವನ್ನು ರಚಿಸುವ ವ್ಯಕ್ತಿಗಳ ಸಂಖ್ಯೆ ನಾಲ್ಕಕ್ಕಿಂತ ಕಡಿಮೆ ಇಲ್ಲದಿದ್ದಲ್ಲಿ, ಒಂದು ಲಕ್ಷ ರೂಪಾಯಿಗಳ ಮೊತ್ತವನ್ನು;

(ಬಿ) ಇತರೆ ಯಾವುದೇ ಸಂದರ್ಭದಲ್ಲಿ ಅಂಥ ಪ್ರತಿಯೊಬ್ಬ ಪಾಲುದಾರ ಅಥವಾ ಪ್ರತಿಯೊಬ್ಬ ವ್ಯಕ್ತಿಗೆ ತಲಾ ಇಪ್ಪತ್ತೈದು ಸಾವಿರ ರೂಪಾಯಿಗಳಂತೆ ಲೆಕ್ಕ ಹಾಕಿದ ಮೊತ್ತವನ್ನು

– ಮೀರತಕ್ಕದ್ದಲ್ಲ.

(3) ಪ್ರವರ್ತಕನು ಕಂಪನಿಯಾಗಿದ್ದರೆ ಅಥವಾ ಸಹಕಾರ ಸಂಘವಾಗಿದ್ದರೆ ಅದರ ಮೂಲಕ ನಡೆಸುತ್ತಿರುವ ಚೀಟಿಗಳ ಒಟ್ಟು ಚೀಟಿ ಮೊತ್ತವು, ಯಾವುದೇ ಸಮಯದಲ್ಲಿ ಸಂದರ್ಭಾನುಸಾರ, ಕಂಪನಿಯ ಅಥವಾ ಸಹಕಾರ ಸಂಘದ ನಿವ್ವಳ ಸ್ವಂತ ನಿಧಿಗಳ ಹತ್ತುಪಟ್ಟಿಗಿಂತ ಹೆಚ್ಚಿಗೆಯಾಗಿರತಕ್ಕದ್ದಲ್ಲ.

**ವಿವರಣೆ**: ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ, "ನಿವ್ವಳ ಸ್ವಂತ ನಿಧಿಗಳು" ಎಂದರೆ ಕಂಪನಿಯ ಅಥವಾ ಸಹಕಾರ ಸಂಘದ ಹಿಂದಿನ ಲೆಕ್ಕಪರಿಶೋಧಿತ ಜಮಾ ಖರ್ಚು ಪಟ್ಟಿಯಲ್ಲಿ ತೋರಿಸಿರುವಂತೆ, ಅದೇ ಜಮಾ ಖರ್ಚು ಪಟ್ಟಿಯಲ್ಲಿ ತೋರಿಸಿದ ನಷ್ಟ, ಮುಂದಕ್ಕೆ ಹಾಕಲಾದ ರಾಜಸ್ವ ವೆಚ್ಚದ ಮತ್ತು ಇತರ ಅಮೂರ್ತ ಸ್ವತ್ತುಗಳೇನಾದರೂ ಇದ್ದರೆ, ಅವುಗಳ ಸಂಚಿತ ಶಿಲ್ಕಿನಿಂದ ಕಳೆದರೆ ಉಳಿಯುವ ಒಟ್ಟು ಸಂದಾಯಿತ ಬಂಡವಾಳ ಮತ್ತು ಮುಕ್ತ ಮೀಸಲುಗಳು.

14. **ನಿಧಿಗಳ ಬಳಕೆ** .– (1) ಚೀಟಿ ವ್ಯವಹಾರವನ್ನು ನಡೆಸುತ್ತಿರುವ ಯಾರೇ ವ್ಯಕ್ತಿಯು, ಅಂಥ ವ್ಯವಹಾರಕ್ಕೆ ಸಂಬಂಧಪಟ್ಟಂತೆ (ಆ ವ್ಯಕ್ತಿಗೆ ಸಂದಾಯವಾಗಬಹುದಾದ ರುಸುಮಿನ ಅಥವಾ ಸಂಭಾವನೆಯ ಹೊರತು ಅಥವಾ ಸುಸ್ತಿ ವಂತಿಗೆದಾರರಿಂದ ಬಡ್ಡಿಯನ್ನೇನಾದರೂ ಅಥವಾ ದಂಡವನ್ನೇನಾದರೂ ಸ್ವೀಕರಿಸಿದ್ದರೆ ಅದನ್ನು ಹೊರತುಪಡಿಸಿ) ಸಂಗ್ರಹಿಸಿದ ಹಣಗಳನ್ನು,–

(ಎ) ಚೀಟಿ ವ್ಯವಹಾರವನ್ನು ನಡೆಸುವುದಕ್ಕಾಗಿ ಹೊರತು; ಅಥವಾ

(ಬಿ) ಬಹುಮಾನಿತರಲ್ಲದ ವಂತಿಗೆದಾರರಿಗೆ, ಅವರು ಸಂದಾಯ ಮಾಡಿದ ವಂತಿಗೆಗಳನ್ನು ಭದ್ರತೆಯಾಗಿ ಕೊಟ್ಟಾಗ ಸಾಲಗಳನ್ನು ಮತ್ತು ಮುಂಗಡಗಳನ್ನು ನೀಡುವುದಕ್ಕಾಗಿ ಹೊರತು; ಅಥವಾ

(ಸಿ) ಭಾರತ ನ್ಯಾಸ ಅಧಿನಿಯಮ, 1882 (1882ರ 2)ರ 20ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಟ್ರಸ್ಟಿ ಭದ್ರತೆ ಪತ್ರಗಳಲ್ಲಿ ತೊಡಗಿಸುವುದಕ್ಕಾಗಿ ಹೊರತು; ಅಥವಾ

(ಡಿ) ಚೀಟಿ ಒಪ್ಪಂದದಲ್ಲಿ ನಮೂದಿಸಿರುವ ಅನುಮೋದಿತ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವುದಕ್ಕಾಗಿ ಹೊರತು;

– ಉಪಯೋಗಿಸತಕ್ಕದ್ದಲ್ಲ.

(2) ಚೀಟಿ ವ್ಯವಹಾರವನ್ನು ನಡೆಸುತ್ತಿರುವ ಯಾರೇ ವ್ಯಕ್ತಿಯು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಅಂಥ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಸಂಗ್ರಹಿಸಿದ ಹಣವನ್ನು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದ ಉದ್ದೇಶಗಳಿಗಾಗಿ ಹೊರತು ಅನ್ಯಥಾ ಬಳಕೆ ಮಾಡಿಕೊಂಡಿದ್ದರೆ, ಅವನು ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ವಸೂಲಿ ಮಾಡದಿರುವಂಥ ಹಣವನ್ನು ಅಧಿನಿಯಮದ ಪ್ರಾರಂಭದಿಂದ ಮೂರು ವರ್ಷಗಳ ಅವಧಿಯ ಮುಕ್ತಾಯಕ್ಕೂ ಮೊದಲು ವಸೂಲಿ ಮಾಡಲಾಗುವುದೆಂಬ ಬಗ್ಗೆ ಖಾತ್ರಿಯನ್ನು ಒದಗಿಸತಕ್ಕದ್ದು:

ಪರಂತು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತದೃಷ್ಟಿಯಿಂದ ಅಥವಾ ಯಾವುದೇ ತೊಂದರೆಯನ್ನು ನಿವಾರಿಸುವುದಕ್ಕಾಗಿ, ಮೂರು ವರ್ಷಗಳ ಸದರಿ ಅವಧಿಯನ್ನು ವಿಸ್ತರಿಸುವುದು ಅವಶ್ಯಕವೆಂದು ಪರಿಗಣಿಸಿದ್ದರೆ, ಒಟ್ಟಾರೆ ಒಂದು ವರ್ಷ ಮೀರದಂಥ ಹೆಚ್ಚಿನ ಅವಧಿಗೆ ಅಥವಾ ಅವಧಿಗಳಿಗೆ ಸದರಿ ಅವಧಿಯನ್ನು ವಿಸ್ತರಿಸಬಹುದು.

15. **ಚೀಟಿ ಒಪ್ಪಂದವನ್ನು ಮಾರ್ಪಾಡುಗೊಳಿಸುವುದು.**– ಪ್ರವರ್ತಕನ ಮತ್ತು ಎಲ್ಲಾ ವಂತಿಗೆದಾರರ ಲಿಖಿತ ಸಮ್ಮತಿ ಪಡೆದ ಹೊರತು ಯಾವುದೇ ಚೀಟಿ ಒಪ್ಪಂದವನ್ನು ಮಾರ್ಪಾಡುಗೊಳಿಸತಕ್ಕದ್ದಲ್ಲ, ಅದಕ್ಕೆ ಸೇರಿಸತಕ್ಕದ್ದಲ್ಲ ಅಥವಾ ಅದನ್ನು ರದ್ದುಗೊಳಿಸತಕ್ಕದ್ದಲ್ಲ.

16. **ಚೀಟಿಗಳನ್ನು ನಡೆಸುವ ದಿನಾಂಕ, ಸಮಯ ಮತ್ತು ಸ್ಥಳ.**– (1) ಚೀಟಿಯಲ್ಲಿನ ಪ್ರತಿಯೊಂದು ಡ್ರಾ ಅನ್ನು ಚೀಟಿ ಒಪ್ಪಂದದಲ್ಲಿ ನಮೂದಿಸಿರುವ ದಿನಾಂಕದಂದು, ಆ ಸಮಯದಲ್ಲಿ ಮತ್ತು ಆ ಸ್ಥಳದಲ್ಲಿ ನಡೆಸತಕ್ಕದ್ದು ಮತ್ತು ಅದಕ್ಕಾಗಿ

ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ಅಂಥ ರೀತಿಯಲ್ಲಿ ನೋಟೀಸನ್ನು ಪ್ರವರ್ತಕನು ಎಲ್ಲಾ ವಂತಿಗೆದಾರರಿಗೆ ನೀಡತಕ್ಕದ್ದು.

(2) ಅಂಥ ಪ್ರತಿಯೊಂದು ಡ್ರಾ ಅನ್ನು ಚೀಟಿ ಒಪ್ಪಂದದ ಉಪಬಂಧಗಳಿಗನುಸಾರವಾಗಿ ಮತ್ತು ಇಬ್ಬರಿಗಿಂತ ಕಡಿಮೆಯಿರದ ವಂತಿಗೆದಾರರ ಉಪಸ್ಥಿತಿಯಲ್ಲಿ ನಡೆಸತಕ್ಕದ್ದು.

(3) ಉಪ-ಪ್ರಕರಣ (2)ರ ಮೇರೆಗೆ ಡ್ರಾ ನಡೆಯುವಾಗ ಉಪಸ್ಥಿತ ಇರಬೇಕೆಂದು ಅಗತ್ಯಪಡಿಸಿರುವಂತೆ ಇಬ್ಬರು ವಂತಿಗೆದಾರರು ಉಪಸ್ಥಿತ ಇರಲಿಲ್ಲವೆಂಬ ಕಾರಣದ ಮೇಲೆ ಅಥವಾ ಯಾವುದೇ ಇತರೆ ಕಾರಣದ ಮೇಲೆ ಯಾವುದೇ ಡ್ರಾ ನಡೆಸದಿದ್ದಲ್ಲಿ, ರಿಜಿಸ್ಟ್ರಾರನು, ತಾನಾಗಿಯೇ ಅಥವಾ ಪ್ರವರ್ತಕನು ಅಥವಾ ಯಾರೇ ವಂತಿಗೆದಾರನು ಅರ್ಜಿ ಸಲ್ಲಿಸಿದಾಗ, ಡ್ರಾ ಅನ್ನು ತನ್ನ ಸಮ್ಮುಖದಲ್ಲಿ ಅಥವಾ ಆತನು ನಿಯೋಜಿಸಿದ ಯಾರೇ ವ್ಯಕ್ತಿಯ ಸಮ್ಮುಖದಲ್ಲಿ ನಡೆಸತಕ್ಕದ್ದೆಂದು ನಿರ್ದೇಶಿಸಬಹುದು.

17. **ವ್ಯವಹರಣೆಗಳ ನಡೆವಳಿಗಳು.–** (1) ಪ್ರತಿಯೊಂದು ಡ್ರಾದ ವ್ಯವಹರಣೆಗಳ ನಡೆವಳಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಡ್ರಾ ಮುಕ್ತಾಯವಾದ ಕೂಡಲೆ ಆ ಉದ್ದೇಶಕ್ಕಾಗಿ ಇಟ್ಟಿರುವ ಪುಸ್ತಕದಲ್ಲಿ ನಮೂದಿಸತಕ್ಕದ್ದು ಮತ್ತು ಪ್ರವರ್ತಕನು, ಅದೃಷ್ಟವಂತ ವಂತಿಗೆದಾರರು ಹಾಜರಿದ್ದರೆ ಅವರು ಅಥವಾ ಅವರ ಅಧಿಕೃತ ಏಜೆಂಟರು, ಮತ್ತು ಕನಿಷ್ಠ ಪಕ್ಷ ಹಾಜರಿರುವ ಇಬ್ಬರು ಇತರೆ ವಂತಿಗೆದಾರರು ಅದಕ್ಕೆ ಸಹಿ ಮಾಡತಕ್ಕದ್ದು ಮತ್ತು 16ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಡಿಯಲ್ಲಿ ನಿರ್ದೇಶನ ನೀಡಿದ್ದರೆ, ರಿಜಿಸ್ಟ್ರಾರನು ಅಥವಾ ಆ ಉಪ-ಪ್ರಕರಣದ ಮೇರೆಗೆ ಆತನು ನಿಯೋಜಿಸಿದ ವ್ಯಕ್ತಿಯೂ ಸಹ ಸಹಿ ಮಾಡತಕ್ಕದ್ದು.

(2) ಉಪ-ಪ್ರಕರಣ (1)ರಲ್ಲಿ ಹೇಳಿರುವ ನಡೆವಳಿಗಳಲ್ಲಿ,–

(ಎ) ವ್ಯವಹರಣೆಗಳು ಪ್ರಾರಂಭವಾದ ಮತ್ತು ಮುಕ್ತಾಯವಾದ ದಿನಾಂಕವನ್ನು ಮತ್ತು ಸಮಯವನ್ನು ಮತ್ತು ಡ್ರಾ ನಡೆಸಲಾಗಿರುವ ಸ್ಥಳವನ್ನು;

(ಬಿ) ವ್ಯವಹರಣೆಗೆ ಯಾವ ಚೀಟಿ ಸಂಬಂಧಪಟ್ಟಿದೆಯೋ ಆ ಚೀಟಿಯ ಕಂತಿನ ಸಂಖ್ಯೆಯನ್ನು;

(ಸಿ) ಹಾಜರಿದ್ದ ವಂತಿಗೆದಾರರ ಹೆಸರುಗಳನ್ನು;

(ಡಿ) ಕಂತಿನಲ್ಲಿನ ಬಹುಮಾನದ ಮೊಬಲಗಿಗೆ ಹಕ್ಕುಳ್ಳ ವ್ಯಕ್ತಿಯ ಅಥವಾ ವ್ಯಕ್ತಿಗಳನ್ನು;

(ಇ) ಸೋಡಿಯ ಮೊಬಲಗನ್ನು;

(ಎಫ್) ಯಾವುದೇ ಹಿಂದಿನ ಕಂತಿಗೆ ಸಂಬಂಧಪಟ್ಟಂತೆ, ಬಹುಮಾನವೇನಾದರೂ ಸಂದಾಯವಾಗಿರದಿದ್ದರೆ ಆ ಬಹುಮಾನವನ್ನು, ಅದರ ಮೊಬಲಗನ್ನು, ವಿಲೇವಾರಿಯನ್ನು ಮತ್ತು ಅದಕ್ಕೆ ಸಂಬಂಧಿಸಿರುವ ಪೂರ್ಣ ವಿವರಗಳನ್ನು; ಮತ್ತು

(ಜಿ) ನಿಯಮಿಸಬಹುದಾದ ಯಾವುದೇ ಇತರ ವಿವರಗಳನ್ನು

– ಸ್ಪಷ್ಟವಾಗಿ ಹೇಳಿರತಕ್ಕದ್ದು.

18. **ನಡೆವಳಿಗಳ ಪ್ರತಿಗಳನ್ನು ರಿಜಿಸ್ಟ್ರಾರರಿಗೆ ಸಲ್ಲಿಸುವುದು.–** ಪ್ರವರ್ತಕನು ಪ್ರಮಾಣೀಕರಿಸಿದ ಪ್ರತಿಯೊಂದು ಡ್ರಾದ ವ್ಯವಹರಣೆಗಳ ನಡೆವಳಿಯ ನಕಲು ಪ್ರತಿಯನ್ನು ಅದು ಯಾವ ಡ್ರಾಗೆ ಸಂಬಂಧಿಸಿದೆಯೋ ಆ ಡ್ರಾದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗೆ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

19. **ವ್ಯವಹಾರವನ್ನು ಹೊಸ ಸ್ಥಳದಲ್ಲಿ ಪ್ರಾರಂಭಿಸುವುದರ ಮೇಲೆ ನಿರ್ಬಂಧ.–** (1) ಚೀಟಿ ವ್ಯವಹಾರವನ್ನು ನಡೆಸುವ ಯಾರೇ ವ್ಯಕ್ತಿಯು, ಆತನ ನೋಂದಾಯಿತ ಕಚೇರಿಯು ಅಥವಾ ಸಂದರ್ಭಾನುಸಾರ, ವ್ಯವಹಾರ ಇರುವ ಸ್ಥಳವು ಅಥವಾ ಮೂಲ ಸ್ಥಳವು ಯಾವ ರಿಜಿಸ್ಟ್ರಾರನ ಪ್ರಾದೇಶಿಕ ಅಧಿಕಾರವ್ಯಾಪ್ತಿಯೊಳಗೆ ಬರುವುದೋ ಆ ರಿಜಿಸ್ಟ್ರಾರನ ಪೂರ್ವಾನುಮೋದನೆಯನ್ನು ಪಡೆಯದೆ ವ್ಯವಹಾರವನ್ನು ಹೊಸ ಸ್ಥಳದಲ್ಲಿ ಪ್ರಾರಂಭಿಸತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಅಡಿಯಲ್ಲಿ ಅನುಮೋದನೆ ನೀಡುವುದಕ್ಕೂ ಮೊದಲು, ರಿಜಿಸ್ಟ್ರಾರನು, ಯಾವ ಸ್ಥಳದಲ್ಲಿ ವ್ಯವಹಾರವನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆಯೋ ಆ ಹೊಸ ಸ್ಥಳವು ಯಾವ ರಾಜ್ಯದ ಪ್ರಾದೇಶಿಕ ಅಧಿಕಾರವ್ಯಾಪ್ತಿಯೊಳಗೆ ಬರುತ್ತದೆಯೋ ಆ ರಾಜ್ಯದ ರಿಜಿಸ್ಟ್ರಾರನೊಂದಿಗೆ ಸಮಾಲೋಚಿಸತಕ್ಕದ್ದು ಮತ್ತು ಪ್ರವರ್ತಕನ ಹಣಕಾಸು ಸ್ಥಿತಿಯನ್ನು, ಕಾರ್ಯನಿರ್ವಹಣಾ ವಿಧಾನಗಳನ್ನು, ವ್ಯವಹಾರವನ್ನು ಹೊಸ ಸ್ಥಳದಲ್ಲಿ ಪ್ರಾರಂಭಿಸುವುದರಿಂದ ಸಾರ್ವಜನಿಕ ಹಿತದೃಷ್ಟಿಯು ಎಷ್ಟರಮಟ್ಟಿಗೆ ಈಡೇರುತ್ತದೆ ಎಂಬುದನ್ನು ಹಾಗೂ ನಿಯಮಿಸಬಹುದಾದಂಥ ಇತರ ವಿಷಯಗಳನ್ನು ಗಮನಿಸತಕ್ಕದ್ದು.

(3) ಚೀಟಿ ವ್ಯವಹಾರವನ್ನು ನಡೆಸುತ್ತಿರುವ ವ್ಯಕ್ತಿಯು, ಆತನ ನೋಂದಾಯಿತ ಕಚೇರಿಯು ಅಥವಾ ಸ್ಥಳವು ಇರುವ ಅಥವಾ ವ್ಯವಹಾರದ ಮೂಲ ಸ್ಥಳ ಇರುವ ರಾಜ್ಯವನ್ನು ಬಿಟ್ಟು (ಇದರಲ್ಲಿ ಇನ್ನು ಮುಂದೆ ಮೂಲ ರಾಜ್ಯವೆಂದು ಉಲ್ಲೇಖಿಸಲಾಗಿದೆ) ಇನ್ನೊಂದು ರಾಜ್ಯದಲ್ಲಿ ಹೊಸ ವ್ಯವಹಾರವನ್ನು ಪ್ರಾರಂಭಿಸಿದಲ್ಲಿ, ಆತನು ಪ್ರಾರಂಭಿಸಿದ್ದ ಹೊಸ ವ್ಯವಹಾರದ ಸ್ಥಳವು ಯಾವ ರಾಜ್ಯದಲ್ಲಿ ಬರುತ್ತದೆಯೋ ಆ ರಾಜ್ಯದ ರಿಜಿಸ್ಟ್ರಾರನು, ಅಂಥ ಹೊಸ ವ್ಯವಹಾರದ ಸ್ಥಳದಲ್ಲಿ ನಡೆಸುತ್ತಿರುವ ಚೀಟಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ, ಮೂಲ ರಾಜ್ಯದ ರಿಜಿಸ್ಟ್ರಾರನು ಚಲಾಯಿಸಬಹುದಾದ ಮತ್ತು ಪಾಲಿಸಬಹುದಾದ ಯಾವುವೇ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಸಹ ಚಲಾಯಿಸಬಹುದು ಮತ್ತು ನೆರವೇರಿಸಬಹುದು.

(4) ಈ ಪ್ರಕರಣದ ಉದ್ದೇಶಗಳಿಗಾಗಿ, "ವ್ಯವಹಾರದ ಸ್ಥಳ" ಎಂಬ ಪದವು ಯಾವುದೇ ಶಾಖಾ ಕಚೇರಿ, ಉಪ ಕಚೇರಿ ಅಥವಾ ಅಂಥ ವ್ಯಕ್ತಿಯು ಚೀಟಿ ವ್ಯವಹಾರವನ್ನು ನಡೆಸಬಹುದಾದ ವ್ಯವಹಾರದ ಯಾವುದೇ ಸ್ಥಳವನ್ನು ಒಳಗೊಳ್ಳುತ್ತದೆ.

## ಅಧ್ಯಾಯ III
## ಪ್ರವರ್ತಕನ ಹಕ್ಕುಗಳು ಮತ್ತು ಕರ್ತವ್ಯಗಳು

20. **ಪ್ರವರ್ತಕನು ನೀಡಬೇಕಾದ ಭದ್ರತೆ.**– (1) ಚೀಟಿಯನ್ನು ಸಮರ್ಪಕವಾಗಿ ನಡೆಸುವುದಕ್ಕಾಗಿ ಪ್ರತಿಯೊಬ್ಬ ಪ್ರವರ್ತಕನು, 4ನೇ ಪ್ರಕರಣದ ಅಡಿಯಲ್ಲಿ ಪೂರ್ವ ಮಂಜೂರಾತಿಗಾಗಿ ಅರ್ಜಿ ಸಲ್ಲಿಸುವುದಕ್ಕೂ ಮೊದಲು,–

(ಎ) ಚೀಟಿ ಮೊಬಲಗಿಗೆ ಸಮಾನವಾದ ಮೊಬಲಗನ್ನು, ರಿಜಿಸ್ಟ್ರಾರನ ಹೆಸರಿನಲ್ಲಿ ಅನುಮೋದಿತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು; ಅಥವಾ

(ಬಿ) ಚೀಟಿ ಮೊಬಲಗಿನ ಒಂದೂವರೆಯಷ್ಟಕ್ಕಿಂತ ಕಡಿಮೆಯಿರದ ಮುಖ ಬೆಲೆಯ ಅಥವಾ ಮಾರುಕಟ್ಟೆ ಬೆಲೆಯ (ಇವುಗಳಲ್ಲಿ ಯಾವುದು ಕಡಿಮೆಯದೋ ಅದು) ಸರ್ಕಾರಿ ಭದ್ರತೆಗಳನ್ನು ರಿಜಿಸ್ಟ್ರಾರನ ಹೆಸರಿಗೆ ವರ್ಗಾಯಿಸತಕ್ಕದ್ದು; ಅಥವಾ

(ಸಿ) ಭಾರತ ನ್ಯಾಸ ಅಧಿನಿಯಮ, 1882 (1882ರ 2)ರ 20ನೇ ಪ್ರಕರಣದ ಅಡಿಯಲ್ಲಿ ನ್ಯಾಸಧಾರಿಯು ಯಾವ ಭದ್ರತಾ ಪತ್ರಗಳಲ್ಲಿ ಹಣವನ್ನು ತೊಡಗಿಸಬಹುದಾಗಿದೆಯೋ, ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಮೌಲ್ಯದ ಅಂಥ ಇತರೆ ಭದ್ರತೆಗಳನ್ನು ರಿಜಿಸ್ಟ್ರಾರನ ಹೆಸರಿಗೆ ವರ್ಗಾಯಿಸತಕ್ಕದ್ದು:

ಪರಂತು, (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಭದ್ರತೆಗಳ ಮೌಲ್ಯವು, ಯಾವುದೇ ಸಂದರ್ಭದಲ್ಲಿ ಚೀಟಿ ಮೊಬಲಗಿನ ಮೌಲ್ಯದ ಒಂದೂವರೆಯಷ್ಟಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

(2) ಪ್ರವರ್ತಕನು ಒಂದಕ್ಕಿಂತ ಹೆಚ್ಚಿನ ಚೀಟಿಯನ್ನು ನಡೆಸುತ್ತಿರುವಲ್ಲಿ ಅವನು ಪ್ರತಿ ಚೀಟಿಯ ಸಂಬಂಧದಲ್ಲಿ (1)ನೇ ಉಪ–ಪ್ರಕರಣದ ಉಪಬಂಧಗಳಿಗನುಸಾರವಾಗಿ ಭದ್ರತೆಯನ್ನು ಒದಗಿಸತಕ್ಕದ್ದು.

(3) ರಿಜಿಸ್ಟ್ರಾರನು, ಚೀಟಿಯು ಜಾರಿಯಲ್ಲಿರುವ ಅವಧಿಯ ಯಾವುದೇ ಸಮಯದಲ್ಲಿ ಭದ್ರತೆಯ ಬದಲಾವಣೆಗೆ ಅನುಮತಿಸಬಹುದು:

ಪರಂತು, ಬದಲಾಯಿಸಲಾದ ಭದ್ರತೆಯ ಮುಖ ಬೆಲೆಯು ಅಥವಾ ಮಾರುಕಟ್ಟೆ ಬೆಲೆಯು (ಇವುಗಳಲ್ಲಿ ಯಾವುದು ಕಡಿಮೆಯದೋ ಅದು) ಪ್ರವರ್ತಕನು (1)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಲಾದ ಭದ್ರತೆಯ ಮೌಲ್ಯಕ್ಕಿಂತ ಕಡಿಮೆಯಿರತಕ್ಕದ್ದಲ್ಲ.

(4) ಪ್ರವರ್ತಕನು (1)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಲಾದ ಭದ್ರತೆ ಅಥವಾ (3)ನೇ ಉಪ–ಪ್ರಕರಣದ ಅಡಿಯಲ್ಲಿ ಬದಲಾಯಿಸಿದ ಭದ್ರತೆಯು, ಚೀಟಿಯು ಮುಕ್ತಾಯವಾಗುವವರೆಗೆ ಮತ್ತು ಎಲ್ಲಾ ವಂತಿಗೆದಾರರ ಕ್ಲೇಮುಗಳನ್ನು ಪೂರ್ಣವಾಗಿ ತೀರಿಸುವವರೆಗೆ ಡಿಕ್ರಿಯ ಅಮಲ್ಜಾರಿಯಾಗುವಾಗ ಅಥವಾ ಅನ್ಯಥಾ ಜಪ್ತಿ ಮಾಡುವುದಕ್ಕೆ ಗುರಿಯಾಗಿರತಕ್ಕದ್ದಲ್ಲ.

(5) ಚೀಟಿಯು ಮುಕ್ತಾಯವಾದಲ್ಲಿ ಮತ್ತು ರಿಜಿಸ್ಟ್ರಾರನು ಎಲ್ಲಾ ವಂತಿಗೆದಾರರ ಕ್ಲೇಮುಗಳನ್ನು ಪೂರ್ಣವಾಗಿ ಈಡೇರಿಸಲಾಗಿದೆಯೆಂದು ಮನಗಂಡರೆ, ಅವನು, (1)ನೇ ಉಪ–ಪ್ರಕರಣದ ಅಡಿಯಲ್ಲಿ ಪ್ರವರ್ತಕನು ಒದಗಿಸಿದ ಭದ್ರತೆಯನ್ನು ಅಥವಾ ಸಂದರ್ಭಾನುಸಾರ, (3)ನೇ ಉಪ–ಪ್ರಕರಣದ ಅಡಿಯಲ್ಲಿ ಬದಲಾವಣೆಗೆ ಅನುಮತಿಸಿದ್ದ ಭದ್ರತೆಯನ್ನು, ಬಿಡುಗಡೆ ಮಾಡುವಂತೆ ಆದೇಶಿಸತಕ್ಕದ್ದು ಮತ್ತು ಹಾಗೆ ಮಾಡುವಾಗ ಅವನು ನಿಯಮಿಸಬಹುದಾದಂಥ ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

(6) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ತದ್ವಿರುದ್ಧವಾದದ್ದು ಏನೇ ಒಳಗೊಂಡಿದ್ದರೂ, ಈ ಪ್ರಕರಣದ ಅಡಿಯಲ್ಲಿ ಒದಗಿಸಿದ ಭದ್ರತೆಯೊಂದಿಗೆ, ಅದು ಯಾವ ಚೀಟಿಗೆ ಸಂಬಂಧಿಸಿದೆಯೋ ಆ ಚೀಟಿಯು ಜಾರಿಯಲ್ಲಿರುವ ಅವಧಿಯಲ್ಲಿ ಪ್ರವರ್ತಕನು ವ್ಯವಹರಿಸತಕ್ಕದ್ದಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ರೂಪದಲ್ಲಿ ಅಥವಾ ಇತರ ಪೂರ್ವಾಧಿಗಳ ಮೂಲಕ ಪ್ರವರ್ತಕನು ಮಾಡಿದ ಯಾವುದೇ ವ್ಯವಹಾರವು ಅನೂರ್ಜಿತವಾಗತಕ್ಕದ್ದು.

21. **ಪ್ರವರ್ತಕನ ಹಕ್ಕುಗಳು.**– (1) ಪ್ರವರ್ತಕನು,

(ಎ) ಚೀಟಿ ಒಪ್ಪಂದದಲ್ಲಿ ತದ್ವಿರುದ್ಧವಾದ ಯಾವುದೇ ಉಪಬಂಧ ಇಲ್ಲದಿದ್ದಾಗ, ಚೀಟಿ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಿರುವ ಸೋಡಿಯನ್ನು ಕಳೆಯದೆಯೇ, ಅವನು ಚೀಟಿಯಲ್ಲಿನ ಟಿಕೆಟ್‌ಗೆ ವಂತಿಗೆ ನೀಡತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಪ್ರಥಮ ಕಂತಿನಲ್ಲಿ ಚೀಟಿ ಮೊಬಗಲನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, ಪ್ರವರ್ತಕನು ಒಂದಕ್ಕಿಂತ ಹೆಚ್ಚಿನ ಟಿಕೆಟ್‌ಗೆ ವಂತಿಗೆ ನೀಡಿರುವ ಸಂದರ್ಭದಲ್ಲಿ ಅವನು ಸೋಡಿಯಿಲ್ಲದೆ ಒಂದಕ್ಕಿಂತ ಹೆಚ್ಚಿನ ಚೀಟಿ ಮೊಬಲಗನ್ನು ಪಡೆಯಲು ಅರ್ಹನಾಗಿರತಕ್ಕದ್ದಲ್ಲ.

(ಬಿ) ಚೀಟಿ ಒಪ್ಪಂದದಲ್ಲಿ ನಿಗದಿಪಡಿಸಬಹುದಾದಂತೆ ಚೀಟಿ ಮೊಬಲಗಿನ ಶೇ. ಐದು ಪ್ರತಿಶತ ಮೀರದಂಥ ಮೊಬಲಗನ್ನು, ಕಮೀಷನ್ ರೂಪದಲ್ಲಿ, ಸಂಭಾವನೆ ರೂಪದಲ್ಲಿ ಅಥವಾ ಚೀಟಿಯನ್ನು ನಡೆಸುವುದಕ್ಕಾಗಿ ತಗುಲಿದ ವೆಚ್ಚವನ್ನು ಭರಿಸುವುದಕ್ಕಾಗಿ ಪಡೆಯಲು;

(ಸಿ) ಕಂತುಗಳ ಸಂದಾಯದಲ್ಲಿ ಯಾವುದೇ ಕಂತನ್ನು ಸಂದಾಯ ಮಾಡದ ತಪ್ಪಿಗಾಗಿ ಯಾವುದಾದರೂ ಬಡ್ಡಿಯನ್ನು ಮತ್ತು ದಂಡವನ್ನು ಸಂದಾಯ ಮಾಡುವುದಿದ್ದರೆ ಆ ಬಡ್ಡಿಯನ್ನು ಮತ್ತು ದಂಡವನ್ನು ಚೀಟಿ ಒಪ್ಪಂದದ ಉಪಬಂಧಗಳ ಪ್ರಕಾರ ಅವನಿಗೆ ಸಂದಾಯ ಮಾಡಬಹುದಾದಂಥ ಇತರೆ ಮೊಬಲಗು;

(ಡಿ) ವಂತಿಗೆದಾರರಿಂದ ಎಲ್ಲಾ ವಂತಿಗೆಗಳನ್ನು ಸ್ವೀಕರಿಸಲು ಮತ್ತು ವಸೂಲು ಮಾಡಲು ಮತ್ತು ಅದೃಷ್ಟವಂತ ವಂತಿಗೆದಾರರಿಗೆ ಬಹುಮಾನದ ಮೊಬಲಗನ್ನು ನೀಡಲು;

(ಇ) ಯಾರೇ ಅದೃಷ್ಟವಂತ ವಂತಿಗೆದಾರರು ಅವರು ಸಂದಾಯ ಮಾಡಬಹುದಾದ ಮುಂದಿನ ವಂತಿಗೆಗಳ ಬಾಕಿ ಸಂದಾಯಕ್ಕಾಗಿ ಅವನಿಂದ ಸಾಕಷ್ಟು ಭದ್ರತೆಯನ್ನು ಕೋರಲು,

**ವಿವರಣೆ:–** ಭದ್ರತೆಯ ಮೌಲ್ಯವು, ಅದೃಷ್ಟವಂತ ವಂತಿಗೆದಾರನಿಂದ ಬರಬೇಕಾಗಿರುವ ಮೊಬಲಗಿನ ಮೂರನೇ ಒಂದರಷ್ಟನ್ನು ಮೀರಿದರೆ ಅಥವಾ ಅದು ಸ್ಥಿರಾಸ್ತಿಗಳನ್ನು ಒಳಗೊಂಡಿದ್ದರೆ, ಅದರ ಮೌಲ್ಯದ ಅರ್ಧದಷ್ಟನ್ನು ಮೀರಿದರೆ, ಈ ಖಂಡದ ಉದ್ದೇಶಗಳಿಗಾಗಿ ಸಾಕಷ್ಟು ಭದ್ರತೆಯೆಂದು ಭಾವಿಸತಕ್ಕದ್ದು.

(ಎಫ್) ಸುಸ್ತಿ ವಂತಿಗೆದಾರರ ಸ್ಥಾನದಲ್ಲಿ ಬೇರೆ ವಂತಿಗೆದಾರರನ್ನು ಸೇರಿಸಿಕೊಳ್ಳಲು; ಮತ್ತು

(ಜಿ) ಚೀಟಿಯನ್ನು ಕ್ರಮಬದ್ಧವಾಗಿ ಮತ್ತು ಸೂಕ್ತ ರೀತಿಯಲ್ಲಿ ನಡೆಸುವುದಕ್ಕಾಗಿ ಅವಶ್ಯಕವಾಗಬಹುದಾದ ಎಲ್ಲಾ ಇತರೆ ಕಾರ್ಯಗಳನ್ನು ಮಾಡಲು;

– ಹಕ್ಕುಳ್ಳವನಾಗಿರತಕ್ಕದ್ದು.

(2) ಉಪ–ಪ್ರಕರಣ (1)ರ (ಇ) ಖಂಡದ ಅಡಿಯಲ್ಲಿ ಭದ್ರತೆಯಾಗಿ ನೀಡಿರುವ ಆಸ್ತಿಯ ಮೌಲ್ಯಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಉದ್ಭವಿಸಿದ್ದರೆ, 64ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥಿಕೆಗಾಗಿ ಅದನ್ನು ರಿಜಿಸ್ಟ್ರಾರನಿಗೆ ಒಪ್ಪಿಸತಕ್ಕದ್ದು.

**22. ಪ್ರವರ್ತಕನ ಕರ್ತವ್ಯಗಳು.–** (1) ಅದೃಷ್ಟವಂತ ವಂತಿಗೆದಾರನು ಮುಂದಿನ ವಂತಿಗೆಗಳ ಸಂದಾಯಕ್ಕಾಗಿ ಸಾಕಷ್ಟು ಭದ್ರತೆಯನ್ನು ಒದಗಿಸಿದ ತರುವಾಯ, ಪ್ರವರ್ತಕನು ಬಹುಮಾನಿತ ಮೊಬಲಗನ್ನು ಆ ಅದೃಷ್ಟವಂತ ವಂತಿಗೆದಾರನಿಗೆ ಸಂದಾಯ ಮಾಡಲು ಬದ್ಧನಾಗಿರತಕ್ಕದ್ದು:

ಪರಂತು, ಅದೃಷ್ಟವಂತ ವಂತಿಗೆದಾರನು ಮುಂದಿನ ಎಲ್ಲಾ ವಂತಿಗೆಗಳ ಮೊಬಲಗನ್ನು ಬಹುಮಾನಿತ ಮೊಬಲಗಿನಿಂದ ಕಡಿತಗೊಳಿಸಲು ಒಪ್ಪಿದರೆ, ಯಾವುದೇ ಭದ್ರತೆಯಿಲ್ಲದೆ ಬಹುಮಾನದ ಮೊಬಲಗಿನ ಸಂದಾಯವನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು ಮತ್ತು ಅಂಥ ಸಂದರ್ಭದಲ್ಲಿ, ಪ್ರವರ್ತಕನು ಡ್ರಾ ದಿನಾಂಕದ ತರುವಾಯ ಏಳು ದಿನಗಳೊಳಗೆ ಅಥವಾ ತದನಂತರದ ಕಂತಿನ ದಿನಾಂಕದ ಮುಂಚೆ, ಇವುಗಳಲ್ಲಿ ಯಾವುದು ಮೊದಲೋ ಆಗ, ಅದೃಷ್ಟವಂತ ವಂತಿಗೆದಾರನಿಗೆ ಬಹುಮಾನದ ಮೊಬಲಗನ್ನು ಸಂದಾಯ ಮಾಡತಕ್ಕದ್ದು:

ಮತ್ತೂ ಪರಂತು, ಮೊದಲನೆ ಪರಂತುಕದ ಅಡಿಯಲ್ಲಿ ಬಹುಮಾನದ ಮೊಬಲಗನ್ನು ಅದೃಷ್ಟವಂತ ವಂತಿಗೆದಾರನಿಗೆ ಸಂದಾಯ ಮಾಡಿದಾಗ, ಪ್ರವರ್ತಕನು ಕಡಿತಗೊಳಿಸಿದ ಮೊಬಲಗನ್ನು ಚೀಟಿ ಒಪ್ಪಂದದಲ್ಲಿ ನಮೂದಿಸಲಾದ ಅನುಮೋದಿತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಮತ್ತು ಹಾಗೆ ಠೇವಣಿ ಇಡಲಾದ ಮೊಬಲಗನ್ನು ಅವನು ಮುಂದಿನ ವಂತಿಗೆಗಳ ಸಂದಾಯಕ್ಕಾಗಿ ಹೊರತು, ಹಿಂತೆಗೆದುಕೊಳ್ಳತಕ್ಕದ್ದಲ್ಲ.

(2) ಅದೃಷ್ಟವಂತ ವಂತಿಗೆದಾರನ ತಪ್ಪಿನ ಕಾರಣದಿಂದಾಗಿ, ಮುಂಬರುವ ಕಂತಿನ ದಿನಾಂಕದವರೆಗೆ ಯಾವುದೇ ಡ್ರಾದ ಸಂಬಂಧದಲ್ಲಿ ಬಾಕಿಯಿರುವ ಬಹುಮಾನದ ಮೊಬಲಗನ್ನು ಸಂದಾಯ ಮಾಡದೆ ಉಳಿದಿದ್ದರೆ, ಪ್ರವರ್ತಕನು ಬಹುಮಾನದ ಮೊಬಲಗನ್ನು ಚೀಟಿ ಒಪ್ಪಂದದಲ್ಲಿ ನಮೂದಿಸಲಾದ ಅನುಮೋದಿತ ಬ್ಯಾಂಕ್‌ನ ಪ್ರತ್ಯೇಕ ಖಾತೆಯಲ್ಲಿ ಕೂಡಲೇ ಠೇವಣಿ ಇಡತಕ್ಕದ್ದು ಮತ್ತು ಅಂಥ ಠೇವಣಿಯ ಸಂಗತಿಯನ್ನು ಮತ್ತು ಅದಕ್ಕೆ ಕಾರಣಗಳನ್ನು ಅದೃಷ್ಟವಂತ ವಂತಿಗೆದಾರನಿಗೆ ಮತ್ತು ರಿಜಿಸ್ಟ್ರಾರನಿಗೆ ಲಿಖಿತದಲ್ಲಿ ತಿಳಿಸತಕ್ಕದ್ದು:

ಪರಂತು, ಯಾರೇ ಅದೃಷ್ಟವಂತ ವಂತಿಗೆದಾರನು ಚೀಟಿಯ ಯಾವುದೇ ಕಂತಿನ ಸಂಬಂಧದಲ್ಲಿನ ಬಹುಮಾನದ ಮೊಬಲಗನ್ನು ಡ್ರಾ ದಿನಾಂಕದಿಂದ ಎರಡು ತಿಂಗಳ ಅವಧಿಯೊಳಗಾಗಿ ಪಡೆದುಕೊಳ್ಳದಿದ್ದರೆ, ಅಂಥ ಕಂತಿನ ಸಂಬಂಧದಲ್ಲಿ ಇನ್ನೊಂದು ಡ್ರಾವನ್ನು ನಡೆಸುವುದಕ್ಕಾಗಿ ಪ್ರವರ್ತಕನಿಗೆ ಮುಕ್ತ ಅವಕಾಶ ಇರತಕ್ಕದ್ದು.

(3) ಉಪ–ಪ್ರಕರಣ (1)ರ ಅಡಿಯಲ್ಲಿನ ಬಹುಮಾನದ ಮೊಬಲಗಿನ ಅಥವಾ ಮುಂದಿನ ವಂತಿಗೆಗಳ ಮೊಬಲಗಿನ ಪ್ರತಿಯೊಂದು ಸಂದಾಯವನ್ನು, ಮತ್ತು (2)ನೇ ಉಪ–ಪ್ರಕರಣದ ಅಡಿಯಲ್ಲಿನ ಬಹುಮಾನದ ಮೊಬಲಗಿನ ಠೇವಣಿಯನ್ನು ಮುಂಬರುವ ಡ್ರಾದಲ್ಲಿ ವಂತಿಗೆದಾರರಿಗೆ ತಿಳಿಸತಕ್ಕದ್ದು ಮತ್ತು ಅಂಥ ಸಂದಾಯದ ಅಥವಾ ಠೇವಣಿಯ ವಿವರಗಳನ್ನು ಆ ಡ್ರಾದ ವ್ಯವಹರಣೆಗಳ ನಡವಳಿಯಲ್ಲಿ ನಮೂದಿಸತಕ್ಕದ್ದು.

(4) ಪ್ರವರ್ತಕನು 21ನೇ ಪ್ರಕರಣದ ಉಪ–ಪ್ರಕರಣ (1)ರ (ಬಿ) ಅಥವಾ (ಸಿ) ಖಂಡದ ಅಡಿಯಲ್ಲಿ ಅವನಿಗೆ ಹಕ್ಕುಳ್ಳ ಮೊಬಲಗನ್ನು ಮೀರಿ, ಯಾವುದೇ ಮೊಬಲಗನ್ನು ಸ್ವಂತಕ್ಕೆ ವಿನಿಯೋಗಿಸತಕ್ಕದ್ದಲ್ಲ:

ಪರಂತು, ಪ್ರವರ್ತಕನೇ ಅದೃಷ್ಟವಂತ ವಂತಿಗೆದಾರನಾಗಿರುವಲ್ಲಿ ಅವನು 31ನೇ ಪ್ರಕರಣದ ಉಪಬಂಧಗಳನ್ನು ಪಾಲಿಸುವುದಕ್ಕೆ ಒಳಪಟ್ಟು ಬಹುಮಾನದ ಮೊಬಲಗನ್ನು ಬಳಸಿಕೊಳ್ಳಲು ಹಕ್ಕುಳ್ಳವನಾಗಿರತಕ್ಕದ್ದು:

ಮತ್ತೂ ಪರಂತು, ಪ್ರವರ್ತಕನು ಉಪ–ಪ್ರಕರಣ (1)ರ ಎರಡನೇ ಪರಂತುಕದ ಅಡಿಯಲ್ಲಿ ಠೇವಣಿ ಇಡಲಾದ ಮೊಬಲಗಿನ ಮೇಲೆ ಬರುವ ಬಡ್ಡಿಯನ್ನು ಸ್ವಂತಕ್ಕೆ ವಿನಿಯೋಗಿಸಬಹುದು.

(5) ಪ್ರವರ್ತಕನು, ಚೀಟಿ ಒಪ್ಪಂದದಲ್ಲಿ ನಮೂದಿಸಲಾದ ಟಿಕೆಟ್‌ಗಳ ಒಟ್ಟು ಸಂಖ್ಯೆಯು ಯಾರೇ ವ್ಯಕ್ತಿಯನ್ನು ಚೀಟಿಗೆ ವಂತಿಗೆದಾರನಾಗಿ ಸೇರಿಸಿಕೊಳ್ಳುವುದರಿಂದ ಹೆಚ್ಚಾಗುತ್ತಿದ್ದರೆ, ಅಂಥ ಯಾರೇ ವ್ಯಕ್ತಿಯನ್ನು ವಂತಿಗೆದಾರನಾಗಿ ಸೇರಿಸಿಕೊಳ್ಳತಕ್ಕದ್ದಲ್ಲ.

(6) ಪ್ರವರ್ತಕನು, ಚೀಟಿ ಒಪ್ಪಂದದ ಅನುಸಾರವಾಗಿ, ಲಾಭಾಂಶವನ್ನು ನಗದು ರೂಪದಲ್ಲಾಗಲಿ, ಧಾನ್ಯದ ರೂಪದಲ್ಲಾಗಲಿ ಅಥವಾ ಮುಂದಿನ ಕಂತಿಗಾಗಿ ಸಂದಾಯ ಮಾಡಬಹುದಾದ ವಂತಿಗೆಗಳೇನಾದರೂ ಇದ್ದರೆ, ಅದನ್ನು ಹೊಂದಾಣಿಕೆ ಮಾಡುವುದರ ಮೂಲಕವಾಗಲಿ ವಂತಿಗೆದಾರರಲ್ಲಿ ಹಂಚಿಕೆ ಮಾಡತಕ್ಕದ್ದು.

23. **ಪ್ರವರ್ತಕನು ಪುಸ್ತಕ, ದಾಖಲೆಗಳು, ಇತ್ಯಾದಿಗಳನ್ನು ಇಡುವುದು.–** ಪ್ರವರ್ತಕನು ತನ್ನ ನೋಂದಾಯಿತ ಕಚೇರಿಯಲ್ಲಿ, ಅಥವಾ ಸಂದರ್ಭಾನುಸಾರ, ಆತನ ವ್ಯವಹಾರದ ಸ್ಥಳದಲ್ಲಿ ಅಥವಾ ವ್ಯವಹಾರದ ಮೂಲ ಸ್ಥಳದಲ್ಲಿ ಅಥವಾ ಪ್ರವರ್ತಕನು, ತನ್ನ ನೋಂದಾಯಿತ ಕಚೇರಿ ಇರುವ ಅಥವಾ ಆತನ ವ್ಯವಹಾರದ ಮೂಲ ಸ್ಥಳವಿರುವ ರಾಜ್ಯವನ್ನು ಹೊರತುಪಡಿಸಿ ಬೇರೆ ರಾಜ್ಯದಲ್ಲಿ ಚೀಟಿ ವ್ಯವಹಾರವನ್ನು ನಡೆಸುವುದಕ್ಕಾಗಿ ಯಾವುದೇ ಶಾಖಾ ಕಚೇರಿಯನ್ನು, ಉಪ ಕಚೇರಿಯನ್ನು ಅಥವಾ ವ್ಯವಹಾರದ ಯಾವುದೇ ಸ್ಥಳವನ್ನು ಹೊಂದಿರುವಲ್ಲಿ ಅಂಥ ಶಾಖಾ ಕಚೇರಿಯಲ್ಲಿ, ಉಪ ಕಚೇರಿಯಲ್ಲಿ ಅಥವಾ ವ್ಯವಹಾರದ ಸ್ಥಳದಲ್ಲಿ, ಆ ರಾಜ್ಯದಲ್ಲಿ ನಡೆಸುವ ವ್ಯವಹಾರಕ್ಕೆ ಸಂಬಂಧಪಟ್ಟಂತೆ,

(ಎ) ಒಂದು ರಿಜಿಸ್ಟರಿನಲ್ಲಿ ಎಂದರೆ,–

(i) ಪ್ರತಿಯೊಬ್ಬ ವಂತಿಗೆದಾರರು ಹೊಂದಿರುವ ಟಿಕೆಟ್‌ಗಳ ಸಂಖ್ಯೆಯ ಸಹಿತ ಪ್ರತಿಯೊಂದು ಚೀಟಿಯಲ್ಲಿನ ವಂತಿಗೆದಾರರ ಹೆಸರುಗಳು ಮತ್ತು ಪೂರ್ಣ ವಿವರಗಳನ್ನು;

(ii) ವಂತಿಗೆದಾರರು ಚೀಟಿ ಒಪ್ಪಂದಕ್ಕೆ ಸಹಿ ಮಾಡಿದ ದಿನಾಂಕಗಳನ್ನು; ಮತ್ತು

(iii) ವಂತಿಗೆದಾರನು ಟಿಕೆಟ್‌ನ್ನು ಹಸ್ತಾಂತರಿಸಿದ ಸಂದರ್ಭದಲ್ಲಿ ಹಸ್ತಾಂತರಣದ ದಿನಾಂಕವನ್ನು ಮತ್ತು ಪ್ರವರ್ತಕನು ಆ ಹಸ್ತಾಂತರಣವನ್ನು ಮಾನ್ಯ ಮಾಡಿದ ದಿನಾಂಕದೊಂದಿಗೆ ಹಸ್ತಾಂತರಧಾರಕನ ಹೆಸರನ್ನು ಮತ್ತು ಪೂರ್ಣ ವಿಳಾಸವನ್ನು

– ಒಳಗೊಂಡಿರುವ ರಿಜಿಸ್ಟರ್‌ನ್ನು;

(ಬಿ) ಪ್ರತಿ ಡ್ರಾದ ವ್ಯವಹರಣೆಗಳ ನಡವಳಿಗಳನ್ನು ಒಳಗೊಂಡಿರುವ ಒಂದು ಪುಸ್ತಕವನ್ನು;

(ಸಿ) ಒಂದು ಲೆಡ್ಜರಿನಲ್ಲಿ,–

(i) ಪ್ರತಿಯೊಂದು ಚೀಟಿಯಲ್ಲಿ ವಂತಿಗೆದಾರನು ಸಂದಾಯ ಮಾಡಿದ ಮೊಬಲಗನ್ನು ಮತ್ತು ಅಂಥ ಸಂದಾಯದ ದಿನಾಂಕವನ್ನು;

(ii) ಬಹುಮಾನಿತ ವಂತಿಗೆದಾರರಿಗೆ ಸಂದಾಯ ಮಾಡಿದ ಮೊಬಲಗನ್ನು ಮತ್ತು ಅಂಥ ಸಂದಾಯದ ದಿನಾಂಕವನ್ನು; ಮತ್ತು

(iii) ಚೀಟಿ ಒಪ್ಪಂದಲ್ಲಿ ನಮೂದಿಸಿರುವ ಅನುಮೋದಿತ ಬ್ಯಾಂಕಿನಲ್ಲಿ ಯಾವುದೇ ಠೇವಣಿ ಮಾಡಿದ ಸಂದರ್ಭದಲ್ಲಿ ಅಂಥ ಠೇವಣಿಯ ದಿನಾಂಕವನ್ನು ಮತ್ತು ಮೊಬಲಗನ್ನು

– ಒಳಗೊಂಡಿರುವ ಲೆಡ್ಜರ್‌ನ್ನು,

(ಡಿ) ಪ್ರವರ್ತಕನು ತನ್ನ ಕಾರ್ಯಾಲಯದಲ್ಲಿ ನಡೆಸುತ್ತಿರುವ ಎಲ್ಲಾ ಚೀಟಿಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಉಪಬಂಧಗಳ ಅಡಿಯಲ್ಲಿ ಅಗತ್ಯಪಡಿಸಲಾದಂತೆ ನಿಯಮಿಸಿದ ನಮೂನೆ ಪ್ರಕಾರ ಇರುವ ಅನುಮೋದಿತ ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಮೊಬಲಗನ್ನು ತೋರಿಸುವ ರಿಜಿಸ್ಟರನ್ನು; ಮತ್ತು

(ಇ) ಯಾವ ರಾಜ್ಯ ಸರ್ಕಾರದ ಅಧಿಕಾರವ್ಯಾಪ್ತಿಯೊಳಗೆ ಚೀಟಿಯನ್ನು ನಡೆಸಲಾಗುತ್ತಿದೆಯೋ ಆ ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ನಿಯಮಿಸಬಹುದಾದಂಥ ಇತರ ರಿಜಿಸ್ಟರ್‌ಗಳನ್ನು ಮತ್ತು ಪುಸ್ತಕಗಳನ್ನು

– ಇಡತಕ್ಕದ್ದು.

24. **ಜಮಾಖರ್ಚು ಪಟ್ಟಿ.–** ಕಂಪನಿಗಳ ಅಧಿನಿಯಮ, 1956 (1956ರ 1)ರ ಉಪಬಂಧಗಳಿಗೆ ಬಾಧಕವಾಗದಂತೆ, ಪ್ರತಿಯೊಬ್ಬ ಪ್ರವರ್ತಕನು ಪ್ರತಿಯೊಂದು ಕ್ಯಾಲೆಂಡರ್ ವರ್ಷದ ಕೊನೆಯ ದಿನಾಂಕದಂದು ಅಥವಾ ಸಂದರ್ಭಾನುಸಾರ ಪ್ರವರ್ತಕನ ಹಣಕಾಸು ವರ್ಷದ ಕೊನೆಯ ದಿನಾಂಕದಂದು ಇರುವಂತಹ ಜಮಾ ಖರ್ಚು ಪಟ್ಟಿಯನ್ನು ಮತ್ತು ಲೆಕ್ಕದ ವರ್ಷಕ್ಕೆ ಸಂಬಂಧಪಡುವ ಮತ್ತು ಕಂಪನಿಗಳ ಅಧಿನಿಯಮ, 1956ರ ಅಡಿಯಲ್ಲಿ ಲೆಕ್ಕಪರಿಶೋಧಕರಾಗಿ ಕೆಲಸ ಮಾಡಲು ಅರ್ಹರಾಗಿರುವ ಲೆಕ್ಕಪರಿಶೋಧಕರಿಂದ ಅಥವಾ 61ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಚೀಟಿ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆ ಮಾಡಿಸಿದ ಲಾಭ ಮತ್ತು ನಷ್ಟ ಲೆಕ್ಕವನ್ನು ಅನುಸೂಚಿಯ ಭಾಗ–I ರಲ್ಲಿ ಮತ್ತು ಭಾಗ–IIರಲ್ಲಿ ಹೇಳಿರುವ ನಮೂನೆಗಳಲ್ಲಿ ಅಥವಾ ಚೀಟಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ಆ ಸನ್ನಿವೇಶಗಳಿಗೆ ಹೊಂದುವಂತೆ ಹೆಚ್ಚು ಕಡಿಮೆ ಅದೇ ರೀತಿಯ ನಮೂನೆಗಳಲ್ಲಿ ನಿಯಮಿಸಬಹುದಾದಂಥ ಕಾಲದೊಳಗೆ ಸಿದ್ಧಪಡಿಸತಕ್ಕದ್ದು ಮತ್ತು ಅವರಿಗೆ ಸಲ್ಲಿಸತಕ್ಕದ್ದು:

ಪರಂತು, ಜಮಾ ಖರ್ಚು ಪಟ್ಟಿಯನ್ನು ಕಂಪನಿಗಳ ಅಧಿನಿಯಮ, 1956 (1956ರ 1)ರ ಅಡಿಯಲ್ಲಿ ಲೆಕ್ಕಪರಿಶೋಧಕರಾಗಿ ಕೆಲಸ ಮಾಡಲು ಅರ್ಹರಾಗಿರುವ ಲೆಕ್ಕಪರಿಶೋಧಕನಿಂದ ಲೆಕ್ಕಪರಿಶೋಧನೆ ಮಾಡಿಸಿದ್ದರೆ, 61ನೇ ಪ್ರಕರಣದ ಅಡಿಯಲ್ಲಿ ನೇಮಕಗೊಂಡ ಚೀಟಿ ಲೆಕ್ಕಪರಿಶೋಧಕನಿಗೆ ರಿಜಿಸ್ಟ್ರಾರರ ಜಮಾ ಖರ್ಚು ಪಟ್ಟಿಯ ಲೆಕ್ಕ ಪರಿಶೋಧನೆ ಮಾಡಲು ಅಧಿಕಾರ ಕೊಟ್ಟಿದ್ದರೆ ಅವನು ಹೇಗೆ ಲೆಕ್ಕ ಪರಿಶೋಧನೆ ಮಾಡಬಹುದಾಗಿತ್ತೋ ಹಾಗೆ ಯಾವುದೇ ಸಮಯದಲ್ಲಿ ಆ ಜಮಾ ಖರ್ಚು ಪಟ್ಟಿಯ ಲೆಕ್ಕ ಪರಿಶೋಧನೆ ಮಾಡುವ ಹಕ್ಕು ಹೊಂದಿರತಕ್ಕದ್ದು.

**25. ವಂತಿಗೆದಾರರಿಗೆ ಪ್ರವರ್ತಕನ ಹೊಣೆಗಾರಿಕೆ.**- (1) ಪ್ರತಿಯೊಬ್ಬ ಪ್ರವರ್ತಕನು ವಂತಿಗೆದಾರರಿಗೆ ಕೊಡಬೇಕಾಗಿರುವ ಮೊಬಲಗುಗಳ ಬಗ್ಗೆ ಅವರಿಗೆ ಲೆಕ್ಕಕೊಡಲು ಹೊಣೆಯಾಗಿರತಕ್ಕದ್ದು.

(2) ಚೀಟಿಯಲ್ಲಿ ಒಬ್ಬನಿಗಿಂತ ಹೆಚ್ಚಿನ ಪ್ರವರ್ತಕರು ಇರುವಲ್ಲಿ, ಅವರಲ್ಲಿ ಪ್ರತಿಯೊಬ್ಬನೂ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಮತ್ತು ಪ್ರವರ್ತಕನು ಫರ್ಮ್ ಆಗಿದ್ದರೆ ಅಥವಾ ವ್ಯಕ್ತಿಗಳ ಇತರ ಸಂಘವಾಗಿದ್ದಲ್ಲಿ, ಅದರ ಪಾಲುದಾರರಲ್ಲಿ ಮತ್ತು ವ್ಯಕ್ತಿಗಳಲ್ಲಿ ಪ್ರತಿಯೊಬ್ಬರೂ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಮತ್ತು ಪ್ರವರ್ತಕನು ಕಂಪನಿಯಾಗಿದ್ದರೆ, ಅಂಥ ಕಂಪನಿಯು, ಚೀಟಿಯಿಂದ ಉದ್ಭವಿಸುವ ಬಾಧ್ಯತೆಗಳಿಗೆ ಸಂಬಂಧಪಟ್ಟಂತೆ ವಂತಿಗೆದಾರರಿಗೆ ಹೊಣೆಯಾಗಿರತಕ್ಕದ್ದು.

**26. ಪ್ರವರ್ತಕನು ಹಿಂದೆ ಸರಿಯುವುದು.**- (1) ಯಾರೇ ಪ್ರವರ್ತಕನು ಅಥವಾ ಚೀಟಿಯಲ್ಲಿ ಒಬ್ಬರಿಗಿಂತ ಹೆಚ್ಚಿನ ಪ್ರವರ್ತಕರು ಇದ್ದರೆ, ಅವರಲ್ಲಿ ಯಾರೇ ಪ್ರವರ್ತಕನು, ಹಾಗೆ ಹಿಂದೆ ಸರಿಯುವುದಕ್ಕೆ ಎಲ್ಲಾ ಬಹುಮಾನಿತರಲ್ಲದ ಮತ್ತು ಸಂದಾಯಿತರಲ್ಲದ ಎಲ್ಲಾ ವಂತಿಗೆದಾರರು, ಲಿಖಿತದಲ್ಲಿ ಅನುಮತಿಸಿದ ಹೊರತು ಮತ್ತು 41ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರರಿಗೆ ಆ ಅನುಮತಿಯ ಪ್ರತಿಯನ್ನು ಸಲ್ಲಿಸಿದ ಹೊರತು ಚೀಟಿಯು ಮುಕ್ತಾಯವಾಗುವವರೆಗೆ ಚೀಟಿ ವ್ಯವಹಾರದಿಂದ ಹಿಂದೆ ಸರಿಯತಕ್ಕದ್ದಲ್ಲ.

(2) ಪ್ರವರ್ತಕರಲ್ಲಿ ಯಾರಾದರೂ ಚೀಟಿಯಿಂದ ಹಿಂದೆ ಸರಿದಿದ್ದರೆ 20ನೇ ಅಥವಾ 31ನೇ ಪ್ರಕರಣದ ಅಡಿಯಲ್ಲಿ ಅವನು ನೀಡಿದ ಭದ್ರತೆಗೆ ಅದರಿಂದ ಯಾವ ಬಾಧಕವೂ ಆಗತಕ್ಕದ್ದಲ್ಲ.

## ಅಧ್ಯಾಯ – IV

## ಅದೃಷ್ಟವಂತರಲ್ಲದ ವಂತಿಗೆದಾರರ ಹಕ್ಕುಗಳು ಮತ್ತು ಕರ್ತವ್ಯಗಳು

**27. ಅದೃಷ್ಟವಂತರಲ್ಲದ ವಂತಿಗೆದಾರರು ವಂತಿಗೆಗಳನ್ನು ಸಂದಾಯ ಮಾಡುವುದು ಮತ್ತು ರಸೀದಿಯನ್ನು ಪಡೆಯುವುದು.**- ಪ್ರತಿಯೊಬ್ಬ ಅದೃಷ್ಟವಂತನಲ್ಲದ ವಂತಿಗೆದಾರನು, ಪ್ರತಿಯೊಂದು ಕಂತಿಗೆ ಸಂಬಂಧಪಟ್ಟಂತೆ ಚೀಟಿ ಒಪ್ಪಂದದಲ್ಲಿ ನಮೂದಿಸಿರುವ ದಿನಾಂಕದಂದು ಮತ್ತು ಸಮಯಗಳಂದು ಮತ್ತು ನಮೂದಿಸಿರುವ ಸ್ಥಳದಲ್ಲಿ ಕಂತನ್ನು ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಸಂದಾಯ ಮಾಡಿದ ನಂತರ ಪ್ರವರ್ತಕನಿಂದ ರಸೀದಿಯನ್ನು ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

**28. ಸುಸ್ತಿ ವಂತಿಗೆದಾರರನ್ನು ತೆಗೆದುಹಾಕುವುದು.**- (1) ಚೀಟಿ ಒಪ್ಪಂದಗಳ ನಿಬಂಧನೆಗಳಿಗನುಸಾರವಾಗಿ ತನ್ನ ವಂತಿಗೆಗಳನ್ನು ಸಂದಾಯ ಮಾಡಲು ತಪ್ಪಿರುವ ಬಹುಮಾನಿತನಲ್ಲದ ವಂತಿಗೆದಾರನು ವಂತಿಗೆದಾರರ ಪಟ್ಟಿಯಿಂದ ತನ್ನ ಹೆಸರನ್ನು ತೆಗೆದು ಹಾಕಲ್ಪಡುವುದಕ್ಕೆ ಗುರಿಯಾಗತಕ್ಕದ್ದು ಮತ್ತು ತೆಗೆದುಹಾಕುವ ಬಗೆಗಿನ ಲಿಖಿತ ನೋಟೀಸನ್ನು ಹಾಗೆ ತೆಗೆದು ಹಾಕುವ ದಿನಾಂಕದ ಹದಿನಾಲ್ಕು ದಿನಗಳೊಳಗೆ ಪ್ರವರ್ತಕನು ಸುಸ್ತಿ ವಂತಿಗೆದಾರನಿಗೆ ನೀಡತಕ್ಕದ್ದು:

ಪರಂತು, ಸುಸ್ತಿ ಕಂತನ್ನು ನಿಯಮಿಸಬಹುದಾದಂಥ ದರದ ಬಡ್ಡಿಯೊಂದಿಗೆ ಅಂಥ ನೋಟೀಸು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸುಸ್ತಿದಾರನು ಸಂದಾಯ ಮಾಡಿದರೆ, ಆತನ ಹೆಸರನ್ನು ಅಂಥ ವಂತಿಗೆದಾರರ ಪಟ್ಟಿಯಲ್ಲಿ ಪುನಃ ಸೇರಿಸತಕ್ಕದ್ದು.

(2) ಉಪ-ಪ್ರಕರಣ (1)ರ ಅಡಿಯಲ್ಲಿ ಹಾಗೆ ತೆಗೆದು ಹಾಕಿದ ಪ್ರತಿಯೊಂದನ್ನು ಪ್ರವರ್ತಕನು ಇಟ್ಟಿರುವ ಸಂಬಂಧಪಟ್ಟ ಪುಸ್ತಕದಲ್ಲಿ ದಿನಾಂಕದೊಂದಿಗೆ ನಮೂದಿಸತಕ್ಕದ್ದು.

(3) ಉಪ-ಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ನಮೂದಿನ ನಕಲು ಪ್ರತಿಯನ್ನು, ಹೆಸರನ್ನು ತೆಗೆದು ಹಾಕಿದ ದಿನಾಂಕದಿಂದ ಹದಿನಾಲ್ಕು ದಿವಸಗಳೊಳಗೆ ಪ್ರವರ್ತಕನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

(4) ವಂತಿಗೆದಾರರ ಪಟ್ಟಿಯಿಂದ ಹೆಸರು ತೆಗೆದುಹಾಕಿರುವುದರಿಂದ ಬಾಧಿತನಾದ ಯಾರೇ ಸುಸ್ತಿ ವಂತಿಗೆದಾರನು, ತೆಗೆದು ಹಾಕಿರುವ ಬಗೆಗಿನ ನೋಟೀಸನ್ನು ಸ್ವೀಕರಿಸಿದ ದಿನಾಂಕದಿಂದ ಏಳು ದಿನಗಳೊಳಗೆ 64ನೇ ಪ್ರಕರಣದ ಅಡಿಯಲ್ಲಿ ಮಧ್ಯಸ್ಥಿಕೆಗಾಗಿ ವಿಷಯವನ್ನು ರಿಜಿಸ್ಟ್ರಾರನಿಗೆ ಒಪ್ಪಿಸಬಹುದು.

**29. ವಂತಿಗೆದಾರರ ಬದಲಿಗೆ ಬೇರೆಯವರನ್ನು ಸೇರಿಸುವುದು.**- (1) ಪ್ರವರ್ತಕನು 28ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಯಾವ ಸುಸ್ತಿದಾರನ ಹೆಸರನ್ನು ತೆಗೆದುಹಾಕಲಾಗಿದೆಯೋ ಆ ಸುಸ್ತಿ ವಂತಿಗೆದಾರನ ಸ್ಥಾನದಲ್ಲಿ (ಈ ಅಧ್ಯಾಯದಲ್ಲಿ ಇನ್ನು ಮುಂದೆ ಬದಲಿ ವಂತಿಗೆದಾರನೆಂದು ಉಲ್ಲೇಖಿಸಲಾಗಿದೆ) ಬೇರೆ ಯಾರೇ ವ್ಯಕ್ತಿಯನ್ನು ವಂತಿಗೆದಾರರ ಪಟ್ಟಿಯಲ್ಲಿ ಸೇರಿಸಬಹುದು.

(2) ಉಪ-ಪ್ರಕರಣ (1)ರಲ್ಲಿ ಹೇಳಿರುವಂತೆ, ಬದಲಿಗೆ ಸೇರಿಸಿರುವ ಹೆಸರನ್ನು ಪ್ರವರ್ತಕನು ಇಟ್ಟಿರುವ ಸಂಬಂಧಪಟ್ಟ ಪುಸ್ತಕದಲ್ಲಿ ದಿನಾಂಕದೊಂದಿಗೆ ನಮೂದಿಸತಕ್ಕದ್ದು ಮತ್ತು ಪ್ರತಿಯೊಂದು ಅಂಥ ನಮೂದನೆಯ ನಕಲು ಪ್ರತಿಯನ್ನು ಬದಲಿಯಾಗಿ ಸೇರಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಪ್ರವರ್ತಕನು ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

**30. ಸುಸ್ತಿ ವಂತಿಗೆದಾರರಿಗೆ ಕೊಡಬೇಕಾಗಿರುವ ಮೊಬಲಗು.**- (1) ಪ್ರವರ್ತಕನು ಬದಲಿಗೆ ಸೇರಿಸಿದ ದಿನಾಂಕದ ಮುಂಚಿನ ಅವಧಿಗೆ ಸಂಬಂಧಿಸಿದ ಕಂತುಗಳಿಗೆ ಸಂಬಂಧಪಟ್ಟಂತೆ ಬದಲಿ ವಂತಿಗೆದಾರನು ಸಂದಾಯ ಮಾಡಬಹುದಾದ ಮತ್ತು ಅವನಿಂದ ವಸೂಲು ಮಾಡಿದ (ಸುಸ್ತಿ ವಂತಿಗೆದಾರನಿಂದ ಬರಬೇಕಾಗಿರುವ ಬಾಕಿಗಳು ಸೇರಿದಂತೆ) ಮೊಬಲಗಿನಿಂದ ಮುಂದಿನ ಕಂತಿನ ದಿನಾಂಕಕ್ಕೆ ಮುಂಚೆ, ಚೀಟಿ ಒಪ್ಪಂದದಲ್ಲಿ ನಮೂದಿಸಿರುವ ಅನುಮೋದಿತ ಬ್ಯಾಂಕ್‌ನಲ್ಲಿ ಪ್ರತ್ಯೇಕವಾಗಿ ಗುರುತಿಸಬಹುದಾದ ಖಾತೆಯಲ್ಲಿ, ಚೀಟಿ ಒಪ್ಪಂದದಲ್ಲಿ ಅವಕಾಶ ಕಲ್ಪಿಸಿರಬಹುದಾದಂಥ ಕಡಿತ ಮಾಡಿದ ನಂತರ ಸುಸ್ತಿ ವಂತಿಗೆದಾರನು ನೀಡಿರುವ ವಂತಿಗೆಗಳಿಗೆ ಸಮನಾದ ಮೊತ್ತವನ್ನು ಠೇವಣಿ ಇಡತಕ್ಕದ್ದು ಮತ್ತು ಅಂಥ ಠೇವಣಿಯ ಸಂಗತಿಯನ್ನು ಸುಸ್ತಿ ವಂತಿಗೆದಾರನಿಗೆ

ಹಾಗೂ ರಿಜಿಸ್ಟ್ರಾರನಿಗೆ ತಿಳಿಸತಕ್ಕದ್ದು ಮತ್ತು ಹಾಗೆ ಠೇವಣಿ ಇಟ್ಟ ಮೊಬಲಗನ್ನು ಸುಸ್ತಿ ವಂತಿಗೆದಾರನಿಗೆ ಸಂದಾಯ ಮಾಡುವುದಕ್ಕಾಗಿ ಹೊರತು ಹಿಂತೆಗೆದುಕೊಳ್ಳತಕ್ಕದ್ದಲ್ಲ.

(2) ಉಪ-ಪ್ರಕರಣ (1)ರ ಅಡಿಯಲ್ಲಿ ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು ಸುಸ್ತಿ ವಂತಿಗೆದಾರನು ಕ್ಲೇಮು ಮಾಡಿದಾಗ ಅವನಿಗೆ ಆ ಮೊಬಲಗನ್ನು ಸಂದಾಯ ಮಾಡತಕ್ಕದ್ದು ಮತ್ತು ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು ಪ್ರವರ್ತಕನು ಹಾಗೆ ಸಂದಾಯ ಮಾಡುವುದಕ್ಕಾಗಿ ಅಲ್ಲದೆ ಬೇರೆ ಯಾವುದೇ ಉದ್ದೇಶಕ್ಕಾಗಿ ಹಿಂತೆಗೆದುಕೊಳ್ಳತಕ್ಕದ್ದಲ್ಲ.

(3) ಚೀಟಿ ಮುಕ್ತಾಯವಾಗುವವರೆಗೆ ಯಾರೇ ಸುಸ್ತಿ ವಂತಿಗೆದಾರನ ಬದಲಿಗೆ ಬೇರೆಯವರನ್ನು ಸೇರಿಸಿಕೊಳ್ಳದಿದ್ದರೆ ಆ ಸುಸ್ತಿ ವಂತಿಗೆದಾರನ ವಂತಿಗೆಗಳನ್ನು ಚೀಟಿ ಒಪ್ಪಂದದಲ್ಲಿ ಅದಕ್ಕಾಗಿ ಉಪಬಂಧಿಸಿರುವಂಥ ಕಡಿತಗಳಿಗೊಳಪಟ್ಟು ಚೀಟಿ ಮುಕ್ತಾಯದ ದಿನಾಂಕದಿಂದ ಹದಿನೈದು ದಿನಗಳೊಳಗೆ ಅವನಿಗೆ ಸಂದಾಯ ಮಾಡತಕ್ಕದ್ದು.

## ಅಧ್ಯಾಯ V

## ಬಹುಮಾನಿತ ವಂತಿಗೆದಾರರ ಹಕ್ಕುಗಳು ಮತ್ತು ಕರ್ತವ್ಯಗಳು

**31. ಬಹುಮಾನಿತ ವಂತಿಗೆದಾರನು ಭದ್ರತೆಯನ್ನು ಒದಗಿಸುವುದು.–** ಪ್ರತಿಯೊಬ್ಬ ಬಹುಮಾನಿತ ವಂತಿಗೆದಾರನು, ತನಗೆ ಬರಬೇಕಾಗಿರುವ ಬಹುಮಾನದ ಮೊತ್ತದಿಂದ ಮುಂದಿನ ಎಲ್ಲಾ ವಂತಿಗೆಗಳ ಮೊತ್ತವನ್ನು ಮುರಿದುಕೊಳ್ಳುವುದಕ್ಕೆ ಸೂಚಿಸದಿದ್ದರೆ, ಕೊಡಬೇಕಾಗಿರುವ ಮುಂದಿನ ಎಲ್ಲಾ ವಂತಿಗೆಗಳ ಸೂಕ್ತ ಸಂದಾಯಕ್ಕಾಗಿ ಸಾಕಷ್ಟು ಭದ್ರತೆಯನ್ನು ಒದಗಿಸತಕ್ಕದ್ದು ಮತ್ತು ಪ್ರವರ್ತಕನು ತೆಗೆದುಕೊಳ್ಳತಕ್ಕದ್ದು, ಮತ್ತು ಪ್ರವರ್ತಕನೇ ಬಹುಮಾನಿತ ವಂತಿಗೆದಾರನಾಗಿದ್ದರೆ, ಅಂತಹ ಭದ್ರತೆಯನ್ನು ಆತನಿಂದ ಕೊಡಬೇಕಾಗಿರುವ ಮುಂದಿನ ಎಲ್ಲಾ ವಂತಿಗೆಗಳ ಸಂದಾಯಕ್ಕಾಗಿ ರಿಜಿಸ್ಟ್ರಾರನಿಗೆ ಮನವರಿಕೆಯಾಗುವಂತಹ ಭದ್ರತೆಯನ್ನು ನೀಡತಕ್ಕದ್ದು.

**32. ಬಹುಮಾನಿತ ವಂತಿಗೆದಾರನು ಕ್ರಮಬದ್ಧವಾಗಿ ವಂತಿಗೆಗಳನ್ನು ಸಂದಾಯ ಮಾಡುವುದು.–** ಪ್ರತಿಯೊಬ್ಬ ಬಹುಮಾನಿತ ವಂತಿಗೆದಾರನು, ಚೀಟಿ ಒಪ್ಪಂದದಲ್ಲಿ ನಮೂದಿಸಿರುವ ದಿನಾಂಕದಂದು ಮತ್ತು ಸಮಯದಂದು ಮತ್ತು ಆ ಸ್ಥಳದಲ್ಲಿ ಕ್ರಮಬದ್ಧವಾಗಿ ತನ್ನ ವಂತಿಗೆಗಳನ್ನು ಸಂದಾಯ ಮಾಡತಕ್ಕದ್ದು ಮತ್ತು ಅವನು ಹಾಗೆ ಮಾಡಲು ವಿಫಲನಾದರೆ, ಕೂಡಲೆ ಮುಂದಿನ ಎಲ್ಲಾ ವಂತಿಗೆಗಳ ಒಟ್ಟು ಮೊಬಲಗನ್ನು ಸಂದಾಯ ಮಾಡುವುದಕ್ಕೆ ಹೊಣೆಯಾಗತಕ್ಕದ್ದು.

**33. ಪ್ರವರ್ತಕನು ಲಿಖಿತ ನೋಟೀಸಿನ ಮೂಲಕ ಮುಂದಿನ ವಂತಿಗೆಗಳಿಗೆ ತಗಾದೆ ಮಾಡುವುದು.–** (1) ಪ್ರವರ್ತಕನು, 32ನೇ ಪ್ರಕರಣದ ಅಡಿಯಲ್ಲಿ ಸುಸ್ತಿ ಬಹುಮಾನಿತ ವಂತಿಗೆದಾರನಿಂದ ಕ್ರೋಡೀಕೃತ ಒಟ್ಟು ಮೊಬಲಗನ್ನು ಸಂದಾಯ ಮಾಡುವಂತೆ, ಆ ಬಗ್ಗೆ ಲಿಖಿತದಲ್ಲಿ ತಗಾದೆ ಮಾಡಿದ್ದ ಹೊರತು ಹಾಗೆ ಕೋರಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ, ಸುಸ್ತಿ ಬಹುಮಾನಿತ ವಂತಿಗೆದಾರನಿಂದ ಬರಬೇಕಾದ ಮುಂದಿನ ವಂತಿಗೆಗಳ ಹಣದ ಒಟ್ಟು ಸಂದಾಯಕ್ಕಾಗಿ ಪ್ರವರ್ತಕನು ಯಾವುದೇ ವಿವಾದ ಎತ್ತಿದಲ್ಲಿ ಮತ್ತು ವಿವಾದದ ವಿಚಾರಣೆಗಾಗಿ ನಿಗದಿ ಮಾಡಿದ ದಿನಾಂಕದಂದು ಅಥವಾ ಆ ದಿನಾಂಕಕ್ಕೆ ಮುಂಚೆ ವಂತಿಗೆದಾರನು, ಆ ದಿನಾಂಕದವರೆಗೆ ಬಾಕಿ ಇದ್ದ ವಂತಿಗೆಗಳ ಹಣವನ್ನು ಚೀಟಿ ಒಪ್ಪಂದದಲ್ಲಿ ಅದಕ್ಕಾಗಿ ಉಪಬಂಧಿಸಿರುವ ದರದಲ್ಲಿ ಬಡ್ಡಿ ಸಹಿತವಾಗಿ ಮತ್ತು ವಿವಾದದ ನ್ಯಾಯನಿರ್ಣಯಕ್ಕೆ ತಗುಲಿದ ವೆಚ್ಚವನ್ನು ಪ್ರವರ್ತಕನಿಗೆ ಸಂದಾಯ ಮಾಡಿದರೆ, ವಿವಾದದ ವಿಚಾರಣೆ ಮಾಡುವ ರಿಜಿಸ್ಟ್ರಾರನು ಅಥವಾ ಆತನ ನಾಮನಿರ್ದೇಶಿತನು, ತದ್ವಿರುದ್ಧವಾದ ಯಾವುದೇ ಕರಾರು ಇದ್ದರೂ, ಮುಂದಿನ ವಂತಿಗೆಗಳನ್ನು ಕೊಡಬೇಕಾದ ದಿನಾಂಕದಂದು ಅಥವಾ ದಿನಾಂಕಕ್ಕೆ ಮುಂಚೆ ಅವುಗಳನ್ನು ವಂತಿಗೆದಾರನು ಪ್ರವರ್ತಕನಿಗೆ ಸಂದಾಯ ಮಾಡಬೇಕೆಂದು ನಿರ್ದೇಶಿಸುವ ಆದೇಶವನ್ನು ಮಾಡಬಹುದು ಮತ್ತು ವಂತಿಗೆದಾರನು ಅಂಥ ಯಾವುವೇ ವಂತಿಗೆಗಳನ್ನು ಬಡ್ಡಿ ಸಮೇತ ಸಲ್ಲಿಸಲು ತಪ್ಪಿದ ಸಂದರ್ಭದಲ್ಲಿ ಪ್ರವರ್ತಕನು, ಆ ಆದೇಶವನ್ನು ಜಾರಿ ಮಾಡಿಸಿಕೊಂಡು ಮುಂದಿನ ಎಲ್ಲ ವಂತಿಗೆಗಳನ್ನು ಮತ್ತು ವೆಚ್ಚಗಳೇನಾದರೂ ಆಗಿದ್ದರೆ, ಅವುಗಳನ್ನು ಮತ್ತು ಅದಕ್ಕೆ ಸಂಬಂಧಪಟ್ಟಂತೆ ವಂತಿಗೆದಾರನು ಈಗಾಗಲೇ ಏನನ್ನಾದರೂ ಸಂದಾಯ ಮಾಡಿದ್ದರೆ, ಅದನ್ನು ಕಳೆದು ವಸೂಲಿ ಮಾಡಲು ಸ್ವತಂತ್ರನಾಗಿರತಕ್ಕದ್ದು:

ಪರಂತು, ಯಾವುದೇ ಅಂಥ ವಿವಾದವು ಪ್ರಾಮಿಸರಿ ನೋಟ್‌ಗೆ ಸಂಬಂಧಿಸಿದ್ದಾಗಿದ್ದರೆ, ಅಂಥ ಪ್ರಾಮಿಸರಿ ನೋಟಿನ ಪ್ರಕಾರ ಬಾಕಿ ಇರುವ ಮೊಬಲಗು ಈ ಚೀಟಿಗೆ ಸಂಬಂಧಿಸಿದ ವಂತಿಗೆಗಳ ಸಂದಾಯಕ್ಕೆ ಸಂಬಂಧಿಸಿದ ಬಾಕಿಯೆಂದು ಸ್ಪಷ್ಟವಾಗಿ ಹೇಳಿದ್ದ ಹೊರತು, ಈ ಉಪ-ಪ್ರಕರಣದ ಅಡಿಯಲ್ಲಿ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(3) ಭದ್ರತೆಯಾಗಿ ಅಥವಾ ಅದರ ಭಾಗವಾಗಿ ಒದಗಿಸಿದ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿ ಹೊಂದಿರುವ ಯಾರೇ ವ್ಯಕ್ತಿಯು, (2)ನೇ ಉಪ-ಪ್ರಕರಣದ ಅಡಿಯಲ್ಲಿ ಹೇಳಿರುವುದನ್ನು ಸಂದಾಯ ಮಾಡಲು ಹಕ್ಕುಳ್ಳವನಾಗಿರತಕ್ಕದ್ದು.

(4) ಪ್ರವರ್ತಕನು ವಸೂಲಿ ಮಾಡಿದ ಮುಂದಿನ ವಂತಿಗೆಗಳ ಎಲ್ಲಾ ಒಟ್ಟು ಹಣದ ಸಂದಾಯಗಳನ್ನು, ಮುಂಬರುವ ಕಂತಿನ ದಿನಾಂಕಕ್ಕೆ ಮುಂಚೆ ಚೀಟಿ ಒಪ್ಪಂದದಲ್ಲಿ ನಮೂದಿಸಿರುವ ಅನುಮೋದಿತ ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಮತ್ತು ಹಾಗೆ ಠೇವಣಿ ಇಟ್ಟಿರುವ ಮೊಬಲಗನ್ನು ಮುಂದಿನ ವಂತಿಗೆಗಳ ಸಂದಾಯಕ್ಕಾಗಿ ಹೊರತು ಹಿಂಪಡೆಯತಕ್ಕದ್ದಲ್ಲ.

(5) ಯಾವುದೇ ಸ್ವತ್ತನ್ನು ಮುಂದಿನ ವಂತಿಗೆಗಳ ಒಟ್ಟು ಹಣದ ಸಂದಾಯಕ್ಕೆ ಬದಲಾಗಿ ಭದ್ರತೆಯಾಗಿ ಪಡೆಯಲಾಗಿದ್ದಲ್ಲಿ, ಅದು ಮುಂದಿನ ವಂತಿಗೆಗಳ ನಿಯತ ಸಂದಾಯಕ್ಕಾಗಿ ಭದ್ರತೆಯಾಗಿರತಕ್ಕದ್ದು.

## ಅಧ್ಯಾಯ-VI

### ವರ್ಗಾವಣೆಗಳು

**34. ಪ್ರವರ್ತಕನ ಹಕ್ಕುಗಳ ವರ್ಗಾವಣೆ ಮೇಲಿನ ಪರಿಬಂಧಗಳು.-** (1) ಬಹುಮಾನಿತ ವಂತಿಗೆದಾರರಿಂದ ವಂತಿಗೆಗಳನ್ನು ಪಡೆಯಲು ಪ್ರವರ್ತಕನಿಗೆ ಇರುವ ಹಕ್ಕುಗಳನ್ನು ರಿಜಿಸ್ಟ್ರಾರನಿಂದ ಲಿಖಿತದಲ್ಲಿ ಪೂರ್ವ ಮಂಜೂರಾತಿ ಪಡೆಯದ ಹೊರತು ವರ್ಗಾವಣೆ ಮಾಡತಕ್ಕದ್ದಲ್ಲ.

(2) ಅದೃಷ್ಟವಂತ ವಂತಿಗೆದಾರರಿಂದ ವಂತಿಗೆಗಳನ್ನು ಪಡೆಯುವ ಪ್ರವರ್ತಕನ ಹಕ್ಕುಗಳ ಯಾವುದೇ ವರ್ಗಾವಣೆಯು, ಬಹುಮಾನಿತನಲ್ಲದ ಅಥವಾ ಸಂದಾಯಮಾಡದ ಬಹುಮಾನಿತ ವಂತಿಗೆದಾರರ ಹಿತಾಸಕ್ತಿಯನ್ನು ವಿಫಲಗೊಳಿಸುವ ಅಥವಾ ವಿಳಂಬಗೊಳಿಸುವ ಸಂಭವವಿದ್ದರೆ, ಅಂಥ ವಂತಿಗೆದಾರನ ಇಚ್ಛೆಯಂತೆ ಅಸಿಂಧುವಾಗಬಹುದಾದಂಥದ್ದು ಆಗಿರತಕ್ಕದ್ದು.

(3) ಉಪ-ಪ್ರಕರಣ (2)ರ ಅಡಿಯಲ್ಲಿ, ವಂತಿಗೆದಾರನು ವರ್ಗಾವಣೆಯನ್ನು ವಿವಾದಿಸಿದಾಗ, ವರ್ಗಾವಣೆಯ ಸಮಯದಲ್ಲಿ ಪ್ರವರ್ತಕನು ದಿವಾಳಿ ಸ್ಥಿತಿಯಲ್ಲಿದ್ದನೆಂದು ಮತ್ತು ಆ ವರ್ಗಾವಣೆಯು ಅಂಥ ವಂತಿಗೆದಾರನ ಹಿತಾಸಕ್ತಿಗಳನ್ನು ವಿಫಲಗೊಳಿಸುವುದಿಲ್ಲ ಅಥವಾ ವಿಳಂಬಗೊಳಿಸುವುದಿಲ್ಲವೆಂದು ರುಜುವಾತುಪಡಿಸುವ ಭಾರವು ವರ್ಗಾವಣೆ ಪಡೆಯುವವನ ಮೇಲಿರುತ್ತದೆ.

**35. ಬಹುಮಾನಿತರಲ್ಲದ ವಂತಿಗೆದಾರರ ಹಕ್ಕುಗಳ ವರ್ಗಾವಣೆಯು ಲಿಖಿತದಲ್ಲಿರಬೇಕು.-** ಅದೃಷ್ಟವಂತನಲ್ಲದ ವಂತಿಗೆದಾರನ ಚೀಟಿಯಲ್ಲಿನ ಆತನ ಹಕ್ಕುಗಳ ಪ್ರತಿಯೊಂದು ವರ್ಗಾವಣೆಯು ಲಿಖಿತದಲ್ಲಿರತಕ್ಕದ್ದು, ಅದನ್ನು ಕನಿಷ್ಠ ಪಕ್ಷ ಇಬ್ಬರು ಸಾಕ್ಷಿದಾರರು ವಿದ್ಯುಕ್ತವಾಗಿ ಲಿಖಿತದಲ್ಲಿ ದೃಢೀಕರಿಸತಕ್ಕದು ಮತ್ತು ಪ್ರವರ್ತಕನಿಗೆ ಸಲ್ಲಿಸತಕ್ಕದ್ದು.

**36. ಪ್ರವರ್ತಕನಿಂದ ವರ್ಗಾವಣೆಯ ಮಾನ್ಯತೆ.-** 35ನೇ ಪ್ರಕರಣದ ಅಡಿಯಲ್ಲಿ ಪ್ರತಿಯೊಂದು ವರ್ಗಾವಣೆಯನ್ನು, ಆ ವರ್ಗಾವಣೆಗಾಗಿ ಸಲ್ಲಿಸಿದ ಪ್ರಸ್ತಾವನೆಯನ್ನು ಪ್ರವರ್ತಕನು ಸ್ವೀಕರಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳ ಅವಧಿಯೊಳಗೆ, ವರ್ಗಾವಣೆ ಪಡೆಯುವವನು ದಿವಾಳಿಯಾಗಿಲ್ಲದವನಾಗಿದ್ದರೆ ಅಥವಾ ವರ್ಗಾವಣೆಯು, ಈ ಅಧಿನಿಯಮವೂ ಸೇರಿದಂತೆ ಯಾವುದೇ ಕಾನೂನಿನ ಉಪಬಂಧಗಳನ್ನು ವಿಫಲಗೊಳಿಸುವ ಉದ್ದೇಶದಿಂದ ಮಾಡಿದ್ದಲ್ಲದಿದ್ದರೆ, ಪ್ರವರ್ತಕನು ಮಾನ್ಯ ಮಾಡತಕ್ಕದ್ದು ಮತ್ತು ವರ್ಗಾವಣೆಯನ್ನು ಮಾನ್ಯ ಮಾಡುವ ಅಥವಾ ಮಾಡದಿರುವ ಪ್ರವರ್ತಕನ ತೀರ್ಮಾನವನ್ನು ಸಂಬಂಧಪಟ್ಟ ಪಕ್ಷಕಾರರಿಗೆ ತಕ್ಷಣ ತಿಳಿಸತಕ್ಕದ್ದು.

**37. ಪುಸ್ತಕಗಳಲ್ಲಿ ವರ್ಗಾವಣೆ ಪಡೆದವನ ಹೆಸರನ್ನು ನಮೂದಿಸುವುದು.-** 34ನೇ ಅಥವಾ 35ನೇ ಪ್ರಕರಣದ ಅಡಿಯಲ್ಲಿನ ಪ್ರತಿಯೊಂದು ವರ್ಗಾವಣೆಯನ್ನು ಪ್ರವರ್ತಕನು ತಕ್ಷಣ ಚೀಟಿ ಪುಸ್ತಕದಲ್ಲಿ ನಮೂದಿಸತಕ್ಕದ್ದು ಮತ್ತು ಅಂಥ ನಮೂದಿನ ಯಥಾ ಪ್ರತಿಯನ್ನು, ಅಂಥ ನಮೂದನ್ನು ಮಾಡಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗಾಗಿ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

## ಅಧ್ಯಾಯ VII

### ವಂತಿಗೆದಾರರ ಸರ್ವಸದಸ್ಯ ಸಭೆಗಳು

**38. ವಂತಿಗೆದಾರರ ಸರ್ವಸದಸ್ಯ ಸಭೆಗಳು.-** (1) ವಿಶೇಷ ನಿರ್ಣಯವನ್ನು ಅಂಗೀಕರಿಸುವ ಯಾವುದೇ ಪ್ರಸ್ತಾವನೆಯನ್ನು ಪರ್ಯಾಲೋಚಿಸುವುದಕ್ಕಾಗಿ ವಂತಿಗೆದಾರರ ಸರ್ವಸದಸ್ಯ ಸಭೆಯನ್ನು ಪ್ರವರ್ತಕನು ತಾನಾಗಿಯೇ ಕರೆಯಬಹುದು.

(2) ಪ್ರವರ್ತಕನು ಬಹುಮಾನಿತರಲ್ಲದ ಮತ್ತು ಸಂದಾಯಮಾಡದ ಬಹುಮಾನಿತ ವಂತಿಗೆದಾರರ ಒಟ್ಟು ಸಂಖ್ಯೆಯ ಶೇ. ಇಪ್ಪತ್ತೈದಕ್ಕಿಂತ ಕಡಿಮೆಯಿರದ ಸದಸ್ಯರ ಲಿಖಿತ ಕೋರಿಕೆಯ ಮೇಲೆ ಅಂಥ ಸಭೆಯನ್ನು ಕರೆಯತಕ್ಕದ್ದು ಮತ್ತು ಕೋರಿಕೆ ಸ್ವೀಕರಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಹಾಗೆ ಕರೆಯಲಾದ ಸಭೆಯನ್ನು ನಡೆಸತಕ್ಕದ್ದು ಮತ್ತು ಪ್ರವರ್ತಕನು ಅಂಥ ಕೋರಿಕೆಯನ್ನು ಸ್ವೀಕರಿಸಿದ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ಅಂಥ ಸಭೆಯನ್ನು ಕರೆಯಲು ನಿರಾಕರಿಸಿದರೆ ಅಥವಾ ವಿಫಲನಾದರೆ ಬಹುಮಾನಿತರಲ್ಲದ ಮತ್ತು ಸಂದಾಯ ಮಾಡದ ವಂತಿಗೆದಾರರ ಒಟ್ಟು ಸಂಖ್ಯೆಯ ಶೇ. ಇಪ್ಪತ್ತೈದಕ್ಕಿಂತ ಕಡಿಮೆಯಿರದ ಸದಸ್ಯರು ಆ ವಿಷಯದ ನೋಟೀಸನ್ನು ರಿಜಿಸ್ಟ್ರಾರನಿಗೆ ನೀಡತಕ್ಕದ್ದು.

(3) ರಿಜಿಸ್ಟ್ರಾರನು, (2)ನೇ ಉಪ-ಪ್ರಕರಣದ ಅಡಿಯಲ್ಲಿನ ನೋಟೀಸನ್ನು ಸ್ವೀಕರಿಸಿದ ಇಪ್ಪತ್ತೊಂದು ದಿನಗಳೊಳಗೆ ವಂತಿಗೆದಾರರ ವಿಶೇಷ ಸರ್ವಸದಸ್ಯರ ಸಭೆಯನ್ನು ಕರೆಯತಕ್ಕದ್ದು ಅಥವಾ ಕರೆಯುವಂತೆ ನಿರ್ದೇಶಿಸತಕ್ಕದ್ದು ಮತ್ತು ಪ್ರವರ್ತಕನು ಅಂಥ ನಿರ್ದೇಶನವನ್ನು ಸ್ವೀಕರಿಸಿದ ಮೇಲೆ, ಅದನ್ನು ಪಾಲಿಸುವುದು ಆತನ ಕರ್ತವ್ಯವಾಗಿರತಕ್ಕದ್ದು.

(4) ಈ ಪ್ರಕರಣದ ಅಡಿಯಲ್ಲಿನ ಸಭೆಯ ಉದ್ದೇಶ, ದಿನಾಂಕ, ವೇಳೆ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸುವ ನೋಟೀಸನ್ನು ಹದಿನಾಲ್ಕು ದಿನಗಳಿಗಿಂತ ಕಡಿಮೆ ಇರದಂತೆ ಎಲ್ಲ ವಂತಿಗೆದಾರರಿಗೆ ನೀಡತಕ್ಕದ್ದು ಮತ್ತು ಸಭೆಯ ನೋಟೀಸಿನೊಂದಿಗೆ ವಿಶೇಷ ನಿರ್ಣಯದ ಒಂದು ಪ್ರತಿಯನ್ನು ಸಹ ಕಳುಹಿಸತಕ್ಕದ್ದು.

**ವಿವರಣೆ.-** ಈ ಪ್ರಕರಣದ ಮತ್ತು 39ನೇ ಪ್ರಕರಣದ ಉದ್ದೇಶಗಳಿಗಾಗಿ "ವಿಶೇಷ ನಿರ್ಣಯ" ಎಂದರೆ, ಒಂದು ಉದ್ದೇಶಕ್ಕಾಗಿ ವಿಶೇಷವಾಗಿ ಕರೆಯಲಾದ ವಂತಿಗೆದಾರರ ಸಾಮಾನ್ಯ ಸಭೆಯಲ್ಲಿ ಆ ಸಭೆಯಲ್ಲಿ ಖುದ್ದಾಗಿ ಹಾಜರಿದ್ದ ಚೀಟಿ ವಂತಿಗೆದಾರರ ಮೂರನೇ ಎರಡಕ್ಕಿಂತ ಕಡಿಮೆಯಿರದ ಬಹುಮತದ ಮೂಲಕ ಮತ್ತು ಪ್ರಾಕ್ಸಿ ಮೂಲಕ ಅಥವಾ ಎಲ್ಲ

ಬಹುಮಾನಿತವಲ್ಲದ ಮತ್ತು ಸಂದಾಯ ಮಾಡದ ವಂತಿಗೆದಾರರ ಮೂಲಕ ವಂತಿಗೆ ನೀಡಿದ ಮೊಬಲಗು ಅಥವಾ ಸಂದರ್ಭಾನುಸಾರ, ಧಾನ್ಯದ ಮೌಲ್ಯವು ನಾಲ್ಕನೇ ಮೂರಕ್ಕಿಂತ ಕಡಿಮೆಯಿರದಂತೆ ಅಂಗೀಕರಿಸಿದ ನಿರ್ಣಯ.

## ಅಧ್ಯಾಯ VIII

## ಚೀಟಿಗಳ ಮುಕ್ತಾಯ

39. **ಕೆಲವು ಸಂದರ್ಭಗಳಲ್ಲಿ ಚೀಟಿಗಳನ್ನು ಮುಂದುವರಿಸುವುದಕ್ಕಾಗಿ ಉಪಬಂಧ.**– (1) ಪ್ರವರ್ತಕನು ಮರಣ ಹೊಂದಿದಲ್ಲಿ ಅಥವಾ ಅಸ್ವಸ್ಥಚಿತ್ತನಾಗಿದ್ದಲ್ಲಿ ಅಥವಾ ಅನ್ಯಥಾ ಅಸಮರ್ಥನಾಗಿದ್ದಲ್ಲಿ, ಚೀಟಿ ಒಪ್ಪಂದದ ಉಪಬಂಧಗಳಿಗನುಸಾರವಾಗಿ ಚೀಟಿಯನ್ನು ಮುಂದುವರಿಸಬಹುದು.

(2) ಪ್ರವರ್ತಕನು ದಿವಾಳಿಯಾಗಿದ್ದಾನೆಂದು ನ್ಯಾಯನಿರ್ಣಯವಾಗಿದ್ದಲ್ಲಿ ಅಥವಾ 26ನೇ ಪ್ರಕರಣದ ಅಡಿಯಲ್ಲಿ ಚೀಟಿಯಿಂದ ಹಿಂದೆ ಸರಿದಿರುವಲ್ಲಿ, ಅಥವಾ ಯಾವುದೇ ಕಂತಿನಲ್ಲಿ ಅಥವಾ ಮುಂಬರುವ ಕಂತಿನ ಮುಂಚಿನ ಯಾವುದೇ ಇತರ ದಿನಾಂಕದಂದು ಚೀಟಿಯನ್ನು ನಡೆಸಲು ವಿಫಲನಾದಲ್ಲಿ, ವಿಶೇಷ ನಿರ್ಣಯದ ಮೂಲಕ ಒಪ್ಪಿಕೊಳ್ಳಬಹುದಾದಂತೆ, ಚೀಟಿಯ ಮುಂದಿನ ಪ್ರವರ್ತನೆಗಾಗಿ ಚೀಟಿ ಒಪ್ಪಂದದಲ್ಲಿ ಯಾವುದೇ ಉಪಬಂಧ ಇಲ್ಲದಿರುವಲ್ಲಿ, ಅಂಥ ನಿರ್ಣಯದ ಮೂಲಕ ಅಧಿಕೃತಗೊಂಡ ಯಾರೇ ಒಬ್ಬ ಅಥವಾ ಹೆಚ್ಚಿನ ವಂತಿಗೆದಾರರು ಪ್ರವರ್ತಕನ ಸ್ಥಾನವನ್ನು ವಹಿಸಿಕೊಳ್ಳತಕ್ಕದ್ದು ಅಥವಾ ಚೀಟಿಯನ್ನು ಮುಂದುವರಿಸತಕ್ಕದ್ದು ಮತ್ತು ಚೀಟಿಯ ಮುಂದಿನ ಪ್ರವರ್ತನೆಗಾಗಿ ಇತರೆ ಏರ್ಪಾಡುಗಳನ್ನು ಮಾಡತಕ್ಕದ್ದು.

40. **ಚೀಟಿಗಳನ್ನು ಕೊನೆಗೊಳಿಸುವುದು.**– ಚೀಟಿಯು,

(ಎ) ಚೀಟಿ ಒಪ್ಪಂದದಲ್ಲಿ ಚೀಟಿಗಾಗಿ ನಿರ್ದಿಷ್ಟಪಡಿಸಲಾದ ಅವಧಿಯು ಮುಕ್ತಾಯವಾದಾಗ ಪರಂತು, ಎಲ್ಲಾ ವಂತಿಗೆದಾರರಿಗೆ ಬರಬೇಕಾಗಿರುವ ಬಾಕಿಗಳ ಸಂದಾಯವನ್ನು ಪೂರ್ತಿಗೊಳಿಸಿರುವಾಗ; ಅಥವಾ

(ಬಿ) ಎಲ್ಲಾ ಬಹುಮಾನಿತರಲ್ಲದ ಮತ್ತು ಸಂದಾಯ ಮಾಡದ ವಂತಿಗೆದಾರರು ಮತ್ತು ಪ್ರವರ್ತಕನು ಚೀಟಿಯನ್ನು ಮುಕ್ತಾಯಗೊಳಿಸುವುದಕ್ಕೆ ಲಿಖಿತದಲ್ಲಿ ಸಮ್ಮತಿಸಿ ಮತ್ತು ಅಂಥ ಸಮ್ಮತಿಯ ಒಂದು ಪ್ರತಿಯನ್ನು 41ನೇ ಪ್ರಕರಣದ ಅಡಿಯಲ್ಲಿ ಅಗತ್ಯಪಡಿಸಲಾದಂತೆ ರಿಜಿಸ್ಟ್ರಾರನಿಗೆ ಸಲ್ಲಿಸಿದಾಗ; ಅಥವಾ

(ಸಿ) ಪ್ರವರ್ತಕನು ಮರಣ ಹೊಂದಿದಲ್ಲಿ ಅಥವಾ ಅಸ್ವಸ್ಥಚಿತ್ತನಾದಲ್ಲಿ ಅಥವಾ ಅನ್ಯಥಾ ಅಸಮರ್ಥನಾದಲ್ಲಿ ಮತ್ತು ಚೀಟಿಯನ್ನು ಚೀಟಿ ಒಪ್ಪಂದದ ಉಪಬಂಧಗಳಿಗನುಸಾರವಾಗಿ ಮುಂದುವರಿಸದಿದ್ದಲ್ಲಿ

– ಕೊನೆಗೊಂಡಿದೆ ಎಂದು ಭಾವಿಸತಕ್ಕದ್ದು:

ಪರಂತು, ಒಂದು ವೇಳೆ ಪ್ರವರ್ತಕನು ಒಂದು ಫರ್ಮ್ ಆಗಿದ್ದ ಸಂದರ್ಭದಲ್ಲಿ ಅದರ ಪಾಲುದಾರನು ಮರಣ ಹೊಂದಿದರೆ ಅಥವಾ ಅಸ್ವಸ್ಥಚಿತ್ತನಾಗಿದ್ದರೆ ಅಥವಾ ಅನ್ಯಥಾ ಅಸಮರ್ಥನಾಗಿದರೆ, ಚೀಟಿಯು ಕೊನೆಗೊಂಡಿದೆಯೆಂದು ಭಾವಿಸತಕ್ಕದ್ದಲ್ಲ ಮತ್ತು ಬದುಕಿರುವ ಪಾಲುದಾರನು ಅಥವಾ ಪಾಲುದಾರರು, ಚೀಟಿ ಒಪ್ಪಂದದಲ್ಲಿ ತದ್ವಿರುದ್ಧವಾದ ಯಾವುದೇ ಉಪಬಂಧ ಇಲ್ಲದಿರುವಲ್ಲಿ ಚೀಟಿಯನ್ನು ನಡೆಸತಕ್ಕದ್ದು.

41. **ಅನುಮತಿ ಅಥವಾ ಸಮ್ಮತಿಯ ಪ್ರತಿಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸುವುದು.**– 26ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅನುಮತಿಯ ಮತ್ತು 40ನೇ ಪ್ರಕರಣದ (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಸಮ್ಮತಿಯ ಪ್ರತಿಯನ್ನು, ಅವುಗಳ ದಿನಾಂಕಗಳೊಂದಿಗೆ ಪ್ರವರ್ತಕನು ಅಥವಾ ಸಂದರ್ಭಾನುಸಾರ ಬದುಕಿರುವ ಪಾಲುದಾರನು ಅಥವಾ ಪಾಲುದಾರರು ಅಂಥ ಅನುಮತಿ ಅಥವಾ ಸಮ್ಮತಿಯ ದಿನಾಂಕದಿಂದ ಹದಿನಾಲ್ಕು ದಿನಗಳೊಳಗೆ ರಿಜಿಸ್ಟ್ರಾರನಿಗೆ ಸಲ್ಲಿಸತಕ್ಕದ್ದು.

42. **ಅದೃಷ್ಟವಂತರಲ್ಲದ ವಂತಿಗೆದಾರರ ವಂತಿಗೆಗಳ ಮರುಪಾವತಿ.**– 40ನೇ ಪ್ರಕರಣದ (ಎ) ಮತ್ತು (ಬಿ) ಖಂಡಗಳಲ್ಲಿ ಉಲ್ಲೇಖಿಸಲಾದ ಸಂದರ್ಭಗಳ ಹೊರತು,–

(ಎ) ಅದೃಷ್ಟವಂತನಲ್ಲದ ಪ್ರತಿಯೊಬ್ಬ ವಂತಿಗೆದಾರನು, ಈ ಅಧಿನಿಯಮದಲ್ಲಿ ಅಥವಾ ಚೀಟಿ ಒಪ್ಪಂದದಲ್ಲಿ ಅದಕ್ಕಾಗಿ ಅನ್ಯಥಾ ಉಪಬಂಧಿಸಿದುದನ್ನು ಉಳಿದು, ಚೀಟಿಯು ಕೊನೆಗೊಂಡಲ್ಲಿ ಅವನು ಗಳಿಸಿದ ಲಾಭಾಂಶ ಏನಾದರೂ ಇದ್ದರೆ ಅದರಲ್ಲಿ ಯಾವುದೇ ಕಡಿತವಿಲ್ಲದೆ ಆತನ ವಂತಿಗೆಗಳನ್ನು ಹಿಂದಕ್ಕೆ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು:

ಪರಂತು, 35ನೇ ಪ್ರಕರಣದ ಉಪಬಂಧಗಳಿಗನುಸಾರವಾಗಿ ಬಹುಮಾನಿತನಲ್ಲದ ವಂತಿಗೆದಾರನ ಹಕ್ಕುಗಳನ್ನು ಯಾರಿಗೆ ವರ್ಗಾಯಿಸಲಾಗಿರುವುದೋ ಆ ವ್ಯಕ್ತಿಯು, ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಷರತ್ತುಗಳಿಗೆ ಒಳಪಟ್ಟು ಆತನ ಸ್ವಂತ ವಂತಿಗೆಗಳ ಜೊತೆಗೆ ಅಂಥ ಬಹುಮಾನಿತನಲ್ಲದ ವಂತಿಗೆದಾರನು ಸಂದಾಯ ಮಾಡಿದ ವಂತಿಗೆಗಳನ್ನು ಹಿಂದಕ್ಕೆ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು.

(ಬಿ) ಚೀಟಿ ಒಪ್ಪಂದದಲ್ಲಿ ಮೂಲತಃ ನಿಗದಿಪಡಿಸಿದ ದಿನಾಂಕಕ್ಕಿಂತ ಮುಂಚಿನ ದಿನಾಂಕದಂದು ಚೀಟಿಯು ಕೊನೆಗೊಂಡರೆ, ಬಹುಮಾನಿತನಲ್ಲದ ವಂತಿಗೆದಾರನ ಕ್ಲೇಮು ಆತನಿಗೆ ಯಾವ ದಿನಾಂಕದಂದು ಗಮನಕ್ಕೆ ಬಂದಿದೆಯೋ, ಆ ದಿನಾಂಕದಂದು ಆತನ ಕ್ಲೇಮು ಉಂಟಾಗಿದೆಯೆಂದು ಭಾವಿಸತಕ್ಕದ್ದು.

43. **ವಂತಿಗೆದಾರರ ಬಾಕಿಗಳು ಚೀಟಿ ಸ್ವತ್ತಿನಲ್ಲಿ ಪ್ರಥಮ ಹೊಣೆಯಾಗಿರತಕ್ಕದ್ದು.**– ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರವರ್ತಕನಿಂದ ವಂತಿಗೆದಾರರಿಗೆ ಬರಬೇಕಾಗಿರುವ ಯಾವುದೇ ಮೊಬಲಗು ಚೀಟಿ ಸ್ವತ್ತಿನಲ್ಲಿ ಪ್ರಥಮ ಹೊಣೆಯಾಗಿರತಕ್ಕದ್ದು.

## ಅಧ್ಯಾಯ – IX

## ದಸ್ತಾವೇಜುಗಳ ಪರಿಶೀಲನೆ

44. **ಪ್ರವರ್ತಕನು ಚೀಟಿ ದಾಖಲೆಗಳನ್ನು ಪರಿಶೀಲಿಸಲು ಕೆಲವು ವಂತಿಗೆದಾರರಿಗೆ ಅನುಮತಿಸುವುದು.–** ಪ್ರತಿಯೊಬ್ಬ ಪ್ರವರ್ತಕನು, ಚೀಟಿ ಒಪ್ಪಂದದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಐದು ರೂಪಾಯಿಗಳಿಗೆ ಮೀರದಂಥ ಶುಲ್ಕ ಸಂದಾಯದ ಮೇಲೆ, ಡ್ರಾದ ಎಲ್ಲ ದಿನಾಂಕಗಳಂದು ಅಥವಾ ಚೀಟಿ ಒಪ್ಪಂದದಲ್ಲಿ ಪರಿಶೀಲನೆಗಾಗಿ ಉಪಬಂಧಿಸಬಹುದಾದಂಥ ಇತರೆ ದಿನಾಂಕಗಳಂದು ಮತ್ತು ಅಂಥ ಕಾಲದೊಳಗೆ ಬಹುಮಾನಿತರಲ್ಲದ ವಂತಿಗೆದಾರರಿಗೆ ಮತ್ತು ಸಂದಾಯಮಾಡದ ಬಹುಮಾನಿತ ವಂತಿಗೆದಾರರಿಗೆ ಭದ್ರತಾ ಬಂಧಪತ್ರಗಳನ್ನು ಮತ್ತು ದಸ್ತಾವೇಜುಗಳನ್ನು, ರಸೀದಿಗಳನ್ನು ಮತ್ತು ಬಹುಮಾನಿತ ವಂತಿಗೆದಾರರಿಂದ ತೆಗೆದುಕೊಂಡ ಅಥವಾ ವಂತಿಗೆದಾರನಾಗಿ ಪ್ರವರ್ತಕನು ಒದಗಿಸಿದ ಇತರೆ ದಾಖಲೆಗಳನ್ನು ಮತ್ತು ಲೆಕ್ಕಪತ್ರಗಳ ಪುಸ್ತಕಗಳನ್ನು, ಪಾಸ್‌ಬುಕ್‌ಗಳನ್ನು, ಆಯವ್ಯಯ ಪಟ್ಟಿ ಮತ್ತು ಲಾಭ ಮತ್ತು ನಷ್ಟ ಲೆಕ್ಕಪತ್ರಗಳನ್ನು ಮತ್ತು ಚೀಟಿಯ ವಾಸ್ತವಿಕ ಆರ್ಥಿಕ ಸ್ಥಿತಿಯನ್ನು ತೋರಿಸಬಹುದಾದಂಥ ಇತರ ದಾಖಲೆಗಳೂ ಸೇರಿದಂತೆ ಚೀಟಿಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸುವುದಕ್ಕಾಗಿ ಯುಕ್ತ ಅವಕಾಶಗಳನ್ನು ಒದಗಿಸತಕ್ಕದ್ದು.

45. **ಪ್ರವರ್ತಕನು ಚೀಟಿ ದಾಖಲೆಗಳನ್ನು ಸಂರಕ್ಷಿಸುವುದು.–** ಚೀಟಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪ್ರವರ್ತಕನು ಚೀಟಿಯು ಕೊನೆಗೊಂಡ ದಿನಾಂಕದಿಂದ ಎಂಟು ವರ್ಷಗಳ ಅವಧಿಯವರೆಗೆ ಇಟ್ಟಿರತಕ್ಕದ್ದು.

46. **ರಿಜಿಸ್ಟ್ರಾರರಿಂದ ಚೀಟಿ ಪುಸ್ತಕಗಳ ಮತ್ತು ದಾಖಲೆಗಳ ಪರಿಶೀಲನೆ.–** (1) ಕಂಪನಿಗಳ ಅಧಿನಿಯಮ, 1956 (1956ರ 1)ರ 209ನೇ ಮತ್ತು 209ಎ ಪ್ರಕರಣಗಳ ಉಪಬಂಧಗಳಿಗೆ ಬಾಧಕವಾಗದಂತೆ, ರಿಜಿಸ್ಟ್ರಾರನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯು, ನೋಟೀಸ್ ನೀಡಿ ಅಥವಾ ನೀಡದೆ ಪ್ರವರ್ತಕನ ಕಚೇರಿಯಲ್ಲಿ, ಯಾವುದೇ ಕೆಲಸದ ದಿನದಂದು ಕೆಲಸದ ವೇಳೆಯಲ್ಲಿ ಚೀಟಿ ಪುಸ್ತಕಗಳನ್ನು ಮತ್ತು ಚೀಟಿಯ ಎಲ್ಲ ದಾಖಲೆಗಳನ್ನು ಪರಿಶೀಲಿಸಬಹುದು ಮತ್ತು ತನ್ನ ಅಭಿರಕ್ಷೆಯಲ್ಲಿರುವ ಅಥವಾ ಅಧಿಕಾರದಲ್ಲಿರುವ ಎಲ್ಲ ಅಂಥ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ರಿಜಿಸ್ಟ್ರಾರನಿಗೆ ಅಥವಾ ಹಾಗೆ ಅಧಿಕೃತಗೊಳಿಸಲಾದ ಅಧಿಕಾರಿಗೆ ಹಾಜರುಪಡಿಸುವುದು ಮತ್ತು ಅವನು ಅಗತ್ಯಪಡಿಸಬಹುದಾದಂಥ ಚೀಟಿಗಳಿಗೆ ಸಂಬಂಧಿಸಿರುವ ಯಾವುದೇ ವಿವರಣ ಪಟ್ಟಿ ಅಥವಾ ಮಾಹಿತಿಯನ್ನು ಅವನು ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಒದಗಿಸುವುದು ಪ್ರತಿಯೊಬ್ಬ ಪ್ರವರ್ತಕನ ಕರ್ತವ್ಯವಾಗಿರತಕ್ಕದ್ದು.

(2) ರಿಜಿಸ್ಟ್ರಾರನು ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿರುವ ಅಧಿಕಾರಿಯು, ಪ್ರವರ್ತಕನಿಗೆ ಲಿಖಿತದಲ್ಲಿ ಏಳು ದಿನಗಳ ನೋಟೀಸ್ ನೀಡಿದ ನಂತರ, ನೋಟೀಸ್‌ನಲ್ಲಿ ನಮೂದಿಸಲಾದ ಕಾಲದಲ್ಲಿ ಮತ್ತು ಸ್ಥಳದಲ್ಲಿ ಅವನು ಅಗತ್ಯಪಡಿಸಬಹುದಾದಂಥ ಚೀಟಿ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಪರಿಶೀಲನೆಗಾಗಿ ತನ್ನ ಮುಂದೆ ಹಾಜರುಪಡಿಸುವಂತೆ ಪ್ರವರ್ತಕನಿಗೆ ನಿರ್ದೇಶಿಸಬಹುದು.

(3) (1)ನೇ ಅಥವಾ (2)ನೇ ಉಪ–ಪ್ರಕರಣದ ಅಡಿಯಲ್ಲಿ ಪರಿಶೀಲನೆ ಮಾಡಿದ ಮೇಲೆ, ಯಾವುದೇ ದೋಷಗಳು ಕಂಡುಬಂದರೆ, ರಿಜಿಸ್ಟ್ರಾರನು ಅಂಥ ದೋಷಗಳನ್ನು ಪ್ರವರ್ತಕನ ಗಮನಕ್ಕೆ ತರಬಹುದು ಮತ್ತು ಆದೇಶದಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ದೋಷಗಳನ್ನು ಪರಿಹರಿಸಲು ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕ್ರಮಗಳನ್ನು ತೆಗೆದುಕೊಳ್ಳುವಂತೆ ಪ್ರವರ್ತಕನಿಗೆ ನಿರ್ದೇಶನ ನೀಡುವ ಆದೇಶವನ್ನು ಸಹ ಮಾಡಬಹುದು.

(4) ಪ್ರತಿಯೊಬ್ಬ ಪ್ರವರ್ತಕನು (3)ನೇ ಉಪ–ಪ್ರಕರಣದ ಅಡಿಯಲ್ಲಿ ಮಾಡಿದ ಆದೇಶದಲ್ಲಿರುವ ನಿರ್ದೇಶನಗಳನ್ನು ಪಾಲಿಸುವುದಕ್ಕೆ ಬದ್ಧನಾಗಿರತಕ್ಕದ್ದು.

47. **ಚೀಟಿ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸುವುದಕ್ಕೆ ರಿಸರ್ವ್ ಬ್ಯಾಂಕಿನ ಅಧಿಕಾರ.–** (1) 46ನೇ ಪ್ರಕರಣದಲ್ಲಿರುವುದು ಯಾವುದೂ, ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934 ರ 2)ರ 45 ಎನ್ ಪ್ರಕರಣದ ಉಪಬಂಧಗಳಡಿಯಲ್ಲಿ ಯಾರೇ ಪ್ರವರ್ತಕನ ಪುಸ್ತಕಗಳನ್ನು ಮತ್ತು ದಾಖಲೆಗಳನ್ನು ಪರಿಶೀಲಿಸುವ ರಿಸರ್ವ್ ಬ್ಯಾಂಕಿನ ಅಧಿಕಾರಕ್ಕೆ ಬಾಧಕವಾಗುವುದೆಂದು ಭಾವಿಸತಕ್ಕದ್ದಲ್ಲ.

(2) ರಿಸರ್ವ್ ಬ್ಯಾಂಕ್ ಅವಶ್ಯಕವೆಂದು ಪರ್ಯಾಲೋಚಿಸಿದರೆ, ಪ್ರವರ್ತಕನ ಪುಸ್ತಕಗಳ ಮತ್ತು ದಾಖಲೆಗಳ ಪರಿಶೀಲನೆ ಮೇಲಿನ ಅದರ ವರದಿಯ ಅಥವಾ ಅದರ ವರದಿಯ ಯಾವುದೇ ಭಾಗದ ಪ್ರತಿಯನ್ನು ಅವಶ್ಯಕ ಕ್ರಮ ತೆಗೆದುಕೊಳ್ಳುವುದಕ್ಕಾಗಿ ಪ್ರವರ್ತಕನಿಗೆ ಕಳುಹಿಸತಕ್ಕದ್ದು.

(3) ಪ್ರತಿಯೊಬ್ಬ ಪ್ರವರ್ತಕನು (2)ನೇ ಉಪ–ಪ್ರಕರಣದ ಅಡಿಯಲ್ಲಿನ ವರದಿ ಅಥವಾ ಅದರ ಭಾಗವನ್ನು ಸ್ವೀಕರಿಸಿದ ತರುವಾಯ, ಈ ಸಂಬಂಧವಾಗಿ ರಿಸರ್ವ್ ಬ್ಯಾಂಕು ನೀಡಿದ ನಿರ್ದೇಶನಗಳು, ಯಾವುವಾದರೂ ಇದ್ದರೆ, ಅವುಗಳನ್ನು ಪಾಲಿಸಲು ಬದ್ಧನಾಗಿರತಕ್ಕದ್ದು ಮತ್ತು ಅವನು ತೆಗೆದುಕೊಂಡ ಕ್ರಮಕ್ಕೆ ಸಂಬಂಧಪಟ್ಟಂತೆ ನಿಯತಕಾಲಿಕ ವರದಿಗಳನ್ನು ಸಲ್ಲಿಸುವುದಕ್ಕೆ ಅಗತ್ಯಪಡಿಸಿದ್ದರೆ, ಅವುಗಳನ್ನು ಸಲ್ಲಿಸತಕ್ಕದ್ದು.

(4) ರಿಸರ್ವ್ ಬ್ಯಾಂಕು, ಪ್ರವರ್ತಕನ ಪುಸ್ತಕಗಳ ಮತ್ತು ದಾಖಲೆಗಳ ಪರಿಶೀಲನೆ ಮೇಲಿನ ವರದಿಯ ಪ್ರತಿಯನ್ನು, ಪ್ರವರ್ತಕನು ಕಂಪನಿಯಾಗಿದ್ದರೆ, ಕಂಪನಿಯ ನೋಂದಾಯಿತ ಕಚೇರಿಯು ಅಥವಾ ಯಾವುದೇ ಇತರೆ ಸಂದರ್ಭದಲ್ಲಿ ಪ್ರವರ್ತಕನ ವ್ಯವಹಾರದ ಸ್ಥಳ ಅಥವಾ ಮೂಲ ಸ್ಥಳ ಯಾವ ರಾಜ್ಯ ಸರ್ಕಾರದ ಅಧಿಕಾರವ್ಯಾಪ್ತಿಯೊಳಗೆ ಬರುತ್ತದೆಯೋ ಆ ರಾಜ್ಯ ಸರ್ಕಾರಕ್ಕೂ ಸಹ ಅವಶ್ಯಕವೆಂದು ಪರಿಗಣಿಸಬಹುದಾದಂಥ ಕ್ರಮಕ್ಕಾಗಿ ಕಳುಹಿಸತಕ್ಕದ್ದು.

## ಅಧ್ಯಾಯ – X

## ಚೀಟಿಗಳ ಪರಿಸಮಾಪನ

48. **ಯಾವ ಸನ್ನಿವೇಶಗಳಲ್ಲಿ ಚೀಟಿಯನ್ನು ಪರಿಸಮಾಪನಗೊಳಿಸಬಹುದು.–** ಚೀಟಿಯನ್ನು,–

(ಎ) 40ನೇ ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಚೀಟಿಯು ಮುಕ್ತಾಯವಾಗಿದ್ದರೆ; ಅಥವಾ

(ಬಿ) ಪ್ರವರ್ತಕನು 20ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಭದ್ರತೆಯ ಸಂಬಂಧದಲ್ಲಿ ಮುಖ್ಯವಾಗಿ ಭದ್ರತೆಯ ಸ್ವರೂಪ ಅಥವಾ ಅದರ ಮೌಲ್ಯವನ್ನು ದುರ್ಬಲಗೊಳಿಸುವ ಉದ್ದೇಶದಿಂದ ಯಾವುದೇ ಕಾರ್ಯವನ್ನು ಮಾಡಿದ್ದರೆ; ಅಥವಾ

(ಸಿ) ಈ ಅಧಿನಿಯಮದ ಯಾವುದೇ ಉಪಬಂಧಗಳಡಿಯಲ್ಲಿ ಠೇವಣಿ ಇಡಬೇಕೆಂದು ಅಗತ್ಯಪಡಿಸಿದ ಯಾವುದೇ ಮೊಬಲಗನ್ನು ಅವನು ಠೇವಣಿ ಇಡಲು ವಿಫಲನಾದರೆ; ಅಥವಾ

(ಡಿ) ಪ್ರವರ್ತಕನು, ವಂತಿಗೆದಾರರಿಗೆ ಬರಬೇಕಾಗಿರುವ ಮೊಬಲಗುಗಳನ್ನು ಸಂದಾಯ ಮಾಡಲು ಅಸಮರ್ಥನಾಗಿದ್ದಾನೆಂದು ರಿಜಿಸ್ಟ್ರಾರನಿಗೆ ಮನದಟ್ಟಾಗುವಂತೆ ರುಜುವಾತಾದರೆ; ಅಥವಾ

(ಇ) ಚೀಟಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಪ್ರವರ್ತಕನಿಂದ ಯಾರೇ ವಂತಿಗೆದಾರನಿಗೆ ಬರಬೇಕಾದ ಮೊಬಲಗುಗಳ ಸಂಬಂಧದಲ್ಲಿ ಅವನ ಪರವಾಗಿ ರಿಜಿಸ್ಟ್ರಾರನು ಹೊರಡಿಸಿದ ಆದೇಶದ ಅಮಲ್ಜಾರಿ ಅಥವಾ ಆ ಬಗ್ಗೆ ಕೈಗೊಂಡ ಇತರ ಕಾರ್ಯವಿಧಾನವು ಜಾರಿಯಾಗದೆ ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ವಾಪಸಾದರೆ; ಅಥವಾ

(ಎಫ್) ಯಾರೇ ಬಹುಮಾನಿತ ವಂತಿಗೆದಾರರಿಂದ ಭದ್ರತೆಗಳನ್ನು ತೆಗೆದುಕೊಳ್ಳುವ ವಿಷಯದಲ್ಲಿ ಪ್ರವರ್ತಕನು ಮೋಸ ಮಾಡಿದ್ದಾನೆ ಅಥವಾ ಮೋಸದಲ್ಲಿ ಶಾಮೀಲಾಗಿರುವನೆಂದು ರುಜುವಾತಾದರೆ; ಅಥವಾ

(ಜಿ) ಪ್ರವರ್ತಕನು ಒಬ್ಬ ವಂತಿಗೆದಾರನಾಗಿ ಆ ಸಾಮರ್ಥ್ಯದಲ್ಲಿ ಆತನು, ಮುಂದಿನ ವಂತಿಗೆಗಳಿಗಾಗಿ ಸಾಕಷ್ಟು ಭದ್ರತೆಯನ್ನು ಒದಗಿಸದೆ ಬಹುಮಾನದ ಮೊಬಲಗನ್ನು ವಿನಿಯೋಗಿಸಿದ್ದರೆ; ಅಥವಾ

(ಹೆಚ್) ಚೀಟಿ ವ್ಯವಹಾರಗಳನ್ನು ವಂತಿಗೆದಾರರ ಹಿತಾಸಕ್ತಿಗಳಿಗೆ ಬಾಧಕವಾಗುವ ರೀತಿಯಲ್ಲಿ ನಡೆಸಲಾಗುತ್ತಿರುವುದೆಂದು ರಿಜಿಸ್ಟ್ರಾರನಿಗೆ ಮನದಟ್ಟಾದರೆ; ಅಥವಾ

(ಐ) ಚೀಟಿಯನ್ನು ಪರಿಸಮಾಪನಗೊಳಿಸುವುದು ನ್ಯಾಯಸಮ್ಮತ ಮತ್ತು ನ್ಯಾಯಯುತವಾಗಿದ್ದರೆ

– ಯಾರ ಪ್ರಾದೇಶಿಕ ಅಧಿಕಾರವ್ಯಾಪ್ತಿಯೊಳಗೆ ಚೀಟಿಯನ್ನು ನೋಂದಾಯಿಸಲಾಗಿದೆಯೋ ಆ ರಿಜಿಸ್ಟ್ರಾರನು, ಸ್ವಪ್ರೇರಣೆಯಿಂದಾಗಲಿ ಅಥವಾ ಯಾರೇ ಬಹುಮಾನಿತರಲ್ಲದ ಅಥವಾ ಸಂದಾಯ ಮಾಡದ ಬಹುಮಾನಿತ ವಂತಿಗೆದಾರರು ಸಲ್ಲಿಸಿದ ಅರ್ಜಿಯ ಮೇಲಾಗಲಿ ಚೀಟಿಯನ್ನು ಪರಿಸಮಾಪನಗೊಳಿಸಬಹುದು.

**ವಿವರಣೆ.–** (ಡಿ) ಖಂಡದ ಉದ್ದೇಶಗಳಿಗಾಗಿ, ಪ್ರವರ್ತಕನು ವಂತಿಗೆದಾರರಿಗೆ ಬರಬೇಕಾಗಿರುವ ಮೊಬಲಗನ್ನು ಸಂದಾಯ ಮಾಡಲು ಅಸಮರ್ಥನಾಗಿದ್ದಾನೆಂಬುದನ್ನು ನಿರ್ಧರಿಸುವಲ್ಲಿ, ರಿಜಿಸ್ಟ್ರಾರನು ಚೀಟಿಯ ಸಂಬಂಧದಲ್ಲಿ ಆಕಸ್ಮಿಕ ಮತ್ತು ಮುಂದೆ ಬರಬಹುದಾದ ಹೊಣೆಗಳನ್ನು ಗಮನಕ್ಕೆ ತೆಗೆದುಕೊಳ್ಳತಕ್ಕದ್ದು.

49. **ಪರಿಸಮಾಪನಕ್ಕಾಗಿ ಅರ್ಜಿ.–** ಚೀಟಿಯ ಪರಿಸಮಾಪನಕ್ಕಾಗಿನ ಅರ್ಜಿಯನ್ನು ಯಾರೇ ಬಹುಮಾನಿತನಲ್ಲದ ಅಥವಾ ಸಂದಾಯ ಮಾಡದ ವಂತಿಗೆದಾರನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರಲ್ಲಿ ಹೇಳಿದ ರೀತಿಯಲ್ಲಿ ಸಹಿ ಮಾಡಿದ ಮತ್ತು ಸತ್ಯಾಪನೆ ಮಾಡಿದ ಮನವಿಯನ್ನು ದಾಖಲು ಮಾಡಿ ಸಲ್ಲಿಸತಕ್ಕದ್ದು ಮತ್ತು ಅದು ನಿಯಮಿಸಬಹುದಾದಂಥ ವಿವರಗಳನ್ನು ಒಳಗೊಂಡಿರತಕ್ಕದ್ದು:

ಪರಂತು, 48ನೇ ಪ್ರಕರಣದ (ಡಿ) ಅಥವಾ (ಐ) ಖಂಡದ ಅಡಿಯಲ್ಲಿ ಚೀಟಿಯನ್ನು ಪರಿಸಮಾಪನಗೊಳಿಸುವುದಕ್ಕಾಗಿ ಯಾವುದೇ ಅರ್ಜಿಯನ್ನು,–

(ಎ) ಅದೃಷ್ಟವಂತರಲ್ಲದ ಮತ್ತು ಸಂದಾಯ ಮಾಡದ ಬಹುಮಾನಿತರಾದ ವಂತಿಗೆದಾರರು ವಂತಿಗೆಯಾಗಿ ನೀಡಿದ ಮೊಬಲಗಿನ ಅಥವಾ ಸಂದರ್ಭಾನುಸಾರ, ಧಾನ್ಯದ ಮೌಲ್ಯದ ಶೇ. ಇಪ್ಪತ್ತೈದಕ್ಕಿಂತ ಕಡಿಮೆಯಿರದ ಮೊಬಲಗನ್ನು ಹೊಂದಿದ್ದ, ಬಹುಮಾನಿತರಲ್ಲದ ಮತ್ತು ಸಂದಾಯ ಮಾಡದ ಬಹುಮಾನಿತ ವಂತಿಗೆದಾರರು ಸಲ್ಲಿಸಿದ ಹೊರತು; ಅಥವಾ

(ಬಿ) ಯಾವ ರಾಜ್ಯದ ಅಧಿಕಾರವ್ಯಾಪ್ತಿಯೊಳಗೆ ಚೀಟಿಯನ್ನು ಪ್ರಾರಂಭಿಸಲಾಗಿದೆಯೋ ಅಥವಾ ನಡೆಸಲಾಗುತ್ತಿದೆಯೋ ಆ ರಾಜ್ಯ ಸರ್ಕಾರದ ಪೂರ್ವಾನುಮತಿಯೊಂದಿಗೆ ಪ್ರಾರಂಭಿಸಲಾಗಿದ್ದ ಅಥವಾ ನಡೆಸಲಾಗುತ್ತಿದ್ದ ಹೊರತು

– ಸದರಿ ಅರ್ಜಿಯನ್ನು ಸಲ್ಲಿಸಲು ಅವಕಾಶವಿರತಕ್ಕದ್ದಲ್ಲ.

**ವಿವರಣೆ.–** ಪರಂತುಕದ (ಎ) ಖಂಡದ ಉದ್ದೇಶಗಳಿಗಾಗಿ ಟಿಕೆಟ್‌ನ ಭಾಗದ ವಂತಿಗೆದಾರನನ್ನು ಅಂಥ ಭಾಗಕ್ಕೆ ಮಾತ್ರ ವಂತಿಗೆದಾರನೆಂದು ಭಾವಿಸತಕ್ಕದ್ದು.

50. ವ್ಯವಹರಣೆಗಳ ಪರಿಸಮಾಪನಕ್ಕೆ ನಿಷೇಧ.– 48ನೇ ಮತ್ತು 49ನೇ ಪ್ರಕರಣಗಳಲ್ಲಿ ಏನೇ ಇದ್ದರೂ,–

(ಎ) ಪ್ರವರ್ತಕನ ವಿರುದ್ಧ ದಿವಾಳಿತನಕ್ಕೆ ಸಂಬಂಧಿಸಿರುವ ವ್ಯವಹರಣೆಗಳು ಇತ್ಯರ್ಥದಲ್ಲಿದ್ದರೆ; ಅಥವಾ

(ಬಿ) ಪ್ರವರ್ತಕನು ಫರ್ಮ್ ಆಗಿರುವಲ್ಲಿ, ಎಲ್ಲಾ ಪಾಲುದಾರರ ಅಥವಾ ಅವರಲ್ಲಿ ಒಬ್ಬನನ್ನು ಹೊರತುಪಡಿಸಿ ಉಳಿದ ಎಲ್ಲಾ ಪಾಲುದಾರರ ವಿರುದ್ಧ ದಿವಾಳಿತನಕ್ಕೆ ಸಂಬಂಧಿಸಿರುವ ವ್ಯವಹರಣೆಗಳು ಅಥವಾ ಫರ್ಮಿನ ವಿಘಟನೆಗಾಗಿನ ವ್ಯವಹರಣೆಗಳು ಇತ್ಯರ್ಥದಲ್ಲಿರುವಲ್ಲಿ; ಅಥವಾ

(ಸಿ) ಪ್ರವರ್ತಕನು ಕಂಪನಿ ಅಥವಾ ಒಂದು ಸಹಕಾರೀ ಸಂಘವಾಗಿರುವಲ್ಲಿ, ಅಂಥ ಕಂಪನಿಯ ಅಥವಾ ಸಹಕಾರೀ ಸಂಘದ ಪರಿಸಮಾಪನಕ್ಕಾಗಿನ ವ್ಯವಹರಣೆಗಳು ಇತ್ಯರ್ಥದಲ್ಲಿದ್ದರೆ

– ಚೀಟಿಯ ಪರಿಸಮಾಪನಕ್ಕಾಗಿನ ಯಾವುದೇ ಅರ್ಜಿಯನ್ನು ರಿಜಿಸ್ಟ್ರಾರನು ಪರಿಗಣಿಸತಕ್ಕದ್ದಲ್ಲ.

51. **ಪರಿಸಮಾಪನ ಆದೇಶದ ಪ್ರಾರಂಭ ಮತ್ತು ಪರಿಣಾಮ.**– ಚೀಟಿಯ ಪರಿಸಮಾಪನದ ಆದೇಶವು, ಪ್ರವರ್ತಕನಿಂದ ಯಾರಿಗೆ ಮೊಬಲಗುಗಳು ಬರಬೇಕಾಗಿದೆಯೋ, ಆ ಎಲ್ಲ ವಂತಿಗೆದಾರರ ಪರವಾಗಿ ಪ್ರವರ್ತಿಸತಕ್ಕದ್ದು ಮತ್ತು ಪರಿಸಮಾಪನಕ್ಕಾಗಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಅದು ಪ್ರಾರಂಭವಾಗಿದೆಯೆಂದು ಭಾವಿಸತಕ್ಕದ್ದು.

52. **ನಿರ್ಬಂಧಕಾದೇಶ.**– ಈ ಅಧಿನಿಯಮದ ಅಡಿಯಲ್ಲಿ ಚೀಟಿಯನ್ನು ಪರಿಸಮಾಪನಗೊಳಿಸುವುದಕ್ಕಾಗಿ ಅರ್ಜಿ ಸಲ್ಲಿಸಿದ ನಂತರ ಮತ್ತು ಮಧ್ಯಕಾಲೀನ ರಿಸೀವರನ ನೇಮಕಕ್ಕಾಗಿ ಆದೇಶವನ್ನು ಅಥವಾ ಚೀಟಿಯನ್ನು ಪರಿಸಮಾಪನಗೊಳಿಸುವುದಕ್ಕಾಗಿ ಆದೇಶವನ್ನು ಮಾಡುವ ಮೊದಲು, ರಿಜಿಸ್ಟ್ರಾರನು, ಪ್ರವರ್ತಕನಿಂದ ಅಥವಾ ಚೀಟಿಯ ಸಂಬಂಧದಲ್ಲಿ ಯಾರಿಗೆ ಮೊಬಲಗು ಬರಬೇಕಾಗಿರುವುದೋ ಆ ಯಾರೇ ವಂತಿಗೆದಾರನಿಂದ ಅರ್ಜಿಯು ಬಂದರೆ, ಯಾವುದೇ ಸಮಯದಲ್ಲಿ ಪ್ರವರ್ತಕನಿಂದ ಬರಬೇಕಾಗಿರುವ ಮೊಬಲಗುಗಳನ್ನು ವಸೂಲಿ ಮಾಡುವುದಕ್ಕಾಗಿ ಪ್ರವರ್ತಕನ ವಿರುದ್ಧ ಹೂಡಲಾದ ಯಾವುವೇ ಇತರೆ ವ್ಯವಹರಣೆಗಳನ್ನು ರಿಜಿಸ್ಟ್ರಾರನು ಸೂಕ್ತವೆಂದು ಭಾವಿಸುವಂಥ ನಿಬಂಧನೆಗಳ ಮೇಲೆ ತಡೆಹಿಡಿಯಬಹುದು.

53. **ರಿಜಿಸ್ಟ್ರಾರನ ಅಧಿಕಾರಗಳು.**– ರಿಜಿಸ್ಟ್ರಾರನು, ಈ ಅಧ್ಯಾಯದ ಅಡಿಯಲ್ಲಿ ಅರ್ಜಿಯ ವಿಚಾರಣೆ ಮಾಡಿದ ನಂತರ, ಸೂಕ್ತವೆಂದು ತಾನು ಭಾವಿಸುವಂತೆ ಖರ್ಚುಗಳೊಂದಿಗೆ ಅಥವಾ ಖರ್ಚುಗಳಿಲ್ಲದೆ ಅರ್ಜಿಯನ್ನು ವಜಾಗೊಳಿಸಬಹುದು, ಅಥವಾ ಷರತ್ತುಪೂರ್ವಕವಾಗಿ ಅಥವಾ ಷರತ್ತುಗಳಿಲ್ಲದೆ ವಿಚಾರಣೆಯನ್ನು ಮುಂದಕ್ಕೆ ಹಾಕಬಹುದು ಅಥವಾ ಮಧ್ಯಂತರ ಅಥವಾ ಯಾವುದೇ ಇತರ ಆದೇಶವನ್ನು ಮಾಡಬಹುದು.

54. **ಚೀಟಿಯ ಆಸ್ತಿಗಳನ್ನು ರಿಜಿಸ್ಟ್ರಾರನಲ್ಲಿ ಅಥವಾ ಇತರ ವ್ಯಕ್ತಿಯಲ್ಲಿ ನಿಹಿತಗೊಳಿಸುವುದು.**– ಚೀಟಿಯ ಪರಿಸಮಾಪನಕ್ಕಾಗಿ ಆದೇಶ ಮಾಡಿದ ತರುವಾಯ ಆ ಚೀಟಿಯ ಸಂಬಂಧದಲ್ಲಿ ಯಾರಿಗೆ ಮೊಬಲಗುಗಳು ಬರಬೇಕಾಗಿರುವುದೋ ಆ ಯಾರೇ ವಂತಿಗೆದಾರರಿಗೆ ಹಂಚಿಕೆ ಮಾಡುವುದಕ್ಕಾಗಿ ಅಂಥ ಚೀಟಿಗೆ ಸಂಬಂಧಿಸಿದ ಎಲ್ಲಾ ಚೀಟಿ ಸ್ವತ್ತುಗಳನ್ನು ರಿಜಿಸ್ಟ್ರಾರನಲ್ಲಿ ಅಥವಾ ಅವನು ನೇಮಕ ಮಾಡಿದ ಯಾರೇ ವ್ಯಕ್ತಿಯಲ್ಲಿ ನಿಹಿತಗೊಳಿಸತಕ್ಕದ್ದು.

55. **ಪರಿಸಮಾಪನ ಆದೇಶದ ನಂತರ ದಾವೆ, ಇತ್ಯಾದಿಗಳನ್ನು ತಡೆಹಿಡಿಯುವುದು.**– ಪರಿಸಮಾಪನ ಆದೇಶ ಮಾಡಿದ ನಂತರ ಅಥವಾ ರಿಸೀವರ್‌ನನ್ನು ನೇಮಿಸಿದ ನಂತರ, ಚೀಟಿಯ ಸಂಬಂಧದಲ್ಲಿ ವಂತಿಗೆದಾರನಿಗೆ ಬರಬೇಕಾಗಿರುವ ಮೊಬಲಗುಗಳನ್ನು ವಸೂಲಿ ಮಾಡುವುದಕ್ಕಾಗಿ ಅವನು, ಪ್ರವರ್ತಕನ ವಿರುದ್ಧ ಯಾವುದೇ ದಾವೆ ಹೂಡಿದರೆ ಅದನ್ನು ಅಥವಾ ಇತರ ಕಾನೂನು ವ್ಯವಹರಣೆಗಳನ್ನು, ಚೀಟಿಯನ್ನು ಪರಿಸಮಾಪನ ಮಾಡಿದ ರಿಜಿಸ್ಟ್ರಾರನ ಅನುಮತಿಯ ಮತ್ತು ಅವನು ವಿಧಿಸಬಹುದಾದಂಥ ನಿಬಂಧನೆಗಳಿಗೊಳಪಡದ ಹೊರತು ಮುಂದುವರಿಸತಕ್ಕದ್ದಲ್ಲ ಅಥವಾ ಪ್ರಾರಂಭಿಸತಕ್ಕದ್ದಲ್ಲ.

56. **ಪರಿಸಮಾಪನಾದೇಶದ ಅಧಿಸೂಚನೆ.**– ಪರಿಸಮಾಪನಾದೇಶ ಮಾಡಿದ ತರುವಾಯ, ರಿಜಿಸ್ಟ್ರಾರನು ಚೀಟಿಗೆ ಸಂಬಂಧಿಸಿರುವ ಪುಸ್ತಕದಲ್ಲಿ ನಮೂದು ಮಾಡತಕ್ಕದ್ದು ಮತ್ತು ಆದೇಶ ಮಾಡಲಾಗಿರುವುದೆಂದು ರಾಜಪತ್ರದಲ್ಲಿ ಅಧಿಸೂಚಿಸತಕ್ಕದ್ದು.

57. **ಪ್ರವರ್ತಕ, ಮುಂತಾದವರ ದಿವಾಳಿಯ ಮೇಲಿನ ಪರಿಸಮಾಪನ ವ್ಯವಹರಣೆಗಳ ಸಮಾಪ್ತಿ ಅಥವಾ ಕಂಪನಿಯ ಪರಿಸಮಾಪನ ಮತ್ತು ಅಂಥ ವ್ಯವಹರಣೆಗಳ ವರ್ಗಾವಣೆ.**– ಚೀಟಿಯನ್ನು ಪರಿಸಮಾಪನಗೊಳಿಸುವುದಕ್ಕಾಗಿ ಹೂಡಿದ ವ್ಯವಹರಣೆಗಳು ಇತ್ಯರ್ಥದಲ್ಲಿರುವ ಅವಧಿಯಲ್ಲಿ ಪ್ರವರ್ತಕನು ದಿವಾಳಿಯಾಗಿದ್ದಾನೆಂದು ನ್ಯಾಯಾಲಯವು ನಿರ್ಣಯಿಸಿರುವಲ್ಲಿ ಅಥವಾ ಪ್ರವರ್ತಕನು ಫರ್ಮ್ ಆಗಿದ್ದಲ್ಲಿ, ಎಲ್ಲ ಪಾಲುದಾರರು ಅಥವಾ ಒಬ್ಬನನ್ನು ಹೊರತುಪಡಿಸಿ ಉಳಿದ ಎಲ್ಲ ಪಾಲುದಾರರು ದಿವಾಳಿಯಾಗಿರುವರೆಂದು ನ್ಯಾಯಾಲಯವು ನಿರ್ಣಯಿಸಿರುವಲ್ಲಿ, ಪ್ರವರ್ತಕನು ಕಂಪನಿಯಾಗಿರುವಲ್ಲಿ, ಕಂಪನಿಯನ್ನು ಪರಿಸಮಾಪನಗೊಳಿಸಬೇಕೆಂದು ನ್ಯಾಯಾಲಯವು ಆದೇಶಿಸಿರುವಲ್ಲಿ, ಈ ಅಧ್ಯಾಯದ ಅಡಿಯಲ್ಲಿನ ಪರಿಸಮಾಪನ ವ್ಯವಹರಣೆಗಳು ಮುಕ್ತಾಯವಾಗತಕ್ಕದ್ದು ಮತ್ತು 43 ಮತ್ತು 52ನೇ ಪ್ರಕರಣಗಳ ಉಪಬಂಧಗಳಿಗೊಳಪಟ್ಟು, ಸಂದರ್ಭಾನುಸಾರ ದಿವಾಳಿ ವ್ಯವಹರಣೆಗಳ ನ್ಯಾಯಾಲಯ ಅಥವಾ ಕಂಪನಿಯನ್ನು ಪರಿಸಮಾಪನಗೊಳಿಸಿದ ನ್ಯಾಯಾಲಯವು ಚೀಟಿಯ ಸ್ವತ್ತುಗಳ ಹಂಚಿಕೆಯನ್ನು ಮಾಡಬಹುದು.

58. **ಪ್ರವರ್ತಕನಿಗೆ ನಷ್ಟಪರಿಹಾರವನ್ನು ಕೊಡುವುದು.**– (1) ಚೀಟಿ ಪರಿಸಮಾಪನಾ ಅರ್ಜಿಯು ವಜಾ ಆಗಿದ್ದರೆ ಮತ್ತು ಆ ಅರ್ಜಿಯು ಕ್ಷುಲ್ಲಕ ಅಥವಾ ಕಿರುಕುಳಕಾರಿಯಾಗಿತ್ತೆಂದು ರಿಜಿಸ್ಟ್ರಾರನು ಮನಗಂಡಲ್ಲಿ ಅವರು ಪ್ರವರ್ತಕನ ಅರ್ಜಿಯ ಮೇಲೆ ಮತ್ತು ಅದನ್ನು ಸಲ್ಲಿಸಿರುವುದರಿಂದ ಹಾಗೂ ಅದರ ಮೇಲಿನ ವ್ಯವಹರಣೆಗಳಿಂದ ಪ್ರವರ್ತಕನಿಗೆ ಉಂಟಾದ ವೆಚ್ಚಕ್ಕಾಗಿ ಅಥವಾ ಹಾನಿಗಾಗಿ ಅವನಿಗೆ ಪರಿಹಾರವಾಗಿ ಸೂಕ್ತವೆಂದು ತಾನು ಪರಿಗಣಿಸುವಂಥ, ಒಂದು ಸಾವಿರ ರೂಪಾಯಿಗಳಿಗೆ ಮೀರದಂಥ ಮೊತ್ತಕ್ಕೆ ಐತೀರ್ಪು ನೀಡತಕ್ಕದ್ದು ಮತ್ತು ಅಂಥ ಮೊತ್ತವನ್ನು ಆ ಐತೀರ್ಪು, ಸಿವಿಲ್ ನ್ಯಾಯಾಲಯದ ಡಿಕ್ರಿಯಾಗಿದ್ದರೆ ಹೇಗೆ ವಸೂಲು ಮಾಡಲಾಗುತ್ತಿತ್ತೋ ಹಾಗೆ ವಸೂಲು ಮಾಡತಕ್ಕದ್ದು.

(2) ಉಪ ಪ್ರಕರಣ (1)ರ ಅಡಿಯಲ್ಲಿ ಐತೀರ್ಪನ್ನು ಮಾಡಿದ ಮೇಲೆ, ಚೀಟಿಯ ಪರಿಸಮಾಪನಕ್ಕಾಗಿನ ಅರ್ಜಿಯ ಸಂಬಂಧದಲ್ಲಿ ನಷ್ಟಪರಿಹಾರಕ್ಕಾಗಿ ಯಾವುದೇ ದಾವೆಯನ್ನು ಪುರಸ್ಕರಿಸತಕ್ಕದ್ದಲ್ಲ.

**59. ಅಪೀಲು ಸಲ್ಲಿಸಲು ಹಕ್ಕು.–** ಚೀಟಿಯ ಪರಿಸಮಾಪನದ ಯಾವುವೇ ವ್ಯವಹರಣೆಗಳಲ್ಲಿ ರಿಜಿಸ್ಟ್ರಾರನ ತೀರ್ಮಾನ ಅಥವಾ ಆದೇಶದಿಂದ ಬಾಧಿತನಾದ ಪ್ರವರ್ತಕ ಅಥವಾ ಯಾರೇ ವಂತಿಗೆದಾರ ಅಥವಾ ಯಾರೇ ಇತರೆ ವ್ಯಕ್ತಿಯು, ಅಂಥ ತೀರ್ಮಾನ ಅಥವಾ ಆದೇಶದ ದಿನಾಂಕದಿಂದ ಅರವತ್ತು ದಿನಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

**60. ಕಾಲ ಪರಿಮಿತಿ.–** (1) ಈ ಅಧಿನಿಯಮದ ಅಡಿಯಲ್ಲಿ ಚೀಟಿ ಪರಿಸಮಾಪನಗೊಳಿಸಲು ನಿರಾಕರಿಸುವ ಆದೇಶ ಮಾಡಿರುವಲ್ಲಿ, ಚೀಟಿಯು ಬಹುಮಾನಿತರಲ್ಲದ ವಂತಿಗೆದಾರರ ಸಂಬಂಧದಲ್ಲಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅಂಥ ಆದೇಶದ ದಿನಾಂಕದವರೆಗೆ ಅದು ಅಮಾನತ್ತಿನಲ್ಲಿತ್ತೆಂದು ಭಾವಿಸತಕ್ಕದ್ದು; ಮತ್ತು ಚೀಟಿ ಒಪ್ಪಂದದಲ್ಲಿ ಏನೇ ಇದ್ದರೂ, ಪರಿಸಮಾಪನಕ್ಕಾಗಿ ಅರ್ಜಿ ಸಲ್ಲಿಸಿದ ದಿನಾಂಕದಂದು ಸುಸ್ತಿದಾರನಾಗಿರದ ಯಾರೇ ಬಹುಮಾನಿತನಲ್ಲದ ವಂತಿಗೆದಾರನನ್ನು ಅಂಥ ಆದೇಶದ ದಿನಾಂಕದಂದು ಸುಸ್ತಿದಾರನೆಂದು ಭಾವಿಸತಕ್ಕದ್ದಲ್ಲ.

(2) ಈ ಅಧಿನಿಯಮದ ಅಡಿಯಲ್ಲಿ ಚೀಟಿ ಪರಿಸಮಾಪನಗೊಳಿಸಲು ನಿರಾಕರಿಸುವ ಆದೇಶ ಮಾಡಿರುವಲ್ಲಿ, ಮಾಡಲಾಗಿರುವ ಅಥವಾ ಹೂಡಲಾಗಿರುವ (ಯಾವ ದಾವೆಯ ಅಥವಾ ಅರ್ಜಿಯ ಸಂಬಂಧದಲ್ಲಿ ನ್ಯಾಯಾಲಯದ ಅನುಮತಿ ಪಡೆಯಲಾಗಿದೆಯೋ ಆ ದಾವೆಯನ್ನು ಅಥವಾ ಅರ್ಜಿಯನ್ನು ಹೊರತುಪಡಿಸಿ) ಯಾವುದೇ ದಾವೆಗೆ ಅಥವಾ ಇತರ ಕಾನೂನು ವ್ಯವಹರಣೆಗಳಿಗಾಗಿ ಗೊತ್ತುಪಡಿಸಿದ ಕಾಲಪರಿಮಿತಿ ಅವಧಿಯನ್ನು ಲೆಕ್ಕಹಾಕುವಾಗ ಚೀಟಿಯ ಪರಿಸಮಾಪನಕ್ಕೆ ಅರ್ಜಿಯನ್ನು ಸಲ್ಲಿಸಿದ್ದರೆ ಚೀಟಿ ಪರಿಸಮಾಪನಗೊಳಿಸಲು ಅರ್ಜಿ ಸಲ್ಲಿಸಿದ ದಿನಾಂಕದಿಂದ ನಿರಾಕರಿಸುವ ಆದೇಶದ ದಿನಾಂಕದವರೆಗಿನ ಅವಧಿಯನ್ನು ಹೊರತುಪಡಿಸತಕ್ಕದ್ದು.

(3) ಈ ಅಧ್ಯಾಯದಲ್ಲಿರುವುದು ಯಾವುದೂ, ಚೀಟಿ ಪರಿಸಮಾಪನಗೊಳಿಸುವುದಕ್ಕಾಗಿನ ವ್ಯವಹರಣೆಗಳಲ್ಲಿ ಅಂತಿಮ ಲಾಭಾಂಶದ ಘೋಷಣೆಯ ನಂತರ, ವಂತಿಗೆದಾರನಿಗೆ ಬರಬೇಕಾಗಿರುವ ಮೊಬಲಗಿನ ಶಿಲ್ಕು ಯಾವುದಾದರೂ ಇದ್ದರೆ, ಅದಕ್ಕಾಗಿ ವೈಯಕ್ತಿಕವಾಗಿ ಪ್ರವರ್ತಕನ ವಿರುದ್ಧ ವ್ಯವಹರಣೆ ಹೂಡುವ ಅವನ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ ಮತ್ತು ಯಾವುದೇ ಅಂಥ ವ್ಯವಹರಣೆಗಳಿಗಾಗಿ ಗೊತ್ತುಪಡಿಸಲಾದ ಕಾಲಪರಿಮಿತಿ ಅವಧಿಯನ್ನು ಲೆಕ್ಕ ಹಾಕುವಲ್ಲಿ, ಚೀಟಿಯ ಪರಿಸಮಾಪನಕ್ಕಾಗಿ ಅರ್ಜಿ ಸಲ್ಲಿಸಿದ ದಿನಾಂಕದಿಂದ ಅಂತಿಮ ಲಾಭಾಂಶದ ಘೋಷಣೆಯ ದಿನಾಂಕದವರೆಗಿನ ಅವಧಿಯನ್ನು ಹೊರತುಪಡಿಸತಕ್ಕದ್ದು.

## ಅಧ್ಯಾಯ – XI

### ಅಧಿಕಾರಿಗಳ ನೇಮಕ ಮತ್ತು ಫೀಜು ವಿಧಿಸುವಿಕೆ

**61. ರಿಜಿಸ್ಟ್ರಾರ್ ಮತ್ತು ಇತರೆ ಅಧಿಕಾರಿಗಳ ನೇಮಕ.–** (1) ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಚೀಟಿಗಳ ರಿಜಿಸ್ಟ್ರಾರನನ್ನು ಮತ್ತು ಈ ಅಧಿನಿಯಮದ ಅಡಿಯಲ್ಲಿ ಅಥವಾ ಅದರ ಮೂಲಕ ರಿಜಿಸ್ಟ್ರಾರನಿಗೆ ವಹಿಸಲಾದ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಂತೆ ಹೆಚ್ಚುವರಿ, ಜಂಟಿ, ಉಪ ಮತ್ತು ಸಹಾಯಕ ರಿಜಿಸ್ಟ್ರಾರ್‌ಗಳನ್ನು ನೇಮಿಸಬಹುದು.

(2) ರಿಜಿಸ್ಟ್ರಾರನು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಚೀಟಿ ಪರಿಶೀಲಕರ ಅಥವಾ ಚೀಟಿ ಲೆಕ್ಕಪರಿಶೋಧಕರ ಮೇಲೆ ವಿಧಿಸಿದ ಕರ್ತವ್ಯಗಳ ನಿರ್ವಹಣೆಯ ಉದ್ದೇಶಕ್ಕಾಗಿ ಅವಶ್ಯಕವಾಗಬಹುದಾದಷ್ಟು ಜನರನ್ನು ಚೀಟಿ ಪರಿಶೀಲಕನಾಗಿ ಮತ್ತು ಚೀಟಿ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಬಹುದು.

(3) ಎಲ್ಲ ಚೀಟಿ ಪರಿಶೀಲಕರು ಮತ್ತು ಚೀಟಿ ಲೆಕ್ಕಪರಿಶೋಧಕರು, ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅವರಿಗೆ ವಹಿಸಲಾದ ಕರ್ತವ್ಯಗಳನ್ನು ರಿಜಿಸ್ಟ್ರಾರನ ಸಾಮಾನ್ಯ ಅಧೀಕ್ಷಣೆ ಮತ್ತು ನಿಯಂತ್ರಣದಲ್ಲಿ ನಿರ್ವಹಿಸತಕ್ಕದ್ದು.

(4) ಯಾವುದೇ ಚೀಟಿಯ ಲೆಕ್ಕಪತ್ರಗಳನ್ನು ಸರಿಯಾಗಿ ಇಟ್ಟುಕೊಂಡು ಬಂದಿಲ್ಲವೆಂದು ಮತ್ತು ಅಂಥ ಲೆಕ್ಕಪತ್ರಗಳನ್ನು ಲೆಕ್ಕಪರಿಶೋಧಿಸಬೇಕೆಂದು ರಿಜಿಸ್ಟ್ರಾರನು ಅಭಿಪ್ರಾಯಪಟ್ಟರೆ, ಅಂಥ ಲೆಕ್ಕಪತ್ರಗಳನ್ನು ಚೀಟಿ ಲೆಕ್ಕಪರಿಶೋಧಕರ ಮೂಲಕ ಲೆಕ್ಕಪರಿಶೋಧನೆ ಮಾಡಿಸುವುದು ರಿಜಿಸ್ಟ್ರಾರನಿಗೆ ಕಾನೂನುಬದ್ಧವಾಗಿರತಕ್ಕದ್ದು.

(5) ಉಪ–ಪ್ರಕರಣ (4)ರ ಅಡಿಯಲ್ಲಿ ಯಾರ ಲೆಕ್ಕಪತ್ರಗಳನ್ನು ಚೀಟಿ ಲೆಕ್ಕಪರಿಶೋಧಕರ ಮೂಲಕ ಪರಿಶೋಧಿಸಬೇಕಾಗಿದೆಯೋ ಆ ಚೀಟಿ ಪ್ರವರ್ತಕನು ಚೀಟಿಗೆ ಸಂಬಂಧಿಸಿರುವ ಎಲ್ಲ ಲೆಕ್ಕಪತ್ರಗಳನ್ನು, ಪುಸ್ತಕಗಳನ್ನು ಮತ್ತು ಇತರೆ ದಾಖಲೆಗಳನ್ನು ಚೀಟಿ ಲೆಕ್ಕಪರಿಶೋಧಕರ ಮುಂದೆ ಹಾಜರುಪಡಿಸುವುದು, ಅಗತ್ಯವಾಗಬಹುದಾದಂಥ ಮಾಹಿತಿಯನ್ನು ಅವನಿಗೆ ಒದಗಿಸುವುದು ಮತ್ತು ಚೀಟಿಯ ಲೆಕ್ಕಪತ್ರಗಳ ಪರಿಶೋಧನೆ ಸಂಬಂಧದಲ್ಲಿ ಅವಶ್ಯಕ ಮತ್ತು ಸೂಕ್ತವಾಗಬಹುದಾದಂಥ ಎಲ್ಲ ಸಹಾಯ ಮತ್ತು ಸೌಲಭ್ಯಗಳನ್ನು ಒದಗಿಸುವುದು ಅವನ ಕರ್ತವ್ಯವಾಗಿರತಕ್ಕದ್ದು.

(6) ಪ್ರವರ್ತಕನು (4)ನೇ ಉಪ–ಪ್ರಕರಣದಡಿಯಲ್ಲಿ ಚೀಟಿ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗಾಗಿ ನಿಯಮಿಸಬಹುದಾದಂಥ ಫೀಜನ್ನು, ಚೀಟಿ ಲೆಕ್ಕಪರಿಶೋಧಕನಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಚೀಟಿ ಮೊಬಲಗಿನ ಪರಿಮಾಣವನ್ನವಲಂಬಿಸಿ, ಬೇರೆ ಬೇರೆ ಚೀಟಿಗಳಿಗಾಗಿ ಬೇರೆ ಬೇರೆ ಶುಲ್ಕ ಶ್ರೇಣಿಗಳನ್ನು ನಿಯಮಿಸಬಹುದು.

**62. ರಿಜಿಸ್ಟ್ರಾರನ ಕಚೇರಿಯಲ್ಲಿನ ದಸ್ತಾವೇಜುಗಳ ಪರಿಶೀಲನೆ.–** ಚೀಟಿಯ ಪ್ರವರ್ತಕನು ಅಥವಾ ಚೀಟಿಯಲ್ಲಿನ ಯಾರೇ ವಂತಿಗೆದಾರರು ಅಥವಾ ಹಕ್ಕುದಾರರು ಅಥವಾ ಪ್ರವರ್ತಕನ ಅಥವಾ ವಂತಿಗೆದಾರನ ಯಾರೇ ಕಾನೂನುಬದ್ಧ ಪ್ರತಿನಿಧಿಗಳು, ನಿಯಮಿಸಬಹುದಾದಂಥ ಫೀಜು ಸಂದಾಯ ಮಾಡಿದ ಮೇಲೆ,–

(ಎ) ರಿಜಿಸ್ಟ್ರಾರನು ನಿರ್ವಹಿಸಿರುವ ಚೀಟಿಗೆ ಸಂಬಂಧಪಟ್ಟ ದಸ್ತಾವೇಜುಗಳನ್ನು ಪರಿಶೀಲಿಸಬಹುದು; ಅಥವಾ

(ಬಿ) ಯಾವುದೇ ಅಂಥ ದಸ್ತಾವೇಜಿನ ಅಥವಾ ದಾಖಲೆಯ ಪ್ರಮಾಣೀಕೃತ ಪ್ರತಿಯನ್ನು ಅಥವಾ ಅದರ ಉದ್ಧೃತ ಭಾಗವನ್ನು ಪಡೆಯಬಹುದು.

63. **ಫೀಜುಗಳನ್ನು ವಿಧಿಸುವುದು.**– (1) ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿಯಮಿಸಬಹುದಾದಂಥ ಫೀಜುಗಳನ್ನು,–

(ಎ) 4ನೇ ಪ್ರಕರಣದ ಅಡಿಯಲ್ಲಿ ಪೂರ್ವ ಮಂಜೂರಾತಿ ನೀಡಿಕೆಗೆ;

(ಬಿ) ಚೀಟಿ ಒಪ್ಪಂದವನ್ನು ರಿಜಿಸ್ಟ್ರಾರನಿಗೆ ಸಲ್ಲಿಸುವುದಕ್ಕೆ ಮತ್ತು 7ನೇ ಪ್ರಕರಣದ ಅಡಿಯಲ್ಲಿ ಚೀಟಿಯ ನೋಂದಣಿಗೆ;

(ಸಿ) ಘೋಷಣೆಯನ್ನು ರಿಜಿಸ್ಟ್ರಾರನಿಗೆ ಸಲ್ಲಿಸುವುದಕ್ಕೆ ಮತ್ತು 9ನೇ ಪ್ರಕರಣದ ಅಡಿಯಲ್ಲಿ ಪ್ರಾರಂಭದ ಪ್ರಮಾಣ ಪತ್ರ ಪಡೆಯಲು;

(ಡಿ) ಈ ಅಧಿನಿಯಮದ ಯಾವುವೇ ಉಪಬಂಧಗಳ ಅಡಿಯಲ್ಲಿ ದಸ್ತಾವೇಜುಗಳ ಪ್ರತಿಗಳನ್ನು ಸಲ್ಲಿಸುವುದಕ್ಕೆ;

(ಇ) 61ನೇ ಪ್ರಕರಣದ ಅಡಿಯಲ್ಲಿ ಪ್ರವರ್ತಕನ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಗಾಗಿ;

(ಎಫ್) 62ನೇ ಪ್ರಕರಣದ ಅಡಿಯಲ್ಲಿ ದಸ್ತಾವೇಜುಗಳ ಪರಿಶೀಲನೆಗಾಗಿ;

(ಜಿ) 62ನೇ ಪ್ರಕರಣದ ಅಡಿಯಲ್ಲಿ ದಸ್ತಾವೇಜುಗಳ ಮತ್ತು ದಾಖಲೆಗಳ ಪ್ರಮಾಣೀಕೃತ ಪ್ರತಿಗಳನ್ನು ಅಥವಾ ಉದ್ಧೃತ ಭಾಗವನ್ನು ಪಡೆಯುವುದಕ್ಕಾಗಿ;

(ಹೆಚ್) ರಾಜ್ಯ ಸರ್ಕಾರಕ್ಕೆ ಅವಶ್ಯಕವೆಂದು ಕಂಡುಬರಬಹುದಾದಂಥ ಇತರ ವಿಷಯಗಳಿಗಾಗಿ

– ರಿಜಿಸ್ಟ್ರಾರನಿಗೆ ಸಂದಾಯ ಮಾಡತಕ್ಕದ್ದು.

(2) ಉಪ–ಪ್ರಕರಣ (1)ರ ಅಡಿಯಲ್ಲಿ ನಿಯಮಿಸಿದ ಫೀಜುಗಳ ಪಟ್ಟಿಯನ್ನು ರಿಜಿಸ್ಟ್ರಾರನ ಕಚೇರಿಯ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು.

## ಅಧ್ಯಾಯ – XII

## ವಿವಾದಗಳು ಮತ್ತು ಮಧ್ಯಸ್ಥಿಕೆ

64. **ಚೀಟಿ ವ್ಯವಹಾರಕ್ಕೆ ಸಂಬಂಧಿಸಿರುವ ವಿವಾದಗಳು.**– (1) ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಚೀಟಿ ವ್ಯವಹಾರದ ನಿರ್ವಹಣೆಗೆ ಸಂಬಂಧಿಸಿದ ಯಾವುದೇ ವಿವಾದವನ್ನು, ವಿವಾದದ ಯಾರೇ ಪಕ್ಷಕಾರರಲ್ಲಿ ಯಾರಾದರೂ, ಈ ಮುಂದಿನವರಲ್ಲಿ ಒಬ್ಬನಾಗಿದ್ದರೆ, ಮಧ್ಯಸ್ಥಿಕೆಗಾಗಿ ರಿಜಿಸ್ಟ್ರಾರನಿಗೆ ಕಳುಹಿಸತಕ್ಕದ್ದು, ಎಂದರೆ:–

(ಎ) ಚೀಟಿಯ ಸುಸ್ತಿ ವಂತಿಗೆದಾರ, ಹಿಂದಿನ ವಂತಿಗೆದಾರನು ಅಥವಾ ವಂತಿಗೆದಾರನ ಮೂಲಕ ಕ್ಲೇಮು ಮಾಡುವ ವ್ಯಕ್ತಿಯು ಅಥವಾ ಮೃತ ವಂತಿಗೆದಾರನೂ ಸೇರಿದಂತೆ ಪ್ರವರ್ತಕ, ಬಹುಮಾನಿತ ವಂತಿಗೆದಾರ ಅಥವಾ ಬಹುಮಾನಿತನಲ್ಲದ ವಂತಿಗೆದಾರ;

(ಬಿ) ವಂತಿಗೆದಾರನ, ಹಿಂದಿನ ವಂತಿಗೆದಾರನ ಅಥವಾ ಮೃತ ವಂತಿಗೆದಾರನ ಜಾಮೀನುದಾರ.

**ವಿವರಣೆ.**– ಈ ಉಪ–ಪ್ರಕರಣದ ಉದ್ದೇಶಗಳಿಗಾಗಿ, ಚೀಟಿ ವ್ಯವಹಾರದ ನಿರ್ವಹಣೆಗೆ ಸಂಬಂಧಿಸಿದ ವಿವಾದವು,–

(i) ಯಾವುದೇ ಋಣಕ್ಕೆ ಸಂಬಂಧಿಸಿದಂತೆ ಅಂಥ ಋಣವನ್ನು ಒಪ್ಪಿಕೊಂಡಿರಲಿ ಅಥವಾ ಒಪ್ಪಿಕೊಂಡಿರದಿರಲಿ ಪ್ರವರ್ತಕನ ಕ್ಲೇಮನ್ನು ಅಥವಾ ಅದಕ್ಕೆ ಸಂಬಂಧಿಸಿದಂತೆ ಅವನ ವಿರುದ್ಧದ ಕ್ಲೇಮನ್ನು ಅಥವಾ ಪ್ರವರ್ತಕನಿಂದ ವಂತಿಗೆದಾರನಿಗೆ, ಹಿಂದಿನ ವಂತಿಗೆದಾರನಿಗೆ ಅಥವಾ ನಾಮನಿರ್ದೇಶಿತನಿಗೆ, ವಾರಸುದಾರನಿಗೆ ಅಥವಾ ಕಾನೂನುಸಮ್ಮತ ಪ್ರತಿನಿಧಿಗೆ ಸಂಬಂಧಿಸಿದ ತಗಾದೆಯನ್ನು ಒಪ್ಪಿಕೊಂಡಿರಲಿ ಅಥವಾ ಒಪ್ಪಿಕೊಂಡಿರದಿರಲಿ ಅಂಥ ತಗಾದೆಯನ್ನು;

(ii) ಯಾವುದೇ ಮೊತ್ತಕ್ಕೆ ಜಾಮೀನುದಾರನು ಮಾಡಿರುವ ಕ್ಲೇಮನ್ನು ಅಥವಾ ಪ್ರವರ್ತಕನು ಕೊಟ್ಟಿರುವ ಮತ್ತು ಮೂಲ ಸಾಲಗಾರನು ಸಂದಾಯ ಮಾಡಲು ತಪ್ಪಿದ ಕಾರಣ ಜಾಮೀನುದಾರನಿಂದ ವಸೂಲಾದ ಸಾಲಕ್ಕೆ ಸಂಬಂಧಪಟ್ಟಂತೆ ಮೂಲ ಸಾಲಗಾರನಿಂದ ಅವನಿಗೆ ಸಲ್ಲಬೇಕಾದ ತಗಾದೆಯನ್ನು ಅಂಥ ಕ್ಲೇಮನ್ನು ಅಥವಾ ತಗಾದೆಯನ್ನು ಒಪ್ಪಿಕೊಂಡಿರಲಿ ಅಥವಾ ಒಪ್ಪಿಕೊಂಡಿರದಿರಲಿ ಅಂಥ ಕ್ಲೇಮನ್ನು ಅಥವಾ ತಗಾದೆಯನ್ನು;

(iii) ವಂತಿಗೆದಾರನು, ಹಿಂದಿನ ವಂತಿಗೆದಾರನು, ನಾಮನಿರ್ದೇಶಿತನು, ಮೃತ ವಂತಿಗೆದಾರನ ವಾರಸುದಾರನು ಅಥವಾ ಕಾನೂನುಸಮ್ಮತ ಪ್ರತಿನಿಧಿಯು, ಹಸ್ತಾಂತರಣದ ಷರತ್ತುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಪ್ರವರ್ತಕನಿಗೆ ಪುನಃ ಪ್ರಾಪ್ತವಾದ ಕಾರಣಕ್ಕಾಗಿ ಭೂಮಿಯನ್ನು ಅಥವಾ ಯಾವುದೇ ಇತರ ಸ್ವತ್ತಿನ ಸ್ವಾಧೀನವನ್ನು ಒಪ್ಪಿಸಿಕೊಡಲು ನಿರಾಕರಿಸಿರುವುದನ್ನು ಅಥವಾ ವಿಫಲವಾಗಿರುವುದನ್ನು;

– ಒಳಗೊಳ್ಳುತ್ತದೆ.

(2) ಉಪ-ಪ್ರಕರಣ (1)ರ ಉದ್ದೇಶಗಳಿಗಾಗಿ ರಿಜಿಸ್ಟ್ರಾರನ ಐತೀರ್ಪಿಗಾಗಿ ಕಳುಹಿಸಿದ ಯಾವುದೇ ವಿಷಯವು ವಿವಾದಗ್ರಸ್ತವೇ ಅಥವಾ ಅಲ್ಲವೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದ್ದಲ್ಲಿ, ಅದನ್ನು ರಿಜಿಸ್ಟ್ರಾರನು ತೀರ್ಮಾನಿಸತಕ್ಕದ್ದು ಮತ್ತು ಅದರ ಮೇಲಿನ ಆತನ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

(3) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದ ಯಾವುದೇ ವಿವಾದದ ಸಂಬಂಧದಲ್ಲಿ ಯಾವುದೇ ದಾವೆಯನ್ನು ಅಥವಾ ಇತರ ವ್ಯವಹರಣೆಗಳನ್ನು ಪುರಸ್ಕರಿಸಲು ಯಾವುದೇ ಸಿವಿಲ್ ನ್ಯಾಯಾಲಯವು ಅಧಿಕಾರವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ.

65. **ಕಾಲಪರಿಮಿತಿ ಅವಧಿ.**- (1) ಕಾಲಪರಿಮಿತಿ ಅಧಿನಿಯಮ, 1963 (1963ರ 36)ರಲ್ಲಿ ಏನೇ ಒಳಗೊಂಡಿದ್ದರೂ, ಆದರೆ ಈ ಅಧಿನಿಯಮದಲ್ಲಿ ಒಳಗೊಂಡಿರುವ ನಿರ್ದಿಷ್ಟ ಉಪಬಂಧಗಳಿಗೊಳಪಟ್ಟು, 64ನೇ ಪ್ರಕರಣದ ಅಡಿಯಲ್ಲಿ ವಿವಾದವನ್ನು ರಿಜಿಸ್ಟ್ರಾರನಿಗೆ ಉಲ್ಲೇಖಿಸಿದ ಸಂದರ್ಭದಲ್ಲಿ ಕಾಲಪರಿಮಿತಿ ಅವಧಿಯು,-

(ಎ) ವಿವಾದವು, ಮೃತ ವಂತಿಗೆದಾರನಿಂದ ಪ್ರವರ್ತಕನಿಗೆ ಬರಬೇಕಾಗಿರುವ ಯಾವುದೇ ಮೊತ್ತವನ್ನು, ಅದರ ಮೇಲಿನ ಬಡ್ಡಿಯೂ ಸೇರಿದಂತೆ, ವಸೂಲಿ ಮಾಡುವುದಕ್ಕೆ ಸಂಬಂಧಿಸಿದ್ದರೆ, ಆ ವಂತಿಗೆದಾರನು ಮೃತನಾದ ಅಥವಾ ವಂತಿಗೆದಾರನಾಗಿರುವುದು ನಿಂತುಹೋದ ದಿನಾಂಕದಿಂದ ಲೆಕ್ಕ ಹಾಕಲಾದಂತೆ ಮೂರು ವರ್ಷಗಳಾಗಿರತಕ್ಕದ್ದು; ಅಥವಾ

(ಬಿ) ವಿವಾದವು, ಪ್ರವರ್ತಕನ ಮತ್ತು ವಂತಿಗೆದಾರನ ಅಥವಾ ಹಿಂದಿನ ವಂತಿಗೆದಾರನ, ಅಥವಾ ಮೃತ ವಂತಿಗೆದಾರನ ನಾಮನಿರ್ದೇಶಿತನ, ವಾರಸುದಾರನ ಅಥವಾ ಕಾನೂನು ಪ್ರತಿನಿಧಿಯ ನಡುವಿನದ್ದಾಗಿದ್ದರೆ ಮತ್ತು ಆ ವಿವಾದಕ್ಕೆ ಸಂಬಂಧಿಸಿದಂತೆ ಯಾರೇ ಪಕ್ಷಕಾರನಿಂದ ಆಗಿರುವ ಯಾವುದೇ ಕಾರ್ಯಕ್ಕೆ ಅಥವಾ ತಪ್ಪಿಗೆ ಸಂಬಂಧಿಸಿದ್ದರೆ, ಆ ಕಾರ್ಯವನ್ನು ಅಥವಾ ತಪ್ಪನ್ನು ಮಾಡಿದ ಆ ದಿನಾಂಕದಿಂದ ಮೂರು ವರ್ಷಗಳ ಅವಧಿಯದಾಗಿರತಕ್ಕದ್ದು.

(2) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಿದವುಗಳಲ್ಲದ, 64ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನಿಗೆ ಉಲ್ಲೇಖಿಸುವುದು ಅಗತ್ಯವಾಗಿರುವ ಯಾವುದೇ ವಿವಾದದ ಸಂದರ್ಭದಲ್ಲಿ, ಕಾಲ ಪರಿಮಿತಿ ಅವಧಿಯು, ವಿವಾದವು ದಾವೆಯಾಗಿದ್ದರೆ ಹೇಗೋ ಹಾಗೆ ಮತ್ತು ರಿಜಿಸ್ಟ್ರಾರನು, ಸಿವಿಲ್ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ ಕಾಲಪರಿಮಿತಿ ಅಧಿನಿಯಮ, 1963 (1963ರ 36)ರ ಉಪಬಂಧಗಳಿಂದ ವಿನಿಯಮಿತವಾಗತಕ್ಕದ್ದು.

(3) ಉಪ-ಪ್ರಕರಣ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದರೂ, ಅದರಲ್ಲಿ ನಿರ್ದಿಷ್ಟಪಡಿಸಿದ ಕಾಲಪರಿಮಿತಿ ಅವಧಿಯ ಮುಕ್ತಾಯದ ತರುವಾಯ, ಅರ್ಜಿದಾರನು, ಅಂಥ ಅವಧಿಯೊಳಗೆ ವಿವಾದವನ್ನು ಉಲ್ಲೇಖಿಸದಿರುವುದಕ್ಕಾಗಿ ಸಾಕಷ್ಟು ಕಾರಣಗಳು ತನಗಿದ್ದವೆಂದು ರಿಜಿಸ್ಟ್ರಾರನಿಗೆ ಮನದಟ್ಟು ಮಾಡಿಕೊಟ್ಟರೆ, ರಿಜಿಸ್ಟ್ರಾರನು ವಿವಾದವನ್ನು ಅಂಗೀಕರಿಸಬಹುದು.

66. **ವಿವಾದಗಳ ಇತ್ಯರ್ಥ.**- (1) ರಿಜಿಸ್ಟ್ರಾರನು, ತನಗೆ ಉಲ್ಲೇಖಿಸಲಾದ ಅಥವಾ ತನ್ನ ಗಮನಕ್ಕೆ ತರಲಾದ ಯಾವುದೇ ವಿಷಯವು 64ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗಿನ ವಿವಾದವಾಗಿದೆಯೆಂದು ಮನಗಂಡರೆ, ನಿಯಮಿಸಬಹುದಾದಂಥ ನಿಯಮಗಳಿಗೆ ಒಳಪಟ್ಟು, ವಿವಾದವನ್ನು ತಾನೇ ಇತ್ಯರ್ಥಗೊಳಿಸತಕ್ಕದ್ದು ಅಥವಾ ಅದನ್ನು ಅವನೇ ನೇಮಕ ಮಾಡಿದ ವ್ಯಕ್ತಿಗೆ (ಈ ಅಧ್ಯಾಯದಲ್ಲಿ ಇನ್ನು ಮುಂದೆ ನೇಮಿಸಿದ ವ್ಯಕ್ತಿ ಎಂದು ಉಲ್ಲೇಖಿಸಲಾಗಿದೆ) ವಿಲೆಗಾಗಿ ಕಳುಹಿಸತಕ್ಕದ್ದು.

(2) ಯಾವುದೇ ವಿವಾದವನ್ನು (1)ನೇ ಉಪ-ಪ್ರಕರಣದ ಅಡಿಯಲ್ಲಿ ಇತ್ಯರ್ಥಕ್ಕಾಗಿ ನೇಮಿಸಿದ ವ್ಯಕ್ತಿಗೆ ಕಳುಹಿಸಿದ್ದರೆ, ರಿಜಿಸ್ಟ್ರಾರನು, ಯಾವುದೇ ಸಮಯದಲ್ಲಿ ಅಂಥ ವಿವಾದವನ್ನು, ಲಿಖಿತದಲ್ಲಿ ಅಭಿಲೇಖಿಸಬೇಕಾದ ಕಾರಣಗಳಿಗಾಗಿ, ನೇಮಿಸಿದ ವ್ಯಕ್ತಿಯಿಂದ ಹಿಂದಕ್ಕೆ ಪಡೆಯಬಹುದು ಮತ್ತು ವಿವಾದವನ್ನು ತಾನೇ ಇತ್ಯರ್ಥಗೊಳಿಸಬಹುದು ಅಥವಾ ಅದನ್ನು ಮತ್ತೆ ಇತ್ಯರ್ಥಕ್ಕಾಗಿ ತಾನೇ ನೇಮಕ ಮಾಡಿದ ಇತರ ಯಾರೇ ನೇಮಿಸಿದ ವ್ಯಕ್ತಿಗೆ ಕಳುಹಿಸತಕ್ಕದ್ದು.

67. **ವಿವಾದಗಳ ಇತ್ಯರ್ಥಕ್ಕಾಗಿನ ಪ್ರಕ್ರಿಯೆ ಮತ್ತು ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯ ಅಧಿಕಾರಗಳು.**- (1) 66ನೇ ಪ್ರಕರಣದ ಅಡಿಯಲ್ಲಿ ವಿಚಾರಣೆ ಮಾಡುವ ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿ, ಆ ಪ್ರಕರಣದ ಅಡಿಯಲ್ಲಿ ಅವರಿಗೆ ಪ್ರದತ್ತವಾದ ಅಧಿಕಾರಗಳ ಜೊತೆಗೆ, ಈ ಮುಂದಿನ ವಿಷಯಗಳಿಗೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908, (1908ರ 5)ರ ಅಡಿಯಲ್ಲಿ ದಾವೆಯ ವಿಚಾರಣೆ ನಡೆಸುವಾಗ ಸಿವಿಲ್ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥವೇ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:
-

(ಎ) ಯಾರೇ ವ್ಯಕ್ತಿಗೆ ಸಮನು ನೀಡುವುದು ಮತ್ತು ಹಾಜರಿರುವಂತೆ ಒತ್ತಾಯಿಸುವುದು ಮತ್ತು ಪ್ರಮಾಣ ಮಾಡಿಸಿ ಆತನ ಹೇಳಿಕೆಯ ಸತ್ಯಾಸತ್ಯತೆಯನ್ನು ಪರೀಕ್ಷಿಸುವುದು;

(ಬಿ) ಲಿಖಿತ ಪ್ರಶ್ನಾವಳಿಗೆ ಉತ್ತರಿಸುವಂತೆ ಮತ್ತು ದಸ್ತಾವೇಜುಗಳನ್ನು ಪರಿಶೀಲಿಸುವಂತೆ ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೂಲಕ ಸಾಕ್ಷ್ಯವನ್ನು ಪಡೆದುಕೊಳ್ಳುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಗಳನ್ನು ಕೋರುವುದು;

(ಇ) ಸಾಕ್ಷಿಗಳ ಹೇಳಿಕೆಗಳ ಸತ್ಯಾಸತ್ಯತೆಯನ್ನು ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ವ್ಯಕ್ತಿಗಳನ್ನು ನಿಯೋಜಿಸಿ ಲಿಖಿತದಲ್ಲಿ ಕಾರ್ಯಾಜ್ಞೆಯನ್ನು ಹೊರಡಿಸುವುದು; ಮತ್ತು

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(2) ರಿಜಿಸ್ಟ್ರಾರನ ಅಥವಾ ನೇಮಿಸಿದ ವ್ಯಕ್ತಿಯ ಅನುಮತಿಯ ಹೊರತು, ಯಾರೇ ಪಕ್ಷಕಾರನು ವಿವಾದದ ವಿಚಾರಣೆಯಲ್ಲಿ ನ್ಯಾಯವಾದಿಯ ಮೂಲಕ ಪ್ರತಿನಿಧಿತನಾಗತಕ್ಕದ್ದಲ್ಲ.

(3) (ಎ) ಯಾರೇ ವ್ಯಕ್ತಿಯು, ಅವನು ವಂತಿಗೆದಾರನಾಗಿರಲಿ ಅಥವಾ ಇಲ್ಲದಿರಲಿ, ವಿವಾದಕ್ಕೆ ಪಕ್ಷಕಾರನಾಗಿರುವ ವ್ಯಕ್ತಿಯ ಸ್ವತ್ತಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಆರ್ಜಿಸಿದ್ದಾನೆಂದು ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿ ಮನಗಂಡರೆ, ಅವನು, ಸ್ವತ್ತಿನಲ್ಲಿನ ಹಿತಾಸಕ್ತಿಯನ್ನು ಆರ್ಜಿಸಿರುವ ಆ ವ್ಯಕ್ತಿಯನ್ನು ವಿವಾದಕ್ಕೆ ಪಕ್ಷಕಾರನಾಗಿ ಸೇರಿಸಿಕೊಳ್ಳಬಹುದೆಂದು ಆದೇಶಿಸಬಹುದು ಮತ್ತು ಆ ವಿವಾದದ ಮೇಲೆ ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯು ನೀಡಬಹುದಾದ ಯಾವುದೇ ತೀರ್ಮಾನವು, ಹಾಗೆ ಸೇರಿಸಿಕೊಂಡ ಪಕ್ಷಕಾರನು ಆ ವಿವಾದಕ್ಕೆ ಮೂಲ ಪಕ್ಷಕಾರನಾಗಿದ್ದರೆ ಅವನು ಹೇಗೆ ಬದ್ಧನಾಗುತ್ತಿದ್ದನೋ ಅದೇ ರೀತಿಯಲ್ಲಿ ಬದ್ಧನಾಗತಕ್ಕದ್ದು.

(ಬಿ) ವಿವಾದವನ್ನು ಬೇರೆ ವ್ಯಕ್ತಿಯ ಹೆಸರಿನಲ್ಲಿ ಉಲ್ಲೇಖಿಸಲಾಗಿರುವಲ್ಲಿ ಅಥವಾ ಎಲ್ಲ ಅವಶ್ಯಕ ವ್ಯಕ್ತಿಗಳನ್ನು ಪಕ್ಷಕಾರರಾಗಿ ಸೇರಿಸಿರದಿದ್ದಲ್ಲಿ, ರಿಜಿಸ್ಟ್ರಾರನು ಅಥವಾ ನೇಮಿಸಿದ ವ್ಯಕ್ತಿಯು ಅದು ನೈಜ ತಪ್ಪಿನ ಕಾರಣದಿಂದಾಗಿದೆಯೆಂದು ಮನಗಂಡರೆ, ವಿವಾದದ ವಿಚಾರಣೆಯ ಯಾವುದೇ ಹಂತದಲ್ಲಿ, ನ್ಯಾಯಸಮ್ಮತವೆಂದು ಅವನು ಭಾವಿಸುವಂಥ ನಿಬಂಧನೆಗಳ ಮೇಲೆ ಯಾರೇ ಇತರ ವ್ಯಕ್ತಿಯನ್ನು ವಿವಾದದ ಪಕ್ಷಕಾರನಾಗಿ ಪ್ರತಿಯೋಜಿಸಬೇಕೆಂದು ಅಥವಾ ಸೇರಿಸಬೇಕೆಂದು ಆದೇಶಿಸಬಹುದು.

(ಸಿ) ರಿಜಿಸ್ಟ್ರಾರನು ಅಥವಾ ನೇಮಿಸಿದ ವ್ಯಕ್ತಿಯು, ಯಾರೇ ಪಕ್ಷಕಾರರು ಅರ್ಜಿಯನ್ನು ಸಲ್ಲಿಸಿದಾಗ ಅಥವಾ ಸಲ್ಲಿಸದಿದ್ದಾಗ ವ್ಯವಹರಣೆಗಳ ಯಾವುದೇ ಹಂತದಲ್ಲಿ ಮತ್ತು ನ್ಯಾಯಸಮ್ಮತವೆಂದು ರಿಜಿಸ್ಟ್ರಾರನಿಗೆ ಅಥವಾ ನೇಮಿಸಿದ ವ್ಯಕ್ತಿಗೆ ಕಂಡುಬರಬಹುದಾದಂಥ ನಿಬಂಧನೆಗಳ ಮೇಲೆ ತಪ್ಪಾಗಿ ಸೇರಿಸಿದ ಯಾರೇ ಪಕ್ಷಕಾರನ ಹೆಸರನ್ನು ತೆಗೆದುಹಾಕಬೇಕೆಂದು ಆದೇಶಿಸಬಹುದು.

(ಡಿ) ವಿವಾದದ ಪಕ್ಷಕಾರನಾಗಿದ್ದ ಮತ್ತು ಅದೇ ವ್ಯಾಜ್ಯ ಕಾರಣದ ಸಂಬಂಧದಲ್ಲಿ ಒಂದಕ್ಕಿಂತ ಹೆಚ್ಚಿನ ಪರಿಹಾರಕ್ಕೆ ಹಕ್ಕುದಾರನಾಗಿದ್ದ ಯಾರೇ ವ್ಯಕ್ತಿಯು ಎಲ್ಲ ಅಥವಾ ಯಾವುದೇ ಅಂಥ ಪರಿಹಾರಗಳನ್ನು ಕ್ಲೇಮು ಮಾಡಬಹುದು, ಆದರೆ ಅವನು ಯಾವುದೇ ಅಂಥ ಪರಿಹಾರವನ್ನು ಕ್ಲೇಮು ಮಾಡಲು ತಪ್ಪಿದರೆ, ಅವನು, ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯ ಅನುಮತಿಯ ಹೊರತು, ಆ ಪರಿಹಾರವನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

**68. ತೀರ್ಪಿಗೆ ಮುಂಚೆ ಜಪ್ತಿ ಮತ್ತು ಇತರ ಮಧ್ಯಕಾಲೀನ ಆದೇಶಗಳು.–** (1) ಪ್ರಕರಣ 64 ರ ಅಡಿಯಲ್ಲಿ ವಿವಾದವನ್ನು ಉಲ್ಲೇಖಿಸಲಾಗಿರುವಲ್ಲಿ ಮತ್ತು ವಿವಾದದ ವಿಚಾರಣೆ ಮಾಡುವ ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿ, ಅಂಥ ವಿವಾದದ ಪಕ್ಷಕಾರನು, ಮಧ್ಯಂತರ ವಿಚಾರಣೆಯ ನಂತರ ಅಥವಾ ಬೇರೆ ರೀತಿಯಲ್ಲಿ ಯಾವುದೇ ಐತೀರ್ಪಿನ ಅಮಲ್ಜಾರಿಯನ್ನು ಅಥವಾ ಮಾಡಬಹುದಾದ ಯಾವುದೇ ಆದೇಶವನ್ನು ಕಾರ್ಯಗತಗೊಳಿಸುವುದನ್ನು ವಿಫಲಗೊಳಿಸುವ ಅಥವಾ ಅಡ್ಡಿಯುಂಟು ಮಾಡುವ ಉದ್ದೇಶದಿಂದ,–

(ಎ) ತನ್ನ ಸಂಪೂರ್ಣ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ವಿಲೆ ಮಾಡಬಹುದೆಂದು; ಅಥವಾ

(ಬಿ) ರಿಜಿಸ್ಟ್ರಾರನ ಅಧಿಕಾರವ್ಯಾಪ್ತಿಯಿಂದ ಸಂಪೂರ್ಣ ಸ್ವತ್ತನ್ನು ಅಥವಾ ಅದರ ಯಾವುದೇ ಭಾಗವನ್ನು ಸ್ಥಳಾಂತರ ಮಾಡಬಹುದೆಂದು

– ಮನಗಂಡಲ್ಲಿ ಅವನು ಸಾಕಷ್ಟು ಭದ್ರತೆ ಒದಗಿಸಿದ ಹೊರತು, ಸದರಿ ಸ್ವತ್ತಿನ ಷರತ್ತುಪೂರ್ವಕ ಜಪ್ತಿಗೆ ನಿರ್ದೇಶಿಸಬಹುದು ಮತ್ತು ಅಂಥ ಜಪ್ತಿಗೆ ಸಕ್ಷಮ ಸಿವಿಲ್ ನ್ಯಾಯಾಲಯವು ಆದೇಶ ಮಾಡಿದ್ದರೆ ಹೇಗೆ ಪರಿಣಾಮಕಾರಿಯಾಗುತ್ತಿತ್ತೋ ಅದೇ ರೀತಿ ಪರಿಣಾಮಕಾರಿಯಾಗತಕ್ಕದ್ದು.

(2) ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯು (1)ನೇ ಉಪ–ಪ್ರಕರಣದ ಅಡಿಯಲ್ಲಿ ಯಾವುದೇ ಸ್ವತ್ತಿನ ಜಪ್ತಿಗಾಗಿ ನಿರ್ದೇಶಿಸುವಲ್ಲಿ, ಯಾರ ಸ್ವತ್ತನ್ನು ಹಾಗೆ ಜಪ್ತಿ ಮಾಡಲಾಗುವುದೋ, ಆ ವ್ಯಕ್ತಿಗೆ, ಸೂಕ್ತವೆಂದು ಭಾವಿಸುವಂಥ ಭದ್ರತೆಯನ್ನು ನಿರ್ದಿಷ್ಟಪಡಿಸಿದ ಅವಧಿಯೊಳಗೆ ಒದಗಿಸಲು ಕೋರುವ ನೋಟೀಸನ್ನು ನೀಡತಕ್ಕದ್ದು, ಮತ್ತು ಆ ವ್ಯಕ್ತಿಯು ಅಂಥ ಭದ್ರತೆಯನ್ನು ಒದಗಿಸಲು ವಿಫಲನಾದರೆ, ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿ ಆದೇಶವನ್ನು ಸ್ಥಿರೀಕರಿಸಬಹುದು ಮತ್ತು ವಿವಾದದ ತೀರ್ಮಾನದ ನಂತರ ಐತೀರ್ಪು ನೀಡಲಾಗಿದ್ದರೆ, ಕ್ಲೇಮು ಮಾಡುವ ಸಲುವಾಗಿ ಹಾಗೆ ಜಪ್ತಿ ಮಾಡಲಾದ ಸ್ವತ್ತನ್ನು ವಿಲೆ ಮಾಡುವಂತೆ ನಿರ್ದೇಶಿಸಬಹುದು.

(3) ಈ ಅಧಿನಿಯಮದ ಅಡಿಯಲ್ಲಿ ಮಾಡಿದ ಯಾವುದೇ ಜಪ್ತಿಯು, ವಿವಾದಕ್ಕೆ ಪಕ್ಷಕಾರರಾಗಿರದ ವ್ಯಕ್ತಿಗಳಿಗೆ, ಸ್ವತ್ತಿನ ಜಪ್ತಿಗೂ ಮುಂಚೆ ಇದ್ದಂಥ ಹಕ್ಕುಗಳಿಗೆ ಬಾಧಕವಾಗತಕ್ಕದ್ದಲ್ಲ ಅಥವಾ ಯಾರ ಸ್ವತ್ತನ್ನು ಹಾಗೆ ಜಪ್ತಿ ಮಾಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಡಿಕ್ರಿ ಹೊಂದಿರುವ ಯಾರೇ ವ್ಯಕ್ತಿಯು ಅಂಥ ಡಿಕ್ರಿ ಜಪ್ತಿಗೆ ಒಳಪಟ್ಟಿರುವ ಸ್ವತ್ತಿನ ಮಾರಾಟಕ್ಕಾಗಿ ಅರ್ಜಿ ಸಲ್ಲಿಸುವುದನ್ನು ಪ್ರತಿಷೇಧಿಸತಕ್ಕದ್ದಲ್ಲ.

(4) ನ್ಯಾಯೋದ್ದೇಶವು ವಿಫಲವಾಗುವುದನ್ನು ತಡೆಗಟ್ಟುವ ಕ್ರಮವಾಗಿ, ರಿಜಿಸ್ಟ್ರಾರನು ಅಥವಾ ನೇಮಿಸಿದ ವ್ಯಕ್ತಿಯು (1)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಲಾದ ವಿವಾದದಲ್ಲಿ, ಐತೀರ್ಪು ಇತ್ಯರ್ಥದಲ್ಲಿರುವಾಗ ನ್ಯಾಯಸಮ್ಮತ ಹಾಗೂ ಅನುಕೂಲಕರವೆಂದು ಕಂಡುಬರಬಹುದಾದಂಥ ವಾದಕಾಲೀನ ಆದೇಶಗಳನ್ನು ಮಾಡಬಹುದು.

**69. ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯ ತೀರ್ಮಾನ.–** ಈ ಅಧ್ಯಾಯದ ಅಡಿಯಲ್ಲಿ ವಿವಾದವನ್ನು ಮಧ್ಯಸ್ಥಿಕೆಗಾಗಿ ಕಳುಹಿಸಲಾಗಿದ್ದಲ್ಲಿ, ರಿಜಿಸ್ಟ್ರಾರನು ಅಥವಾ ನೇಮಿಸಿದ ವ್ಯಕ್ತಿಯು, ವಿವಾದದ ಪಕ್ಷಕಾರರಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶ ನೀಡಿದ ನಂತರ, ವಿವಾದದ ಬಗ್ಗೆ ಮತ್ತು ವಿವಾದದ ವ್ಯವಹರಣೆಗಳಿಗೆ ಸಂಬಂಧಪಟ್ಟಂತೆ ವಿವಾದದ ಪಕ್ಷಕಾರರು ವಹಿಸಿದ ವೆಚ್ಚಗಳ ಬಗ್ಗೆ ಮತ್ತು ರಿಜಿಸ್ಟ್ರಾರನಿಗೆ ಅಥವಾ ನೇಮಿಸಿದ ವ್ಯಕ್ತಿಗೆ ಸಂದಾಯ ಮಾಡಬಹುದಾದ ಫೀಜಿನ ಹಾಗೂ ವೆಚ್ಚಗಳ ಬಗ್ಗೆ ಐತೀರ್ಪು ನೀಡಬಹುದು ಮತ್ತು ರಿಜಿಸ್ಟ್ರಾರನು ವಿವಾದವನ್ನು ತೀರ್ಮಾನಿಸುವುದಕ್ಕಾಗಿ ಅವಧಿಯನ್ನೇನಾದರೂ ನಿಗದಿಪಡಿಸಿದ್ದರೆ, ಆ

ಅವಧಿಯ ಮುಕ್ತಾಯದ ನಂತರ ಅಂಥ ಐತೀರ್ಪನ್ನು ಮಾಡಲಾಗಿದೆಯೆಂಬ ಕಾರಣದ ಮೇಲೆ ಮಾತ್ರವೇ ಅದು ಅಸಿಂಧುವಾಗತಕ್ಕದ್ದಲ್ಲ ಮತ್ತು ಅದು 70ನೇ ಪ್ರಕರಣದ ಅಡಿಯಲ್ಲಿ ಅಪೀಲನ್ನು ಸಲ್ಲಿಸುವುದಕ್ಕೆ ಒಳಪಟ್ಟು ಅಂತಿಮವಾದುದಾಗಿರತಕ್ಕದ್ದು ಮತ್ತು ವಿವಾದದ ಪಕ್ಷಕಾರರು ಅದಕ್ಕೆ ಬದ್ಧರಾಗಿರತಕ್ಕದ್ದು.

70. **ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯ ತೀರ್ಮಾನದ ವಿರುದ್ಧ ಅಪೀಲು.**- ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯು ಹೊರಡಿಸಿದ ಯಾವುದೇ ಆದೇಶದಿಂದ ಅಥವಾ 69ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯ ಐತೀರ್ಪಿನಿಂದ ಬಾಧಿತನಾದ ಯಾರೇ ಪಕ್ಷಕಾರನು, ಆದೇಶದ ಅಥವಾ ಐತೀರ್ಪಿನ ದಿನಾಂಕದಿಂದ ಎರಡು ತಿಂಗಳೊಳಗೆ ರಾಜ್ಯ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು.

71. **ಹಣವನ್ನು ವಸೂಲಿ ಮಾಡುವುದು ಹೇಗೆ.**- 68ನೇ ಅಥವಾ 69ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರ್ ಅಥವಾ ನೇಮಿಸಿದ ವ್ಯಕ್ತಿಯು ಹೊರಡಿಸಿದ ಪ್ರತಿಯೊಂದು ಆದೇಶವನ್ನು ಮತ್ತು ಯಾವುದೇ ಹಣದ ಸಂದಾಯಕ್ಕಾಗಿ 70ನೇ ಪ್ರಕರಣದ ಅಡಿಯಲ್ಲಿ ಅಪೀಲಿನಲ್ಲಿ ರಾಜ್ಯ ಸರ್ಕಾರವು ಹೊರಡಿಸಿದ ಪ್ರತಿಯೊಂದು ಆದೇಶವನ್ನು,-

(ಎ) ರಿಜಿಸ್ಟ್ರಾರನು ಆ ಬಗ್ಗೆ ಒಂದು ಪ್ರಮಾಣ ಪತ್ರವನ್ನು ನೀಡಿದಾಗ ಪಾಲಿಸದಿದ್ದರೆ ಅದನ್ನು ಸಿವಿಲ್ ನ್ಯಾಯಾಲಯದ ಡಿಕ್ರಿಯೆಂದು ಭಾವಿಸತಕ್ಕದ್ದು ಮತ್ತು ಅಂಥ ನ್ಯಾಯಾಲಯದ ಡಿಕ್ರಿ ರೀತಿಯಲ್ಲಿ ಜಾರಿಗೊಳಿಸತಕ್ಕದ್ದು; ಅಥವಾ

(ಬಿ) ಭೂ ಕಂದಾಯ ಬಾಕಿಯಂತೆ ಆ ಮೊಬಲಗುಗಳನ್ನು ವಸೂಲು ಮಾಡುವುದಕ್ಕಾಗಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳಿಗನುಸಾರವಾಗಿ ಆ ಆದೇಶವನ್ನು ಕಾರ್ಯಗತಗೊಳಿಸತಕ್ಕದ್ದು:

ಪರಂತು, (ಬಿ) ಖಂಡದ ಅಡಿಯಲ್ಲಿ ಜಾರಿಗೊಳಿಸುವುದಕ್ಕಾಗಿ ಯಾವುದೇ ಅರ್ಜಿಯನ್ನು, ಆದೇಶದಲ್ಲಿ ನಿಗದಿಪಡಿಸಿದ ದಿನಾಂಕದಿಂದ ಮತ್ತು ಅಂಥ ದಿನಾಂಕವನ್ನು ನಿಗದಿಪಡಿಸಿರದಿದ್ದರೆ, ಆದೇಶದ ದಿನಾಂಕದಿಂದ ಮೂರು ವರ್ಷಗಳ ಮುಕ್ತಾಯದ ತರುವಾಯ ಸಲ್ಲಿಸತಕ್ಕದ್ದಲ್ಲ.

72. **ಪ್ರಮಾಣ ಪತ್ರ ನೀಡಿದ ನಂತರ ಮಾಡಲಾದ ಸ್ವತ್ತಿನ ಖಾಸಗಿ ವರ್ಗಾವಣೆಯು ಪ್ರವರ್ತಕನ ವಿರುದ್ಧ ಊರ್ಜಿತವಾಗತಕ್ಕದ್ದಲ್ಲ.**- 71ನೇ ಪ್ರಕರಣದ ಅಡಿಯಲ್ಲಿ ರಿಜಿಸ್ಟ್ರಾರನು ಪ್ರಮಾಣ ಪತ್ರ ನೀಡಿದ ನಂತರ ಸ್ವತ್ತಿನ ಮೇಲೆ ಮಾಡಿದ ಪೂರ್ವಾಧಿಯ ಅಥವಾ ಸೃಜಿಸಿದ ಋಣಭಾರದ ಯಾವುದೇ ಖಾಸಗಿ ವರ್ಗಾವಣೆಯು ಅಥವಾ ಅದನ್ನು ವಶಕ್ಕೊಪ್ಪಿಸುವುದು ಯಾವ ಪ್ರವರ್ತಕನ ಅರ್ಜಿಯ ಮೇಲೆ ಸದರಿ ಪ್ರಮಾಣಪತ್ರವನ್ನು ನೀಡಲಾಗಿದೆಯೋ ಆ ಪ್ರವರ್ತಕನ ವಿರುದ್ಧ ನಿಷ್ಕ್ರಿಯ ಮತ್ತು ಅಸಿಂಧುವಾಗಿರತಕ್ಕದ್ದು.

## ಅಧ್ಯಾಯ – XIII

### ಸಂಕೀರ್ಣ

73. **ರಿಸರ್ವ್ ಬ್ಯಾಂಕಿನ ಸಲಹಾತ್ಮಕ ಪಾತ್ರ.**- ರಿಸರ್ವ್ ಬ್ಯಾಂಕು ಈ ಅಧಿನಿಯಮಕ್ಕೆ ಸಂಬಂಧಿಸಿದಂತೆ ನೀತಿಯ ಪ್ರಶ್ನೆಗಳ ಮೇಲೆ ಸ್ವಪ್ರೇರಣೆಯಿಂದಾಗಲಿ ಅಥವಾ ರಾಜ್ಯ ಸರ್ಕಾರದ ಕೋರಿಕೆಯ ಮೇಲಾಗಲಿ, ಯಾವುದೇ ರಾಜ್ಯ ಸರ್ಕಾರಕ್ಕೆ ಸೂಕ್ತವೆಂದು ತಾನು ಭಾವಿಸುವಂಥ ಸಲಹೆಯನ್ನು ಕೊಡಬಹುದು.

74. **ಅಪೀಲುಗಳು.**- (1) ರಿಜಿಸ್ಟ್ರಾರನು,-

(ಎ) 7ನೇ ಪ್ರಕರಣದ ಅಡಿಯಲ್ಲಿ ಚೀಟಿ ಒಪ್ಪಂದವನ್ನು ನೋಂದಣಿ ಮಾಡಲು ನಿರಾಕರಿಸಿ; ಅಥವಾ

(ಬಿ) 9ನೇ ಪ್ರಕರಣದ (2)ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲು ನಿರಾಕರಿಸಿ; ಅಥವಾ

(ಸಿ) 20ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ಅಥವಾ 31ನೇ ಪ್ರಕರಣದ ಅಡಿಯಲ್ಲಿ ಯಾವುದೇ ಭದ್ರತೆಯನ್ನು ಸ್ವೀಕರಿಸಲು ನಿರಾಕರಿಸಿ; ಅಥವಾ

(ಡಿ) 20ನೇ ಅಥವಾ 31ನೇ ಪ್ರಕರಣದ ಅಡಿಯಲ್ಲಿ ವಿಧಿಸಿದ ಭದ್ರತೆಯನ್ನು ಬಿಡುಗಡೆ ಮಾಡಲು ನಿರಾಕರಿಸಿ

- ಮಾಡಿದ ತೀರ್ಮಾನದಿಂದ ಬಾಧಿತನಾದ ಯಾರೇ ಪ್ರವರ್ತಕನು ಅಂಥ ತೀರ್ಮಾನವನ್ನು ತನಗೆ ತಿಳಿಸಿದ ಮೂವತ್ತು ದಿನಗಳೊಳಗೆ ರಾಜ್ಯ ಸರ್ಕಾರಕ್ಕೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(2) 34ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿನ ರಿಜಿಸ್ಟ್ರಾರನ ಆದೇಶದಿಂದ ಬಾಧಿತನಾದ ಯಾರೇ ಪ್ರವರ್ತಕ ಅಥವಾ ಇತರ ವ್ಯಕ್ತಿಯು, ಅಂಥ ತೀರ್ಮಾನವನ್ನು ಅವನಿಗೆ ತಿಳಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ ರಾಜ್ಯ ಸರ್ಕಾರಕ್ಕೆ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗೆ ಅಥವಾ ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(3) ರಾಜ್ಯ ಸರ್ಕಾರವು ಅಥವಾ ಮೇಲೆ ಹೇಳಿದಂಥ ಅಧಿಕಾರಿಯು ಅಥವಾ ಪ್ರಾಧಿಕಾರವು, ಅಪೀಲುದಾರನಿಗೆ ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ತರುವಾಯ, ಅಪೀಲಿನ ಮೇಲೆ ಸೂಕ್ತವೆಂದು ಅದು ಅಥವಾ ಅವನು ಭಾವಿಸುವಂಥ ಆದೇಶ ಮಾಡಬಹುದು ಮತ್ತು ಅಂಥ ಆದೇಶವು ಅಂತಿಮವಾದುದಾಗಿರತಕ್ಕದ್ದು.

75. **ದಸ್ತಾವೇಜುಗಳನ್ನು ಸಲ್ಲಿಸುವುದಕ್ಕಾಗಿ ಕಾಲಾವಧಿ ವಿಸ್ತರಣೆ ಮಾಡಲು ರಿಜಿಸ್ಟ್ರಾರನ ಅಧಿಕಾರಗಳು.–** ರಿಜಿಸ್ಟ್ರಾರನು, ತನ್ನ ವಿವೇಚನಾನುಸಾರ ಮತ್ತು 28ನೇ ಪ್ರಕರಣದ (3)ನೇ ಉಪ–ಪ್ರಕರಣದ, 29ನೇ ಪ್ರಕರಣದ (2)ನೇ ಉಪ–ಪ್ರಕರಣದ, 37ನೇ ಪ್ರಕರಣದ ಅಥವಾ 41ನೇ ಪ್ರಕರಣದ ಅಡಿಯಲ್ಲಿ ದಸ್ತಾವೇಜುಗಳನ್ನು ಸಲ್ಲಿಸುವುದಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಪ್ರವರ್ತಕನು ಲಿಖಿತ ಅರ್ಜಿಯನ್ನು ಸಲ್ಲಿಸಿದಾಗ, ಅಂಥ ದಸ್ತಾವೇಜುಗಳ ಪ್ರತಿಗಳನ್ನು ಸಲ್ಲಿಸಲು ಹದಿನೈದು ದಿನಗಳಿಗೆ ಮೀರದ ಹೆಚ್ಚಿನ ಅವಧಿಯನ್ನು ಅನುಮತಿಸಬಹುದು.

76. **ದಂಡಗಳು.–** (1) 4,5,8,9,11,12,13,14,19,20,22,24,30,31ನೇ ಪ್ರಕರಣಗಳ, 33ನೇ ಪ್ರಕರಣದ (4)ನೇ ಉಪ–ಪ್ರಕರಣದ, 46, 47ನೇ ಪ್ರಕರಣಗಳ ಅಥವಾ 61ನೇ ಪ್ರಕರಣದ (5)ನೇ ಉಪ–ಪ್ರಕರಣದ ಯಾವುವೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘನೆಗೆ ದುಷ್ಪ್ರೇರೇಪಿಸುವ ಯಾರೇ ಆಗಲಿ, ಅಪರಾಧ ನಿರ್ಣಯವಾದ ಆನಂತರ, ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(2) ಯಾರೇ ಪ್ರವರ್ತಕನು,–

(ಎ) ಈ ಅಧಿನಿಯಮದ ಅಡಿಯಲ್ಲಿ ಸಲ್ಲಿಸುವುದಕ್ಕೆ ಅಗತ್ಯಪಡಿಸಲಾದ ಯಾವುದೇ ದಸ್ತಾವೇಜನ್ನು, ಅದಕ್ಕಾಗಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಅಥವಾ ಅನುಮತಿಸಬಹುದಾದಂಥ ಹೆಚ್ಚಿನ ಕಾಲದೊಳಗೆ ದಾಖಲು ಮಾಡಲು ವಿಫಲನಾದರೆ; ಅಥವಾ

(ಬಿ) ಯಾವ ದಿನಾಂಕದಂದು, ಸಮಯದಲ್ಲಿ ಮತ್ತು ಸ್ಥಳದಲ್ಲಿ ಚೀಟಿ ಡ್ರಾ ಮಾಡಬೇಕಾಗಿದೆಯೋ ಆ ದಿನಾಂಕ, ಸಮಯ ಮತ್ತು ಸ್ಥಳಕ್ಕೆ ಸಂಬಂಧಿಸಿದಂತೆ ಚೀಟಿ ಒಪ್ಪಂದದ ಅಗತ್ಯತೆಗಳನ್ನು ಪಾಲಿಸಲು ವಿಫಲನಾದರೆ ಅಥವಾ 38ನೇ ಪ್ರಕರಣದ (3)ನೇ ಉಪ–ಪ್ರಕರಣದ ಅಡಿಯಲ್ಲಿ ನೀಡಲಾದ ಯಾವುದೇ ನಿರ್ದೇಶನದ ಅಗತ್ಯತೆಗಳನ್ನು ಪಾಲಿಸಲು ವಿಫಲನಾದರೆ; ಅಥವಾ

(ಸಿ) ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಇತರ ಅಗತ್ಯತೆಯನ್ನು ಉಲ್ಲಂಘಿಸಿದರೆ ಅಥವಾ ಪಾಲಿಸಲು ವಿಫಲನಾದರೆ

– ಅಪರಾಧ ನಿರ್ಣಯವಾದ ಮೇಲೆ, ಮೂರು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ದಾಖಲು ಮಾಡಲು, ಅಗತ್ಯಪಡಿಸಲಾದ ಯಾವುದೇ ದಸ್ತಾವೇಜಿನಲ್ಲಿನ ಯಾವುದೇ ಮುಖ್ಯ ವಿವರವನ್ನು ಉದ್ದೇಶಪೂರ್ವಕವಾಗಿ ಯಾರಾದರೂ ಸುಳ್ಳು ನಿರೂಪಣೆ ಮಾಡಿದರೆ, ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಐದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

77. **ಎರಡನೆಯ ಮತ್ತು ತರುವಾಯದ ಅಪರಾಧ ನಿರ್ಣಯಗಳಿಗಾಗಿ ದಂಡ.–** 76ನೇ ಪ್ರಕರಣದ (1)ನೇ ಅಥವಾ (3)ನೇ ಉಪ–ಪ್ರಕರಣದ ಅಡಿಯಲ್ಲಿನ ಅಪರಾಧದ ಅಪರಾಧಿಯೆಂದು ನಿರ್ಣೀತನಾದ ಯಾರೇ ವ್ಯಕ್ತಿಯು, ಸದರಿ ಉಪ–ಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧದ ಅಪರಾಧಿಯೆಂದು ಮತ್ತೆ ನಿರ್ಣೀತನಾದರೆ, ಅವನು ಎರಡನೆಯ ಅಥವಾ ತರುವಾಯದ ಪ್ರತಿಯೊಂದು ಅಪರಾಧಕ್ಕಾಗಿ ಎರಡು ವರ್ಷಗಳಿಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಸಹ ಗುರಿಯಾಗತಕ್ಕದ್ದು.

78. **ಜುಲ್ಮಾನೆಯ ಬಳಕೆ ವಿನಿಯೋಗ.–** ಈ ಅಧಿನಿಯಮದ ಅಡಿಯಲ್ಲಿ ಯಾವುದೇ ಜುಲ್ಮಾನೆಯನ್ನು ವಿಧಿಸುವ ನ್ಯಾಯಾಲಯವು ಪೂರ್ಣ ಜುಲ್ಮಾನೆಯನ್ನು ಅಥವಾ ಅದರ ಯಾವುದೇ ಭಾಗವನ್ನು ವ್ಯವಹರಣೆಗಳ ಖರ್ಚಿಗಾಗಿ ಅಥವಾ ಅದರ ಸಂದಾಯಕ್ಕಾಗಿ ವಿನಿಯೋಗಿಸತಕ್ಕದ್ದೆಂದು ನಿರ್ದೇಶಿಸಬಹುದು.

79. **ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ, ಅಪರಾಧವನ್ನು ಮಾಡಿದ ಸಮಯದಲ್ಲಿ ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದಕ್ಕೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ಬಗ್ಗೆ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ತಮ್ಮ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ಅದಕ್ಕನುಸಾರವಾಗಿ ದಂಡಿತರಾಗತಕ್ಕದ್ದು:

ಪರಂತು, ಅಂಥ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು ರುಜುವಾತುಪಡಿಸಿದರೆ, ಈ ಉಪ–ಪ್ರಕರಣದಲ್ಲಿರುವುದು ಯಾವುದೂ ಅಂಥ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಪಡಿಸತಕ್ಕದ್ದಲ್ಲ.

(2) ಉಪ–ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವನ್ನು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ಅಥವಾ ಅವರ ಯಾವುದೇ ನಿರ್ಲಕ್ಷ್ಯದ ಕಾರಣದಿಂದ ಅದನ್ನು ಮಾಡಲಾಗಿದೆಯೆಂದು ಆರೋಪಿಸಿರುವುದು ರುಜುವಾತಾದಲ್ಲಿ ಅಂಥ ನಿರ್ದೇಶಕ, ವ್ಯವಸ್ಥಾಪಕ ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಕೂಡ ಅ ಅಪರಾಧದ ಬಗ್ಗೆ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವರು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ" ಎಂದರೆ, ಯಾವುದೇ ನಿಗಮಿತ ನಿಕಾಯವನ್ನು ಮತ್ತು ಫರ್ಮ್‌ನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿಗೆ ಸಂಬಂಧಿಸಿದಂತೆ "ನಿರ್ದೇಶಕ" ಎಂದರೆ, ಆ ಫರ್ಮಿನ ಒಬ್ಬ ಪಾಲುದಾರ.

**80. ಅಪರಾಧಗಳ ನ್ಯಾಯಿಕ ಗ್ರಹಿಕೆ.**– (1) 11ನೇ ಪ್ರಕರಣದ ಅಡಿಯಲ್ಲಿನ ಎಲ್ಲಾ ಅಪರಾಧಗಳು ಸಂಜ್ಞೇಯಕ್ಕೆ ಒಳಪಡಬಹುದಾದವುಗಳಾಗಿರತಕ್ಕದ್ದು.

(2) ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟನ ಅಥವಾ ಪ್ರಥಮ ದರ್ಜೆಯ ನ್ಯಾಯಿಕ ಮ್ಯಾಜಿಸ್ಟ್ರೇಟನ ನ್ಯಾಯಾಲಯಕ್ಕಿಂತ ಕೆಳ ದರ್ಜೆಯ ಯಾವುದೇ ನ್ಯಾಯಾಲಯವು ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಯಾವುದೇ ಅಪರಾಧದ ವಿಚಾರಣೆ ನಡೆಸತಕ್ಕದ್ದಲ್ಲ.

**81. ಅಪರಾಧಗಳನ್ನು ರಾಜಿ ಮಾಡಿಸಲು ಅಧಿಕಾರ.**– (1) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾರೇ ಅಧಿಕಾರಿಯು, ಈ ಅಧಿನಿಯಮದ ಅಡಿಯಲ್ಲಿ ಕ್ರಿಮಿನಲ್ ವ್ಯವಹರಣೆಗಳನ್ನು ಹೂಡುವುದಕ್ಕೆ ಮುಂಚೆಯಾಗಲಿ ಅಥವಾ ಆನಂತರವಾಗಲಿ, ಈ ಅಧಿನಿಯಮದ ಅಡಿಯಲ್ಲಿನ ಅಪರಾಧ ಮಾಡಿದ ಅಥವಾ ಅಪರಾಧ ಮಾಡಿರುವನೆಂದು ಯುಕ್ತವಾಗಿ ಶಂಕಿಸಲಾಗಿರುವ ವ್ಯಕ್ತಿಯಿಂದ, ಅಂಥ ಅಪರಾಧದ ರಾಜಿ ಮಾಡಿಸಿದ್ದಕ್ಕಾಗಿ ನಿಯಮಿಸಬಹುದಾದಂಥ ಮೊಬಲಗನ್ನು ಮೀರದಷ್ಟು ಹಣವನ್ನು ಸ್ವೀಕರಿಸಬಹುದು.

(2) ಉಪ–ಪ್ರಕರಣ (1)ರಲ್ಲಿ ಅಪರಾಧವನ್ನು ರಾಜಿ ಮಾಡಿಸಿರುವಲ್ಲಿ ಅಪರಾಧಿಯನ್ನು, ಅವನು ಅಭಿರಕ್ಷೆಯಲ್ಲಿದ್ದರೆ, ಬಿಡುಗಡೆ ಮಾಡತಕ್ಕದ್ದು ಮತ್ತು ಅಂಥ ಅಪರಾಧಕ್ಕೆ ಸಂಬಂಧಪಟ್ಟಂತೆ ಅವನ ವಿರುದ್ಧ ಯಾವುದೇ ಹೆಚ್ಚಿನ ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

**82. ಯಾವುದೇ ಸ್ಥಳವನ್ನು ಪ್ರವೇಶಿಸಲು ಮತ್ತು ಶೋಧಿಸಲು ಮತ್ತು ಯಾವುದೇ ದಸ್ತಾವೇಜುಗಳನ್ನು ಅಭಿಗ್ರಹಿಸಲು ಅಧಿಕಾರ.**– (1) ಯಾರೇ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಯಾವುದೇ ಸ್ಥಳದಲ್ಲಿ ಚೀಟಿ ನಡೆಸುತ್ತಿರುವನೆಂದು, ಅಥವಾ ನಡೆಸುವುದಕ್ಕಾಗಿ ಜವಾಬ್ದಾರನಾಗಿದ್ದಾನೆಂದು ಸಂಶಯಪಡಲು ಕಾರಣವಿದ್ದರೆ, ಅವನು ಲಿಖಿತದಲ್ಲಿ ಕಾರಣಗಳನ್ನು ದಾಖಲಿಸಿ ಮತ್ತು ಯಾವುದೇ ಯುಕ್ತ ಸಮಯದಲ್ಲಿ ಅಂಥ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು ಮತ್ತು ಅವಶ್ಯಕವಾಗಬಹುದಾದಂಥ ಪುಸ್ತಕಗಳು, ರಿಜಿಸ್ಟರ್‌ಗಳು, ಲೆಕ್ಕಪತ್ರಗಳು ಅಥವಾ ದಸ್ತಾವೇಜುಗಳನ್ನು ರಿಜಿಸ್ಟ್ರಾರ್ ಅಥವಾ ಈ ಬಗ್ಗೆ ಅವನಿಂದ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಯು ವಶಕ್ಕೆ ತೆಗೆದುಕೊಳ್ಳಬಹುದು.

(2) ರಿಜಿಸ್ಟ್ರಾರ್ ಅಥವಾ ಈ ಬಗ್ಗೆ ಅವನಿಂದ ಅಧಿಕೃತಗೊಂಡ ಅಧಿಕಾರಿಯು ಪೊಲೀಸ್ ಠಾಣೆಯ ಪ್ರಭಾರಿ ಅಧಿಕಾರಿಯ ನೆರವನ್ನು ಕೋರಬಹುದು ಮತ್ತು (1)ನೇ ಉಪ–ಪ್ರಕರಣದ ಅಡಿಯಲ್ಲಿನ ತನ್ನ ಕರ್ತವ್ಯಗಳ ನಿರ್ವಹಣೆಯಲ್ಲಿ ಪೊಲೀಸ್ ಅಧಿಕಾರಿಗಳನ್ನು ಅವನ ಜೊತೆಗೆ ಕರೆದುಕೊಂಡು ಹೋಗಬಹುದು ಮತ್ತು ಸಹಾಯವನ್ನು ಪಡೆಯಬಹುದು.

(3) (1)ನೇ ಉಪ–ಪ್ರಕರಣದ ಅಡಿಯಲ್ಲಿ ಎಲ್ಲಾ ಶೋಧನೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳಿಗನುಸಾರವಾಗಿ ಮಾಡತಕ್ಕದ್ದು.

**83. ಅಧಿಕಾರಿಗಳು ಲೋಕ ನೌಕರರಾಗಿರುವುದು.**– ರಿಜಿಸ್ಟ್ರಾರ್ ಮತ್ತು ಈ ಅಧಿನಿಯಮದ ಅಡಿಯಲ್ಲಿನ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಲು ರಾಜ್ಯ ಸರ್ಕಾರದಿಂದ ನೇಮಕಗೊಂಡ ಎಲ್ಲಾ ಅಧಿಕಾರಿಗಳನ್ನು ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರರೆಂದು ಭಾವಿಸತಕ್ಕದ್ದು.

**84. ಅಧಿಕಾರವನ್ನು ವಹಿಸಿಕೊಡಲು ಅಧಿಕಾರ.**– ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳ ಅಡಿಯಲ್ಲಿ, ತಾನು ಚಲಾಯಿಸಬಹುದಾದ (ನಿಯಮಗಳನ್ನು ರಚಿಸುವ ಅಧಿಕಾರಗಳನ್ನು ಹೊರತುಪಡಿಸಿ) ಯಾವುದೇ ಅಧಿಕಾರವನ್ನು ಅಂಥ ಅಧಿಸೂಚನೆಯಲ್ಲಿ ಯಾವುವಾದರೂ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ನಿರ್ದಿಷ್ಟಪಡಿಸಬಹುದಾದರೆ, ಅವುಗಳಿಗೆ ಒಳಪಟ್ಟು, ರಾಜ್ಯ ಸರ್ಕಾರದ ಯಾರೇ ಅಧಿಕಾರಿಯು ಚಲಾಯಿಸಬಹುದೆಂದು ನಿರ್ದೇಶಿಸಬಹುದು.

**85. ಈ ಅಧಿನಿಯಮವು ಕೆಲವು ಚೀಟಿಗಳಿಗೆ ಅನ್ವಯವಾಗತಕ್ಕದ್ದಲ್ಲ.**– ಈ ಅಧಿನಿಯಮದಲ್ಲಿರುವುದು ಯಾವುದೂ,–

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಆರಂಭಿಸಲಾದ ಯಾವುದೇ ಚೀಟಿಗೆ; ಅಥವಾ

(ಬಿ) ಯಾವ ಚೀಟಿಯ ಮೊತ್ತವು ನೂರು ರೂಪಾಯಿಗಳಿಗೆ ಮೀರುವುದಿಲ್ಲವೋ ಅಥವಾ ಒಬ್ಬನೇ ಪ್ರವರ್ತಕನು ಎರಡು ಅಥವಾ ಹೆಚ್ಚಿನ ಚೀಟಿಗಳನ್ನು ಏಕಕಾಲದಲ್ಲಿ ಆರಂಭಿಸಿದ್ದರೆ ಅಥವಾ ನಡೆಸುತ್ತಿದ್ದರೆ ಅವುಗಳ ಒಟ್ಟು ಮೊತ್ತವು ಒಂದು ನೂರು ರೂಪಾಯಿಗಳಿಗೆ ಮೀರುವುದಿಲ್ಲವೋ ಆ ಯಾವುದೇ ಚೀಟಿಗೆ

– ಸಂಬಂಧಪಟ್ಟಂತೆ ಅನ್ವಯವಾಗತಕ್ಕದ್ದಲ್ಲ.

**86. ಬ್ಯಾಂಕುಗಳು ಚೀಟಿ ವ್ಯವಹಾರವನ್ನು ನಡೆಸತಕ್ಕದಲ್ಲ.**– (1) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಯಾವುದೇ ಬ್ಯಾಂಕು ಈ ಅಧಿನಿಯಮದ ಪ್ರಾರಂಭದ ತರುವಾಯ ಚೀಟಿ ವ್ಯವಹಾರವನ್ನು ಪ್ರಾರಂಭಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

(2) ಯಾವುದೇ ಬ್ಯಾಂಕು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಚೀಟಿಯನ್ನು ಪ್ರಾರಂಭಿಸಲಾಗಿರುವಲ್ಲಿ ಅಂಥ ಚೀಟಿಯು ಅಂಥ ಪ್ರಾರಂಭದ ನಂತರವೂ ಅದು ಪೂರ್ಣಗೊಳ್ಳುವವರೆಗೆ ಮುಂದುವರಿಯಬಹುದು ಮತ್ತು ಚೀಟಿ ಒಪ್ಪಂದದ

ಉಪಬಂಧಗಳೇನಾದರೂ ಇದ್ದರೆ ಮತ್ತು ಈ ಅಧಿನಿಯಮದ ಪ್ರಾರಂಭದ ನಿಕಟ ಪೂರ್ವದಲ್ಲಿ ಅದಕ್ಕೆ ಅನ್ವಯವಾಗುವಂಥ ಕಾನೂನುಗಳೇನಾದರೂ ಇದ್ದರೆ ಅವು ಅಂಥ ಚೀಟಿಗೆ ಅನ್ವಯವಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ "ಬ್ಯಾಂಕ್" ಎಂದರೆ ಭಾರತದ ರಿಸರ್ವ್ ಬ್ಯಾಂಕ್ ಅಧಿನಿಯಮ, 1934 (1934ರ 2)ರ 2ನೇ ಪ್ರಕರಣದ (ಬಿii) ಖಂಡದಲ್ಲಿ ಪರಿಭಾಷಿಸಲಾದಂತೆ ಅನುಮೋದಿತ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್.

87. **ವಿನಾಯಿತಿಗೊಳಿಸಲು ಅಧಿಕಾರ.–** ರಾಜ್ಯ ಸರ್ಕಾರವು ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಎಲ್ಲಾ ಅಥವಾ ಯಾವುವೇ ಉಪಬಂಧಗಳಿಂದ ಯಾರೇ ವ್ಯಕ್ತಿಗೆ ಅಥವಾ ವ್ಯಕ್ತಿಗಳ ವರ್ಗಕ್ಕೆ ಅಥವಾ ಯಾವುದೇ ಚೀಟಿಯ ಅಥವಾ ಚೀಟಿಗಳ ವರ್ಗಕ್ಕೆ ವಿನಾಯಿತಿ ನೀಡಬಹುದು.

88. **ಈ ಅಧಿನಿಯಮದ ಅಡಿಯಲ್ಲಿ ಕೈಗೊಳ್ಳಲಾದ ಕ್ರಮಕ್ಕೆ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಿದ ನಿಯಮಗಳನ್ನು ಅನುಸರಿಸುವಾಗ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯಕ್ಕೆ ಸಂಬಂಧಪಟ್ಟಂತೆ ಈ ಅಧಿನಿಯಮದ ಅಡಿಯಲ್ಲಿನ ಯಾವುದೇ ಅಧಿಕಾರಗಳನ್ನು ಚಲಾಯಿಸುವ ಅಥವಾ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸುವ ರಾಜ್ಯ ಸರ್ಕಾರದ, ರಿಜಿಸ್ಟ್ರಾರನ ಅಥವಾ ರಾಜ್ಯ ಸರ್ಕಾರದ ಅಥವಾ ರಿಸರ್ವ್ ಬ್ಯಾಂಕಿನ ಇತರ ಅಧಿಕಾರಿಗಳ ಅಥವಾ ಅದರ ಯಾರೇ ಅಧಿಕಾರಿಗಳ ವಿರುದ್ಧ ಯಾವುದೇ ದಾವೆಗೆ, ಪ್ರಾಸಿಕ್ಯೂಷನ್‌ಗೆ ಅಥವಾ ಕಾನೂನು ವ್ಯವಹರಣೆಗೆ ಅವಕಾಶವಿರತಕ್ಕದ್ದಲ್ಲ.

89. **ನಿಯಮಗಳನ್ನು ರಚಿಸಲು ಅಧಿಕಾರ.–** (1) ರಾಜ್ಯ ಸರ್ಕಾರವು, ರಿಸರ್ವ್ ಬ್ಯಾಂಕಿನೊಂದಿಗೆ ಸಮಾಲೋಚಿಸಿ, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಅದರಲ್ಲೂ ಮುಖ್ಯವಾಗಿ, ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳಲ್ಲಿ ಈ ಮುಂದಿನ ಎಲ್ಲ ಅಥವಾ ಯಾವುದೇ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು, ಎಂದರೆ:–

(ಎ) 4ನೇ ಪ್ರಕರಣದ (2)ನೇ ಉಪ–ಪ್ರಕರಣದಡಿಯಲ್ಲಿ ಪೂರ್ವ ಮಂಜೂರಾತಿಯನ್ನು ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಅರ್ಜಿ ಪಡೆಯುವುದಕ್ಕಾಗಿ ಸಲ್ಲಿಸಬಹುದೋ ಆ ಅರ್ಜಿಯ ನಮೂನೆ ಮತ್ತು ಆ ರೀತಿ;

(ಬಿ) 6ನೇ ಪ್ರಕರಣದ (1)ನೇ ಉಪ–ಪ್ರಕರಣದ (ಕ್ಯೂ) ಖಂಡದ ಅಡಿಯಲ್ಲಿ ಚೀಟಿ ಒಪ್ಪಂದದಲ್ಲಿ ಒಳಗೊಂಡಿರಬಹುದಾದ ಹೆಚ್ಚುವರಿ ವಿವರಗಳು;

(ಸಿ) 17ನೇ ಪ್ರಕರಣದ ಅಡಿಯಲ್ಲಿ ಡ್ರಾ ವ್ಯವಹರಣೆಗಳ ನಡವಳಿಯಲ್ಲಿ ಒಳಗೊಂಡಿರಬಹುದಾದ ವಿವರಗಳು;

(ಡಿ) 20ನೇ ಪ್ರಕರಣದ ಅಡಿಯಲ್ಲಿ ಭದ್ರತೆಯನ್ನು ಒದಗಿಸುವ ಉದ್ದೇಶಕ್ಕಾಗಿ ರಿಜಿಸ್ಟ್ರಾರನು ಧಾನ್ಯ ಚೀಟಿಗೆ ಸಂಬಂಧಿಸಿದಂತೆ ಮೌಲ್ಯಮಾಪನ ಮಾಡುವ ವಿಧಾನ;

(ಇ) 20ನೇ ಪ್ರಕರಣದ ಅಡಿಯಲ್ಲಿ ಪ್ರವರ್ತಕನು ಒದಗಿಸಿದ ಭದ್ರತೆಯನ್ನು ಬಿಡುಗಡೆ ಮಾಡುವಾಗ ರಿಜಿಸ್ಟ್ರಾರನು ಅನುಸರಿಸಬಹುದಾದ ಪ್ರಕ್ರಿಯೆ;

(ಎಫ್) 23ನೇ ಪ್ರಕರಣದ ಅಡಿಯಲ್ಲಿ ಪ್ರವರ್ತಕನು ನಿರ್ವಹಿಸಿರಬಹುದಾದ ರಿಜಿಸ್ಟರ್‌ಗಳು ಮತ್ತು ಪುಸ್ತಕಗಳು ಮತ್ತು ಅಂಥ ರಿಜಿಸ್ಟರ್‌ಗಳನ್ನು ಮತ್ತು ಪುಸ್ತಕಗಳನ್ನು ಯಾವ ನಮೂನೆಯಲ್ಲಿ ಇಡಬೇಕೋ ಆ ನಮೂನೆ;

(ಜಿ) 24ನೇ ಪ್ರಕರಣದ ಅಡಿಯಲ್ಲಿ ಚೀಟಿ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಜಮಾ ಖರ್ಚು ಪಟ್ಟಿ ಮತ್ತು ಲಾಭ ಮತ್ತು ನಷ್ಟ ಲೆಕ್ಕಪತ್ರಗಳನ್ನು ಯಾವ ಕಾಲದಲ್ಲಿ ಸಲ್ಲಿಸಬೇಕೋ ಆ ಕಾಲ;

(ಹೆಚ್) 28ನೇ ಪ್ರಕರಣದ ಅಡಿಯಲ್ಲಿ ಸುಸ್ತಿ ವಂತಿಗೆದಾರನು ಸುಸ್ತಿ ಕಂತಿನ ಮೇಲೆ ಯಾವ ದರದಲ್ಲಿ ಬಡ್ಡಿ ಸಂದಾಯ ಮಾಡಬೇಕೋ ಆ ಬಡ್ಡಿದರ;

(ಐ) 49ನೇ ಪ್ರಕರಣದ ಅಡಿಯಲ್ಲಿ ಚೀಟಿಗಳ ಪರಿಸಮಾಪನಕ್ಕಾಗಿ ಅರ್ಜಿಯಲ್ಲಿ ಇರಬೇಕಾದ ವಿವರಗಳು;

(ಜೆ) ಅಧ್ಯಾಯ–X ರ ಅಡಿಯಲ್ಲಿ ಚೀಟಿಗಳ ಪರಿಸಮಾಪನಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆ;

(ಕೆ) 63ನೇ ಪ್ರಕರಣದ ಅಡಿಯಲ್ಲಿ ಸಂದಾಯ ಮಾಡಬೇಕಾದ ಫೀಜು;

(ಎಲ್) ಚೀಟಿ ವ್ಯವಹಾರಗಳ ಜಮಾ ಖರ್ಚು ಪಟ್ಟಿಯ ಪತ್ರಗಳ ಮತ್ತು ಲಾಭ ಮತ್ತು ನಷ್ಟ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ಮಾಡುವುದು ಮತ್ತು ಲೆಕ್ಕಪರಿಶೋಧನಾ ಪ್ರಮಾಣಪತ್ರಗಳನ್ನು ನೀಡುವುದು;

(ಎಂ) 64ನೇ ಪ್ರಕರಣದ ಅಡಿಯಲ್ಲಿ ವಿವಾದವನ್ನು ರಿಜಿಸ್ಟ್ರಾರನಿಗೆ ಯಾವ ನಮೂನೆಯಲ್ಲಿ ಮತ್ತು ಯಾವ ರೀತಿಯಲ್ಲಿ ಕಳುಹಿಸಬೇಕೋ ಆ ನಮೂನೆ ಮತ್ತು ಆ ರೀತಿ;

(ಎನ್) ರಿಜಿಸ್ಟ್ರಾರ್ ಅಥವಾ ಆತನ ನಾಮನಿರ್ದೇಶಿತನು, 64ನೇ ಪ್ರಕರಣದ ಅಡಿಯಲ್ಲಿ ತನಗೆ ಕಳುಹಿಸಿದ ವಿವಾದಗಳನ್ನು ಇತ್ಯರ್ಥಗೊಳಿಸುವುದಕ್ಕಾಗಿ ಅನುಸರಿಸಬೇಕಾದ ಪ್ರಕ್ರಿಯೆ;

(ಓ) 67ನೇ ಪ್ರಕರಣದ (1)ನೇ ಉಪ-ಪ್ರಕರಣದ (ಎಫ್) ಖಂಡದಲ್ಲಿ ಉಲ್ಲೇಖಿಸಲಾದ ವಿಷಯಗಳು;

(ಪಿ) 81ನೇ ಪ್ರಕರಣದ ಅಡಿಯಲ್ಲಿ ಯಾವ ಷರತ್ತುಗಳಿಗೆ ಮತ್ತು ಯಾವ ಮೊಬಲಗಿನ ಸಂದಾಯಕ್ಕೆ ಒಳಪಟ್ಟು ಅಪರಾಧಗಳನ್ನು ರಾಜಿ ಮಾಡಿಸಬಹುದೋ ಆ ಷರತ್ತುಗಳು ಮತ್ತು ಅಂಥ ಮೊತ್ತ;

(ಕ್ಯೂ) ಈ ಅಧಿನಿಯಮದ ಅಡಿಯಲ್ಲಿ ಸಲ್ಲಿಸಬಹುದಾದ ಅಪೀಲಿನ ನಮೂನೆ ಮತ್ತು ರೀತಿ ಮತ್ತು ಅಂಥ ಅಪೀಲಿಗಾಗಿ ಸಂದಾಯ ಮಾಡಬೇಕಾದ ಫೀಜು;

(ಆರ್) ಈ ಅಧಿನಿಯಮದ ಅಡಿಯಲ್ಲಿ ನೋಟೀಸ್‌ಗಳನ್ನು ಹೊರಡಿಸುವುದು ಮತ್ತು ಜಾರಿ ಮಾಡುವುದು ಅಥವಾ ಇತರೆ ಪ್ರಕ್ರಿಯೆಯನ್ನು ಪ್ರಾರಂಭಿಸುವುದು;

(ಎಸ್) ಈ ಅಧಿನಿಯಮದ ಅಡಿಯಲ್ಲಿ ಸಂದಾಯವಾಗಬೇಕಾದ ಯಾವುದೇ ಮೊತ್ತವನ್ನು ಸ್ವೀಕರಿಸಲು ಪ್ರಕ್ರಿಯೆ ಮತ್ತು ಅದನ್ನು ಸ್ವೀಕರಿಸುವ ರೀತಿ;

(ಟಿ) ಯಾವ ಇತರ ವಿಷಯವನ್ನು ನಿಯಮಿಸಬೇಕಾಗಿದೆಯೋ ಅಥವಾ ನಿಯಮಿಸಬಹುದೆಂದು ಅಗತ್ಯಪಡಿಸಲಾಗಿದೆಯೋ ಆ ಯಾವುದೇ ಇತರ ವಿಷಯ.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲವು ಅದು ಎರಡು ಸದನವನ್ನೊಳಗೊಂಡಿರುವಲ್ಲಿ ಪ್ರತಿಯೊಂದು ಸದನದ ಮುಂದೆ ಅಥವಾ ಅಂಥ ವಿಧಾನಮಂಡಲವು ಏಕ ಸದನವನ್ನು ಒಳಗೊಂಡಿರುವಲ್ಲಿ ಆ ಸದನದ ಮುಂದೆ ಮಂಡಿಸತಕ್ಕದ್ದು.

**90. ನಿರಸನ ಮತ್ತು ಉಳಿಸುವಿಕೆ.–** (1) ಕೇಂದ್ರಾಡಳಿತ ಪ್ರದೇಶಗಳಾದ ಚಂಡೀಘಡ್ ಮತ್ತು ದೆಹಲಿ ಸಂಘ ರಾಜ್ಯ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಆಂಧ್ರಪ್ರದೇಶ ಚಿಟ್ ಫಂಡ್‌ಗಳ ಅಧಿನಿಯಮ, 1971 (1971ರ ಆಂಧ್ರಪ್ರದೇಶ ಅಧಿನಿಯಮ ಸಂಖ್ಯೆ 9), ಕೇರಳ ಚಿಟ್ ಫಂಡ್‌ಗಳ ಅಧಿನಿಯಮ, 1975 (1975ರ ಕೇರಳ ಅಧಿನಿಯಮದ ಸಂಖ್ಯೆ 23), ಮಹಾರಾಷ್ಟ್ರ ಚಿಟ್ ಫಂಡ್‌ಗಳ ಅಧಿನಿಯಮ, 1974 (ಮಹಾರಾಷ್ಟ್ರ ಅಧಿನಿಯಮ, 1974ರ LV) ತಮಿಳುನಾಡು ರಾಜ್ಯದಲ್ಲಿ ಜಾರಿಯಲ್ಲಿರುವ ತಮಿಳುನಾಡು ಚಿಟ್ ಫಂಡ್‌ಗಳ ಅಧಿನಿಯಮ, 1961 (ತಮಿಳುನಾಡು ಅಧಿನಿಯಮ 1961ರ 24) ರಾಷ್ಟ್ರೀಯ ರಾಜಧಾನಿ ಕ್ಷೇತ್ರದಲ್ಲಿ ಜಾರಿಯಲ್ಲಿರುವ ಉತ್ತರ ಪ್ರದೇಶ ಚಿಟ್ ಫಂಡ್‌ಗಳ ಅಧಿನಿಯಮ, 1975 (ಉತ್ತರ ಪ್ರದೇಶ ಅಧಿನಿಯಮದ 1975ರ 53), ಗೋವಾ, ದಮನ್ ಮತ್ತು ದಿವು ಚಿಟ್ ಫಂಡ್‌ಗಳ ಅಧಿನಿಯಮ, 1973 (ಗೋವಾ, ದಮನ್ ಮತ್ತು ದಿವು ಅಧಿನಿಯಮ 1973ರ 16), ಮತ್ತು ಪಾಂಡಿಚೇರಿ ಚಿಟ್ ಫಂಡ್‌ಗಳ ಅಧಿನಿಯಮ, 1966 (ಪಾಂಡಿಚೇರಿ ಅಧಿನಿಯಮ 1966ರ 18) ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣದ ಉಪಬಂಧಗಳು, ಹಾಗೆ ನಿರಸನಗೊಳಿಸಿದ್ದ ಅಂಥ ಪ್ರತಿಯೊಂದು ಅಧಿನಿಯಮವು ಕೇಂದ್ರ ಅಧಿನಿಯಮವಾಗಿದ್ದಿದ್ದರೆ ಹೇಗೆ ಅನ್ವಯವಾಗುತ್ತಿದ್ದವೋ ಹಾಗೆಯೇ ಅಂಥ ನಿರಸನಕ್ಕೆ ಸಹ ಅನ್ವಯವಾಗತಕ್ಕದ್ದು.

(2) ಹಾಗೆ ನಿರಸನಗೊಂಡಿದ್ದರೂ (1)ನೇ ಉಪ-ಪ್ರಕರಣದಲ್ಲಿ ಹೇಳಿರುವ ಅಧಿನಿಯಮಗಳು, ಈ ಅಧಿನಿಯಮದ ಪ್ರಾರಂಭದಂದು ಜಾರಿಯಲ್ಲಿರುವ ಚೀಟಿಗಳಿಗೆ ಅಂಥ ಪ್ರಾರಂಭಕ್ಕೆ ಮುಂಚೆ ಅಂಥ ಚೀಟಿಗಳಿಗೆ ಅವುಗಳು ಅನ್ವಯವಾಗುತ್ತಿದ್ದಂತೆಯೇ ಅದೇ ರೀತಿಯಲ್ಲಿ ಅನ್ವಯವಾಗುವುದು ಮುಂದುವರಿಯತಕ್ಕದ್ದು.

## ಅನುಸೂಚಿ
### (ಪ್ರಕರಣ 24 ಅನ್ನು ನೋಡಿ)
### ಭಾಗ I ಜಮಾ ಖರ್ಚು ಪಟ್ಟಿ ನಮೂನೆ

| | ಹೊಣೆಗಳು | ಆಸ್ತಿಗಳು |
|---|---|---|
| 1. | ಬಂಡವಾಳ | 1. ನಗದು ------------------------ |
| | ಅಧಿಕೃತ ------------------------------ ರೂ.<br>ಹೊರಡಿಸಲಾದ --------------------------- ರೂ.<br>ಸಂದಾಯಿತ --------------------------- ರೂ. | 2. ಬ್ಯಾಂಕುಗಳಲ್ಲಿರುವ ಶಿಲ್ಕು ------------------------<br>(ಎ) ಚಾಲ್ತಿ ಖಾತೆಯಲ್ಲಿ / ಲೆಕ್ಕದಲ್ಲಿ --------------------- ರೂ.<br>(ಬಿ) ಠೇವಣಿ ಖಾತೆಯಲ್ಲಿ ---------------------- ರೂ. |
| 2.<br><br>3. | ಮೀಸಲು ನಿಧಿ -------------------------- ರೂ.<br><br>ಠೇವಣಿಗಳು ------------------------- ರೂ. | 3. ಹೂಡಿಕೆಗಳು --------------------------- ರೂ.<br>(ಎ) ಚೀಟಿಗಳಲ್ಲಿ -------------------------- ರೂ.<br>(ಬಿ) ಸರ್ಕಾರಿ ಭದ್ರತೆಗಳಲ್ಲಿ ------------------------- ರೂ.<br>(ಸಿ) ಇತರೆ --------------------------- ರೂ. |
| 4. | ಪಡೆದ ಸಾಲಗಳು ----------------------- ರೂ. | 4. ಬಹುಮಾನಿತ ವಂತಿಗೆದಾರರಿಂದ ಬರಬೇಕಾಗಿರುವ ಷೇರು ಮೊಬಲಗು<br>(ಎ) ಭದ್ರತೆ ಪಡೆದದ್ದು -------------------------- ರೂ.<br>(ಬಿ) ಭದ್ರತೆ ಪಡೆದಿಲ್ಲದಿರುವುದು ----------------------- ರೂ. |
| 5. | ಬಹುಮಾನಿತ ಟಿಕೆಟ್‌ಗಳಲ್ಲಿ ಪ್ರವರ್ತಕನ ಹೊಣೆಗಾರಿಕೆ<br>---------------------- ರೂ. | 5. ಬಹುಮಾನಿತ ವಂತಿಗೆದಾರರಿಂದ ಬರಬೇಕಾಗಿರುವ ಬಾಕಿ :<br>(ಎ) ಭದ್ರತೆ ಪಡೆದದ್ದು ----------------------- ರೂ.<br>(ಬಿ) ಭದ್ರತೆ ಪಡೆದಿಲ್ಲದಿರುವುದು ---------------- ರೂ. |
| 6. | ಸಂದಾಯ ಮಾಡಬೇಕಾದ ಬಹುಮಾನದ ಮೊಬಲಗು ----- ರೂ. | 6. ಮುಕ್ತಾಯವಾದ ಚೀಟಿಯಲ್ಲಿ ಬಾಕಿ ಬರಬೇಕಾದ ಮೊಬಲಗು :<br>(ಎ) ಭದ್ರತೆ ಪಡೆದದ್ದು -------------------------- ರೂ<br>(ಬಿ) ಭದ್ರತೆ ಪಡೆದಿಲ್ಲದಿರುವುದು --------------------- ರೂ. |
| 7. | ಸಂದಾಯ ಮಾಡಬೇಕಾದ ಸುಸ್ತಿ ವಂತಿಗೆದಾರರ ಮೊಬಲಗು<br>-------------------------- ರೂ. | 7. ಮೊದಲೇ ಸಂದಾಯ ಮಾಡಿದ ಚೀಟಿ ಬಹುಮಾನದ ಮೊಬಲಗು<br>-------------------------- ರೂ. |
| 8. | ಸ್ವೀಕರಿಸಲಾದ ಮುಂಗಡ ವಂತಿಗೆ -------------- ರೂ. | 8. ವಂತಿಗೆದಾರರಿಗೆ ನೀಡಿದ ಸಾಲಗಳು ಮತ್ತು ಮುಂಗಡಗಳು ----- ರೂ. |
| 9. | ಬಹುಮಾನಿತರಲ್ಲದ ವಂತಿಗೆದಾರರ ಹೊಣೆ (ಬಹುಮಾನಿತರಲ್ಲದ ವಂತಿಗೆದಾರರಿಂದ ಬರಬೇಕಾದ ಬಾಕಿಗಳನ್ನು ತೋರಿಸಬೇಕು) | 9. ಕಾನೂನು ವ್ಯವಹರಣೆಗೆ ತಗುಲಿದ ವೆಚ್ಚ -------------- ರೂ. |
| 10. | ಮುಕ್ತಾಯಗೊಂಡ ಚೀಟಿಗಳಿಗೆ ಸಂದಾಯ ಮಾಡಬೇಕಾದ ಮೊಬಲಗು -------------- ರೂ. | 10. ಸ್ಥಳ -------------------------- ರೂ. |
| 11. | ಬಹುಮಾನಿತರಲ್ಲದ ವಂತಿಗೆದಾರರಿಗೆ ಸಂದಾಯವಾಗಬೇಕಾದ ಹರಾಜಿನ ಲಾಭ ------------- -- ರೂ. | 11. ಪೀಠೋಪಕರಣಗಳು ಮತ್ತು ಜೋಡಣೆಗಳು ------------- ರೂ. |

| | | |
|---|---|---|
| 12. | ಇತರ ಹೊಣೆಗಾರಿಕೆ ----------------- -------- ರೂ. | 12. ದಾಸ್ತಾನಿನಲ್ಲಿರುವ ಸ್ಟಾಂಪುಗಳು ------------------------- ರೂ. |
| 13. | ಲಾಭ ಮತ್ತು ನಷ್ಟದ ಲೆಕ್ಕ ---------------- ರೂ. | 13. ಇತರ ಆಸ್ತಿಗಳು ------------------------------ ರೂ. |
| | | 14. ಲಾಭ ಮತ್ತು ನಷ್ಟ ಲೆಕ್ಕ ------------------------------- ರೂ. |
| | ಒಟ್ಟು -------------------------- ರೂ. | ಒಟ್ಟು ------------------------------ ರೂ. |

ಜಾರಿಯಲ್ಲಿರುವ ಚೀಟಿಗಳ ಅಂದರೆ ಚಾಲ್ತಿಯಲ್ಲಿರುವ ಚೀಟಿಗಳ ಒಟ್ಟು ಚೀಟಿ ಮೊಬಲಗು

4, 5 ಮತ್ತು 6ರ ಎದುರು ತೋರಿಸಿದ ಮೊಬಲಗುಗಳಿಗೆ ಸಂಬಂಧಪಟ್ಟಂತೆ ನಿರ್ದಿಷ್ಟಪಡಿಸಬೇಕಾದ ವಿವರಗಳು .

(i) ಕಂಪನಿಯ ನಿರ್ದೇಶಕರಿಂದ ಅಥವಾ ಅಧಿಕಾರಿಗಳಿಂದ ಅಥವಾ ಯಾರೇ ವ್ಯಕ್ತಿಯೊಂದಿಗೆ ಜಂಟಿಯಾಗಿ ಆಗಲಿ ಅಥವಾ ಪ್ರತ್ಯೇಕವಾಗಿಯಾಗಿ ಆಗಲಿ ಅವರಲ್ಲಿ ಯಾರಿಂದಲಾದರೂ ಬರಬೇಕಾಗಿರುವ ಮೊಬಲಗುಗಳು.

(ii) ಯಾವ ಕಂಪೆನಿಗಳಲ್ಲಿ ಅಥವಾ ಫರ್ಮುಗಳಲ್ಲಿ ನಿರ್ದೇಶಕರುಗಳು, ಕಂಪೆನಿಯ ನಿರ್ದೇಶಕರಾಗಿ, ಫರ್ಮುಗಳ ಪಾಲುದಾರರಾಗಿ ಅಥವಾ ಖಾಸಗಿ ಕಂಪೆನಿಯಾದರೆ ಸದಸ್ಯರಾಗಿ ಹಿತಾಸಕ್ತಿ ಹೊಂದಿರುವರೋ ಅಂಥ ಕಂಪನಿಗಳಿಂದ ಅಥವಾ ಫರ್ಮುಗಳಿಂದ ಬರಬೇಕಾಗಿರುವ ಮೊಬಲಗು

## ಭಾಗ – II

### ಲಾಭ ಮತ್ತು ನಷ್ಟ ಲೆಕ್ಕದ ನಮೂನೆ

| | ವೆಚ್ಚ | | | ಆದಾಯ | |
|---|---|---|---|---|---|
| 1. | ಠೇವಣಿಗಳು, ಪಡೆದ ಸಾಲಗಳು, ಇತ್ಯಾದಿಗಳ ಮೇಲೆ ಸಂದಾಯ ಮಾಡಿದ ಬಡ್ಡಿ – ----------------- | ರೂ. | 1. | ಪ್ರವರ್ತಕನ ರುಸುಮು ---------------------- | ರೂ. |
| 2. | ವೇತನ, ಭತ್ಯೆಗಳು, ಬೋನಸ್ ಮತ್ತು ಭವಿಷ್ಯ ನಿಧಿ---- | ರೂ. | 2. | ಬೋನಸ್ ------------------------------------ | ರೂ. |
| 3. | ನಿರ್ದೇಶಕರುಗಳ ಉಪವೇಶನ ಸಂಭಾವನೆ --------- | ರೂ. | 3. | ಬಡ್ಡಿ ---------------------------------- | ರೂ. |
| 4. | ಬಾಡಿಗೆ, ತೆರಿಗೆ, ವಿಮೆ, ಲೈಟಿಂಗ್ --------------- | ರೂ. | 4. | ಕೂಗುವುದಕ್ಕೆ ಸಂಬಂಧಿಸಿದ ಲಾಭದಲ್ಲಿ ಅವಿಭಾಜ್ಯ ಆದಾಯ-- | ರೂ. |
| 5. | ಕಾನೂನು ವೆಚ್ಚಗಳು -------------------- | ರೂ. | 5. | ಬಾಡಿಗೆ ------------------------------------ | ರೂ. |
| 6. | ಅಂಚೆ ವೆಚ್ಚಗಳು, ತಂತಿ ವೆಚ್ಚಗಳು ಮತ್ತು ಸ್ಟಾಂಪುಗಳು-- | ರೂ. | 6. | ಹೂಡಿಕೆಗಳ ಮಾರಾಟದಿಂದ ಬಂದ ನಿವ್ವಳ ಲಾಭ -------- | ರೂ. |
| 7. | ಲೆಕ್ಕಪರಿಶೋಧಕರ ಸಂಭಾವನೆ ---------------- | ರೂ. | 7. | ಇತರ ಸ್ವೀಕೃತಿಗಳು ------------------------------ | ರೂ. |
| 8. | ಸಲ್ಲಿಕೆ ಶುಲ್ಕ -------------------------- | ರೂ. | 8. | ನಷ್ಟ ------------------------------------ | ರೂ. |
| 9. | ಇಳಿತಾಯ ಮತ್ತು ದುರಸ್ತಿಗಳು ------------- | ರೂ. | | | |
| 10. | ಲೇಖನ ಸಾಮಗ್ರಿ, ಮುದ್ರಣ ಮತ್ತು ಜಾಹೀರಾತು – | ರೂ. | | | |
| 11. | ಇತರ ವೆಚ್ಚ ----------------------- | ರೂ. | | | |
| 12. | ಲಾಭದ ಶಿಲ್ಕಿಗೆ ಹೋಗಬೇಕಾದುದು ----------- | ರೂ. | | | |
| | ಒಟ್ಟು ----------------------------- | ರೂ. | | ಒಟ್ಟು ------------------------------ | ರೂ. |

* * * * *